ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಮೇ 25 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 46 | ಸಂಚಿಕೆ: 39 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಮತ್ತೆ ವಕ್ಕರಿಸಿದ ಕೊರೊನಾ

■ ರಾಜ್ಯದಲ್ಲಿ ಒಂದು ಬಲಿ; ಮೈಸೂರಲ್ಲಿ ಇಬ್ಬರು ಸೇರಿ 38 ಮಂದಿಗೆ ಸೋಂಕು ■ ದೇಶದಲ್ಲಿ ಒಟ್ಟು 398 ಮಂದಿಗೆ ಕೊರೊನಾ ಬಾಧೆ ■ ರಾಜ್ಯ ಆರೋಗ್ಯ ಇಲಾಖೆ ಮಾರ್ಗಸೂಚಿ ಬಿಡುಗಡೆ ■ ಗರ್ಭಿಣಿಯರು, ಮಕ್ಕಳು, ನಾನಾ ರೋಗಗಳಿಂದ ಬಳಲುವವರು ಎಚ್ಚರ ವಹಿಸಲು ಸೂಚನೆ

ಬೆಂಗಳೂರು,ಮೇ24(ಕೆಎಂಶಿ)–ಕರ್ನಾಟಕದಲ್ಲಿ 38 ಸಕ್ರಿಯ ಕೋವಿಡ್ ಪ್ರಕರಣಗಳು ದಾಖಲಾಗಿದ್ದು, ಕೊರೊನಾ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಹೊಸದಾಗಿ ಕೋವಿಡ್–19 ಮಾರ್ಗಸೂಚಿ ಬಿಡುಗಡೆ ಮಾಡಿದೆ.

ರಾಜ್ಯದಲ್ಲಿ ಒಟ್ಟು 38 ಸಕ್ರಿಯ ಕೋವಿಡ್ ಪ್ರಕರಣಗಳ ಪೈಕಿ ಬೆಂಗಳೂರಿನಲ್ಲೇ 34 ದೃಢಪಟ್ಟಿವೆ. ಆದಾಗ್ಯೂ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ರಾಜ್ಯದಲ್ಲಿ 38 ಸಕ್ರಿಯ ಕೋವಿಡ್ ಪ್ರಕರಣಗಳು ದಾಖಲಾಗಿದ್ದು, ಅಧಿಕೃತ ಅಂಕಿ–ಅಂಶಗಳ ಪ್ರಕಾರ ಭಾರತದಲ್ಲಿ ಸಕ್ರಿಯ ಪ್ರಕರಣಗಳ ಒಟ್ಟು ಸಂಖ್ಯೆ ಒಟ್ಟು 398ರಷ್ಟಿದ್ದು, ಕೇರಳದಲ್ಲಿ ಅತೀ ಹೆಚ್ಚು 273 ಪ್ರಕರಣಗಳು ದಾಖಲಾಗಿವೆ. ಬೆಂಗಳೂರಿನ ವೈಟ್‌ಫೀಲ್ಡ್ ನಿವಾಸಿಯಾದ 84 ವರ್ಷದ ವೃದ್ಧ ಕೋವಿಡ್‌ನಿಂದ ಇಂದು ಸಾವನ್ನಪ್ಪಿದ್ದಾರೆ. ಉಸಿರಾಟದ ತೊಂದರೆ ಹಾಗೂ ಅಂಗ ವೈಫಲ್ಯದಿಂದ ಬಳಲುತ್ತಿದ್ದ ಅವರು ಮೇ 17ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದು, ಕೊನೆಗೆ ಕೋವಿಡ್‌ಗೆ ತುತ್ತಾಗಿ ಸಾವನ್ನಪಿದ್ದಾರೆ. ಇಂದು ಪತ್ತೆಯಾದ 5 ಪ್ರಕರಣಗಳಲ್ಲಿ ಬೆಂಗಳೂರಿನಲ್ಲಿ 2, ▶ 6ನೇ ಪುಟಕ್ಕೆ

ನಾಳೆಯಿಂದ ಆರ್‌ಟಿ–ಪಿಸಿಆರ್ ಟೆಸ್ಟ್

ಮಾಸ್ಕ್ ಧರಿಸಿ ಎಚ್ಚರಿಕಾ ಸಂದೇಶ ನೀಡಿದ ಸಿದ್ದರಾಮಯ್ಯ

ಮೈಸೂರು, ಮೇ 24(ಆರ್‌ಕೆ)– ರಾಜ್ಯದಲ್ಲಿ ಕೋವಿಡ್–19, 38 ಸಕ್ರಿಯ ಪ್ರಕರಣಗಳು ದಾಖಲಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಕೋವಿಡ್ ಮಾರ್ಗಸೂಚಿ ಪಾಲಿಸುವಂತೆ ಸರ್ಕಾರ ಹೇಳಿದೆ. ಜೆಎನ್–1 ವೇರಿಯಂಟ್, ಓಮಿಕ್ರಾನ್ ಸ್ಟ್ರೇನ್ ಮತ್ತು ಅದರ ಸಬ್ ಲೈನೇಜಸ್, ಎಲ್‌ಎಫ್–7 ಮತ್ತು ಎನ್‌ಬಿ–1.8 ಉಪಕ್ರಮಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು, ಅದಕ್ಕಾಗಿ ಮೇ 26ರಿಂದ ಆರ್‌ಟಿ–ಪಿಸಿಆರ್ ಪರೀಕ್ಷೆ ಆರಂಭಿಸುವಂತೆ ಸೂಚನೆ ನೀಡಿದೆ. ರಾಜ್ಯದಾದ್ಯಂತ 8 ಆರ್‌ಟಿ–ಪಿಸಿಆರ್ ಟೆಸ್ಟಿಂಗ್ ಸೆಂಟರ್ ಸ್ಥಾಪಿಸಿದ್ದು, ಮೆಡಿಕಲ್ ಕಾಲೇಜುಗಳ ಅಧೀನ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಮೊದಲ ಹಂತದಲ್ಲಿ ಕೋವಿಡ್–19 ಪರೀಕ್ಷಿಸಬೇಕೆಂದು ತಿಳಿಸಲಾಗಿದೆ.



ಮಾಸ್ಕ್ ಧರಿಸಿದ ಸಿಎಂ: ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಟಿಕೆ ಬಡಾವಣೆಯ ತಮ್ಮ ನಿವಾಸದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ವೇಳೆ ಬಿಳಿ ಬಣ್ಣದ ಮಾಸ್ಕ್ ಧರಿಸಿದ್ದರು. ಹಿನಕಲ್‌ನಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮುಖ್ಯಮಂತ್ರಿಗಳು, ನಂತರ ಕಲಾಮಂದಿರದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗಲೂ ಮಾಸ್ಕ್ ಧರಿಸಿದ್ದರು. ಮೊದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ತಾವೇ ಮಾಸ್ಕ್ ಧರಿಸಿ, ಎಲ್ಲರೂ ಕೋವಿಡ್–19 ಮುಂಜಾಗ್ರತೆ ವಹಿಸಬೇಕಿರುವ ಜರೂರಿನ ಸಂದೇಶ ಸಾರಿದರು.



ಮೈಸೂರು ಜಿಲ್ಲೆಯಲ್ಲಿ ಮುನ್ನೆಚ್ಚರಿಕಾ ಕ್ರಮ

ಮೈಸೂರು, ಮೇ 24(ಆರ್‌ಕೆ)– ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವಂತೆಯೇ ಮೈಸೂರು ಜಿಲ್ಲಾದ್ಯಂತ ಅಗತ್ಯ ಕ್ರಮ ಕೈಗೊಂಡಿರುವುದಾಗಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಹೆಚ್.ಕೆ.ಕುಮಾರಸ್ವಾಮಿ ತಿಳಿಸಿದ್ದಾರೆ.


ಡಾ.ಕುಮಾರಸ್ವಾಮಿ

2025ರ ಜನವರಿ 1ರಿಂದ ಮೇ 22ರವರೆಗೆ ಜಿಲ್ಲೆಯಲ್ಲಿ 75 ಕೋವಿಡ್ ಟೆಸ್ಟ್ ಮಾಡಲಾಗಿದ್ದು, ಒಂದೇ ಒಂದು ಪಾಸಿಟಿವ್ ಬಂದಿಲ್ಲ. ಆದರೂ, ರೋಗ ಲಕ್ಷಣ ಇರುವವರಿಗೆ ನಿರಂತರವಾಗಿ ಕೊರೊನಾ (ಆರ್‌ಟಿ–ಪಿಸಿಆರ್) ಟೆಸ್ಟ್ ಮಾಡುವ ಪ್ರಕ್ರಿಯೆ ಮುಂದುವರಿದಿದೆ. 60 ವರ್ಷ ಮೇಲ್ಪಟ್ಟವರು, ಬಹು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು, ಮಕ್ಕಳಲ್ಲಿ ಜ್ವರ, ನೆಗಡಿ, ಕೆಮ್ಮು, ಉಸಿರಾಟದ ಸಮಸ್ಯೆ ಕಂಡುಬಂದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಹೆಚ್‌ಸಿ), ಸಮುದಾಯ ಆರೋಗ್ಯಕೇಂದ್ರ(ಸಿಹೆಚ್‌ಸಿ), ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ಸಕಲ ಸೌಲಭ್ಯದೊಂದಿಗೆ ತಯಾರಿ ಮಾಡಲಾಗಿದೆ. ಅಧಿಕ ಜನದಟ್ಟಣೆ ಸ್ಥಳದಲ್ಲಿ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ರೋಗ ಲಕ್ಷಣ ಕಂಡುಬಂದ ತಕ್ಷಣ ಹತ್ತಿರದ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಂಡು ಮನೆಯಲ್ಲಿ ಸ್ವತಃ ಪ್ರತ್ಯೇಕವಾಗಿರುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ ಎಂದರು.



❝ ದೇಶದಲ್ಲಿ ಒಟ್ಟು 398 ಪ್ರಕರಣ ದಾಖಲಾಗಿವೆ. ಕೋವಿಡ್ ಪಾಸಿಟಿವ್ ಹೊಂದಿದವರಿಗೆ ಕೆಲವು ಗುಣಲಕ್ಷಣಗಳಿವೆ. ಅದನ್ನು ಬಿಟ್ಟರೆ ಗಂಭೀರ ಸಮಸ್ಯೆಗಳು ಕಂಡುಬಂದಿಲ್ಲ. ಉಸಿರಾಟದ ತೊಂದರೆ ಇರುವವರಿಗೆ, ಎಸ್‌ಎಆರ್‌ಐ ಪ್ರಕರಣಗಳಲ್ಲಿ ಕಡ್ಡಾಯವಾಗಿ ಕೋವಿಡ್ ಟೆಸ್ಟ್ ಮಾಡಲು ಸೂಚಿಸಲಾಗಿದೆ. ಉಸಿರಾಟ, ಹೃದಯಸಂಬಂಧಿ ಕಾಯಿಲೆ ಇರುವವರು ಅಡ್ಮಿಟ್ ಆಗಿರುವ ಆಸ್ಪತ್ರೆಗಳಲ್ಲಿ ಸ್ಯಾಂಪಲ್ ಕಲೆಕ್ಟ್ ಮಾಡಿ ಕೋವಿಡ್ ಟೆಸ್ಟ್ ನಡೆಸುವಂತೆ ಸೂಚಿಸಲಾಗಿದೆ. ಬಾಣಂತಿಯರು ಜನ ಹೆಚ್ಚಿರುವ ಕಡೆ ಮಾಸ್ಕ್ ಧರಿಸಲು ಸಲಹೆ ನೀಡಲಾಗಿದೆ. ಯಾರೂ ಕೋವಿಡ್ ಬಂದಿದೆ ಎಂದು ಆತಂಕಪಡುವ ಅಗತ್ಯವಿಲ್ಲ. ಮುಂಜಾಗ್ರತೆ ವಹಿಸಿದರೆ ಸಾಕು. ತಕ್ಷಣಕ್ಕೆ ಮಾಸ್ಕ್ ಎಲ್ಲರಿಗೂ ಕಡ್ಡಾಯ ಮಾಡಿಲ್ಲ. ಬಾಣಂತಿಯರು, ಗರ್ಭಿಣಿಯರು ಧರಿಸಬೇಕು. ಸ್ವಚ್ಛತೆ ಕಾಪಾಡಿಕೊಂಡು ಸ್ಯಾನಿಟೈಸರ್ ಬಳಸುವುದು ಉತ್ತಮ. ಸಾರ್ವಜನಿಕರು ಪ್ರಯಾಣ ಮಾಡಲು ಯಾವುದೇ ಅಡ್ಡಿಯಿಲ್ಲ. ಎಲ್ಲರೂ ಸಹಜ ಜೀವನ ನಡೆಸಬಹುದು. ಮಾಧ್ಯಮಗಳು ಆತಂಕ ಸೃಷ್ಟಿಸುವುದು ಬೇಡ. ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಲಿ. ಒಂದು ತಿಂಗಳಿಗಾಗುವಷ್ಟು ಟೆಸ್ಟಿಂಗ್ ಕಿಟ್‌ಗಳನ್ನು ತೆಗೆದಿಟ್ಟುಕೊಳ್ಳಲು ಸೂಚಿಸಲಾಗಿದೆ. ಅಗತವಿದ್ದಾಗ ಮಾತ್ರ ಟೆಸ್ಟ್ ಮಾಡಲಾಗುವುದು. –ದಿನೇಶ್ ಗುಂಡೂರಾವ್, ಆರೋಗ್ಯ ಸಚಿವರು.

ಮೈಸೂರಲ್ಲಿ ಅದ್ಧೂರಿ ಬಸವ ಜಯಂತಿ ಆಚರಣೆ

600 ಕೋಟಿ ವೆಚ್ಚದ ಅನುಭವ ಮಂಟಪ ಮುಂದಿನ ವರ್ಷ ಲೋಕಾರ್ಪಣೆ: ಸಿಎಂ

- ಬಸವಾದಿ ಶರಣರ ಕ್ರಾಂತಿ ವಿಶ್ವಕ್ಕೆ ಮಾದರಿ
- ಬಸವಣ್ಣ ಒಂದು ಜಾತಿ, ಧರ್ಮಕ್ಕೆ ಸೀಮಿತರಾಗಿಲ್ಲ
- ಜಾತಿ ವ್ಯವಸ್ಥೆ ಜೀವಂತವಾಗಿರುವುದು ದುಃಖದ ಸಂಗತಿ
- ಸುಖಿ ಸಮಾಜ ನಿರ್ಮಾಣಕ್ಕೆ ಬಸವಣ್ಣನವರ ತತ್ವಗಳೇ ಮದ್ದು


ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಕ್ರಾಂತಿಕಾರಿ ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಬಸವ ಜಯಂತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಮೈಸೂರು, ಮೇ24(ಬಿಎಲ್‌ಯು)– ಬೀದರ್‌ನ ಬಸವ ಕಲ್ಯಾಣದಲ್ಲಿ 600 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಅನುಭವ ಮಂಟಪ ಮುಂದಿನ ವರ್ಷ ಲೋಕಾರ್ಪಣೆಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ನಗರದ ಕಲಾಮಂದಿರದಲ್ಲಿ ಇಂದು 'ನಮ್ಮ ನಡೆ ಅನುಭವ ಮಂಟಪದ ಕಡೆ' ಘೋಷವಾಕ್ಯದಡಿ ಆಯೋಜಿಸಲಾಗಿದ್ದ ನಮ್ಮ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದಾಗ ಅನುಭವ ಮಂಟಪವನ್ನು 600 ಕೋಟಿ ವೆಚ್ಚದಲ್ಲಿ ಪುನರುಜ್ಜೀವನಗೊಳಿಸಲು ಗೋ.ರು.ಚನ್ನಬಸಪ್ಪ ನೇತೃತ್ವದಲ್ಲಿ ತಜ್ಞರ ಸಮಿತಿ ರಚನೆ ಮಾಡಿದ್ದೆ. ಮುಂದಿನ ವರ್ಷ ಈ ನವೀಕೃತ ಅನುಭವ ಮಂಟಪವನ್ನು ಲೋಕಾರ್ಪಣೆ ಮಾಡಲಾಗುವುದು. ಈ ಮೂಲಕ ಬಸವಾದಿ ಶರಣರ ತತ್ವವನ್ನು ವಿಶ್ವಕ್ಕೆ ಸಾರಲು ಇನ್ನು ಹಲವು ಕಾರ್ಯಕ್ರಮ ರೂಪಿಸಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ವಿಶ್ವದ ಯಾವುದೇ ಸ್ಥಳದಲ್ಲಿ ಮಾಡದ ಕ್ರಾಂತಿಯನ್ನು ಬಸವಾದಿ ಶರಣರು ಇಲ್ಲಿ ಮಾಡಿದ್ದಾರೆ. ಅಸಮಾನತೆ ಮುಕ್ತ ಮಾಡಿ, ಸಮ ಸಮಾಜ ನಿರ್ಮಿಸಲು ▶ 6ನೇ ಪುಟಕ್ಕೆ

ವಿಶ್ವಸಂಸ್ಥೆಯ ಮಾನವ ಹಕ್ಕುಗಳಿಗೆ ಬಸವಣ್ಣನವರ ತತ್ವಾದರ್ಶಗಳೇ ಪ್ರೇರಣೆ

❝ ವಿಶ್ವಸಂಸ್ಥೆ ಘೋಷಣೆ ಮಾಡಿದ ಮಾನವ ಹಕ್ಕುಗಳಿಗೆ ಬಸವಣ್ಣನವರ ಅನುಭವ ಮಂಟಪ ಹಾಗೂ ತತ್ವಗಳು ಆದರ್ಶವಾಗಿದೆ. ಶರಣರೆಲ್ಲರೂ ಸೇರಿ ಆದರ್ಶ ಸಂಘ ಕಟ್ಟಿದ್ದರು. ವಚನ ಸಾಹಿತ್ಯವನ್ನು ಸರ್ವವ್ಯಾಪಿ ಪ್ರಚಾರ ಮಾಡಿದರು. ಬಸವಣ್ಣನವರ ಶರಣ ಸಂಸ್ಕೃತಿಯ ವೈಚಾರಿಕ ಕ್ರಾಂತಿ 12ನೇ ಶತಮಾನದಲ್ಲಿಯೇ ಪ್ರಜಾಪ್ರಭುತ್ವ, ಮಾನವೀಯ ಮೌಲ್ಯ, ಸಾಮಾಜಿಕ ನ್ಯಾಯ ಮತ್ತು ಮಹಿಳಾ ಸಮಾನತೆ ಸೇರಿದಂತೆ ಹಲವು ಅದ್ಭುತ ಚಿಂತನೆಗಳಿಗೆ ಮುನ್ನುಡಿ ಬರೆದು, ಐತಿಹಾಸಿಕ ಮಹಾ ಕ್ರಾಂತಿಗೆ ಸಾಕ್ಷಿಯಾಯಿತು. ಅಂತರ್ಜಾತಿ ವಿವಾಹ, ಮಹಿಳಾ ವಿಮೋಚನಾ ಚಳವಳಿ, ಅಸ್ಪೃಶ್ಯತಾ ನಿವಾರಣಾ ಚಳವಳಿ, ಅಂಧತ್ವ ವಿರುದ್ಧದ ಹೋರಾಟ, ಜಾತಿ ಮುಕ್ತ ಸಮಾಜ ಸೇರಿದಂತೆ ಹಲವು ಸಾಮಾಜಿಕ ಚಳವಳಿ 12ನೇ ಶತಮಾನದಲ್ಲೇ ನಡೆದಿತ್ತು.
–ಜಿ.ಟಿ.ದೇವೇಗೌಡ, ಹಿರಿಯ ಶಾಸಕರು.

ಕರ್ನಾಟಕದಲ್ಲಿ ಸದ್ಯ ಚುನಾವಣೆ ನಡೆದರೆ ಬಿಜೆಪಿಗೆ ಅಧಿಕಾರ ಗದ್ದುಗೆ!

ಪೀಪಲ್ಸ್ ಪಲ್ಸ್, ಕೊಡೆಮೊ ಟೆಕ್ನಾಲಜೀಸ್ ಸಮೀಕ್ಷಾ ವರದಿ

ಬೆಂಗಳೂರು, ಮೇ 24–ಕರ್ನಾಟಕ ವಿಧಾನ ಸಭೆಗೆ ಇಂದು ಚುನಾವಣೆ ನಡೆದರೆ ಬಿಜೆಪಿ ಸ್ಪಷ್ಟ ಬಹುಮತಗಳೊಂದಿಗೆ ಅಧಿಕಾರಕ್ಕೇರಲಿದೆ. ಜೆಡಿಎಸ್ ಮೂರನೇ ಸ್ಥಾನದಲ್ಲಿರಲಿದೆ ಎಂದು ಹೈದರಾಬಾದ್ ಮೂಲದ ಪೀಪಲ್ಸ್ ಪಲ್ಸ್ ಮತ್ತು ಕೊಡೆಮೊ ಟೆಕ್ನಾಲಜೀಸ್ ನಡೆಸಿದ ಸಮೀಕ್ಷಾ ವರದಿ ಹೇಳಿದೆ. ಅಲ್ಲದೆ, ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಈಗಲೂ ಅತ್ಯಂತ ಪ್ರಮುಖ ಆಯ್ಕೆ ಎಂದು ಸಮೀಕ್ಷೆ ಹೇಳಿದೆ.

ಸುಮಾರು 1 ತಿಂಗಳ ಕಾಲ ನಡೆದ ಈ ಸಮೀಕ್ಷೆಯಲ್ಲಿ 10,481 ಜನರ ಅಭಿಪ್ರಾಯ ಸಂಗ್ರಹಿಸಲಾಗಿತ್ತು. ಚುನಾವಣೆ ನಡೆದರೆ ಬಿಜೆಪಿ 136ರಿಂದ 159 ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಲಿದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡವರು ಹೇಳಿದ್ದಾರೆ. ಕಾಂಗ್ರೆಸ್ 62ರಿಂದ 82 ಸ್ಥಾನ ಪಡೆಯಲಿದೆ. 2023ರ ಚುನಾವಣೆಯಲ್ಲಿ ಶೇ.42.88ರಷ್ಟು ಮತಗಳನ್ನು ಪಡೆದಿದ್ದ ಕಾಂಗ್ರೆಸ್, ಈಗ ಚುನಾವಣೆ ನಡೆದರೆ ಮತಗಳಿಕೆ ಪ್ರಮಾಣ ಶೇ.40.3ಕ್ಕೆ ಕುಸಿಯಲಿದೆ. ಸದ್ಯ ಕಾಂಗ್ರೆಸ್ ಆಡಳಿತ ವಿರೋಧ ಅಲೆ ಎದುರಿಸುತ್ತಿದೆ ಎಂದು ಸಮೀಕ್ಷೆ ಹೇಳಿರುವುದಾಗಿ ವರದಿಯಾಗಿದೆ.

ಜೆಡಿಎಸ್ ಕೇವಲ 3ರಿಂದ 6 ಕ್ಷೇತ್ರಗಳಲ್ಲಿ ಗೆಲ್ಲುವ ಸಾಧ್ಯತೆಗಳಿದ್ದು, ಅದರ ಮತಗಳಿಕೆ ಪ್ರಮಾಣ ಶೇ.5ಕ್ಕೆ ಕುಸಿಯಲಿದೆ. 2023ರಲ್ಲಿ ಜೆಡಿಎಸ್ ಶೇ.18.3ರಷ್ಟು ಮತಗಳನ್ನು ಪಡೆದಿತ್ತು.

> ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಉತ್ತಮ ಅಥವಾ ಅತ್ಯುತ್ತಮ ಎಂದವರು ಶೇ.48.4ರಷ್ಟು ಜನ. ಕಳಪೆ ಅಥವಾ ತೀರಾ ಕಳಪೆ ಎಂದವರ ಸಂಖ್ಯೆ ಶೇ.51.6ರಷ್ಟು.

ರಾಜ್ಯ ರಾಜಕಾರಣದಲ್ಲಿ ಕಳೆದ 20 ವರ್ಷಗಳಲ್ಲಿ (2004, 2008, 2018) ಬಿಜೆಪಿ ಅತೀ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ. ಆದರೆ, ಅಧಿಕಾರದ ಗದ್ದುಗೆ ಏರಲು ಸ್ಪಷ್ಟ ಬಹುಮತ (224ರಲ್ಲಿ 113 ಸೀಟುಗಳು) ಪಡೆಯುವಲ್ಲಿ ವಿಫಲವಾಗಿದೆ.

ಸಿದ್ದರಾಮಯ್ಯ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ: ಕಾಂಗ್ರೆಸ್ ಪಕ್ಷದಲ್ಲಿ ಸಿದ್ದರಾಮಯ್ಯ ಈಗಲೂ ಅತ್ಯಂತ ಜನಪ್ರಿಯ ಮುಖ್ಯಮಂತ್ರಿಯಾಗಿದ್ದಾರೆ. ಶೇ.29.2ರಷ್ಟು ▶ 6ನೇ ಪುಟಕ್ಕೆ

ಪ್ರಿಯಕರನೊಂದಿಗೆ ಹಿರಿಯ ಪುತ್ರಿ ವಿವಾಹ!

ಆಕೆಯ ತಂದೆ–ತಾಯಿ, ತಂಗಿ ಜಲಾಶಯಕ್ಕೆ ಹಾರಿ ಆತ್ಮಹತ್ಯೆ

● ಹೆಚ್.ಡಿ.ಕೋಟೆ ಬಳಿ ದುರಂತ ● ನಾಲ್ಕು ಪುಟಗಳ ಡೆತ್‌ನೋಟ್‌ನಲ್ಲಿ ಆತ್ಮಹತ್ಯೆ ರಹಸ್ಯ ಬಯಲು ● ಸಾಲ ಕೊಡಬೇಕಾದ ಎಲ್ಲರಿಗೂ ಗೂಗಲ್‌ಪೇ


ಮಹದೇವಸ್ವಾಮಿ ಮಂಜುಳಾ ಹರ್ಷಿತಾ

ಹೆಚ್.ಡಿ.ಕೋಟೆ: ಹೇಳದೆ–ಕೇಳದೆ ತಮ್ಮ ಹಿರಿಯ ಪುತ್ರಿ ಮನೆ ಬಿಟ್ಟು ಹೋಗಿ ಪ್ರಿಯಕರನೊಂದಿಗೆ ವಿವಾಹವಾದ ಹಿನ್ನೆಲೆಯಲ್ಲಿ ಮನನೊಂದ ದಂಪತಿ ತಮ್ಮ ಮತ್ತೋರ್ವ ಪುತ್ರಿಯೊಂದಿಗೆ ಜಲಾಶಯಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿಗೆ ಸಮೀಪದ ಹೆಬ್ಬಾಳದಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಪಟ್ಟಣದ ಡ್ರೈವರ್ ಕಾಲೋನಿಯಲ್ಲಿ ವಾಸವಾಗಿದ್ದ ತಾಲೂಕಿನ ಬೂದನೂರು ಗ್ರಾಮದ ನಿವಾಸಿಗಳಾದ ಮಹದೇವಸ್ವಾಮಿ (55), ಇವರ ಪತ್ನಿ ಮಂಜುಳಾ (42) ಮತ್ತು ಪುತ್ರಿ ಹರ್ಷಿತಾ (20) ಆತ್ಮಹತ್ಯೆಗೆ ಶರಣಾದ ದುರ್ದೈವಿಗಳು.

ತಮ್ಮ ಹಿರಿಯ ಪುತ್ರಿ ಮನೆ ಬಿಟ್ಟು ಹೋಗಿ ತಾನು ಪ್ರೀತಿಸಿದ ಯುವಕನೊಂದಿಗೆ ವಿವಾಹವಾಗಿದ್ದರಿಂದ ಅಕ್ಕ–ಪಕ್ಕದ ನಿವಾಸಿಗಳು ಮತ್ತು ಸಂಬಂಧಿಕರಿಂದನೆ ಮಾತುಗಳ ಕೇಳಬೇಕಾಗುತ್ತದೆ ಎಂಬ ಭಯದಿಂದ ಮಹದೇವಸ್ವಾಮಿ, ತಮ್ಮ ಪುತ್ರಿಯ ಮೂಲಕ 4 ಪುಟಗಳ ಡೆತ್‌ನೋಟ್ ಬರೆದಿಟ್ಟು, ಮೂವರು ಕಾಲಿಗೆ ಬಳ್ಳಿಯನ್ನು ಕಟ್ಟಿಕೊಂಡು ಜಲಾಶಯಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಮಹದೇವಸ್ವಾಮಿ ತಾಲೂಕಿನ ಸುತ್ತಮುತ್ತ ಇರುವ ಜಮೀನನ್ನು ಭೋಗ್ಯಕ್ಕೆ ಕೊಡಿಸುವುದರೊಂದಿಗೆ ತಾವು ಕೂಡ ಜಮೀನನ್ನು ಭೋಗ್ಯಕ್ಕೆ ಹಾಕಿಕೊಂಡು ಬೇಸಾಯ ಮಾಡುತ್ತಿದ್ದರು. ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಯಾರ್‍ಯಾರಿಗೆ ಹಣ ಕೊಡಬೇಕಿತ್ತೋ ಅವರಿಗೆಲ್ಲ ಗೂಗಲ್ ಪೇ ಮತ್ತು ಫೋನ್‌ಪೇ ಮೂಲಕ ಹಣವನ್ನು ಹಿಂತಿರುಗಿಸಿದ್ದಾರೆ. ಜೊತೆಗೆ ಕೆಲವು ಸಂಬಂಧಿಕರಿಗೆ ಮೊಬೈಲ್ ಕರೆ ಮಾಡಿ, ನಾಳೆ ಮನೆ ಬಳಿ ಬನ್ನಿ ಎಂದು ತಿಳಿಸಿದ್ದಾರೆ. ತಮ್ಮ ನಾಲ್ಕು ಎಕರೆ ಜಮೀನನ್ನು ಯಾರಿಗೆ ಕೊಡಬೇಕು ಎಂದು ಡೆತ್‌ನೋಟ್‌ನಲ್ಲಿ ನಮೂದಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹುಣಸೂರು ಹಾಗೂ ಎಚ್‌ಡಿ ಕೋಟೆ ಅಗ್ನಿಶಾಮಕ ದಳದ ಎರಡು ತಂಡಗಳು ಸ್ಥಳಕ್ಕೆ ಆಗಮಿಸಿ, ಸುಮಾರು ▶ 6ನೇ ಪುಟಕ್ಕೆ

ಮೈಸೂರು ಮಿತ್ರ

ಹಾಸನ ಮಿತ್ರ

ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ದೈಹಿಕ ಶಿಕ್ಷಣ ಪೂರಕ: ಚಂದ್ರೇಗೌಡ



ವಿವಿಧ ಪಂದ್ಯಾವಳಿಗಳಿಗೆ ಮೇಯರ್ ಚಂದ್ರೇಗೌಡ ಚಾಲನೆ ನೀಡಿದರು.

ಹಾಸನ,ಮೇ 24–ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ದೈಹಿಕ ಶಿಕ್ಷಣ ಪೂರಕವಾಗಿದೆ ಎಂದು ಹಾಸನ ಮಹಾನಗರಪಾಲಿಕೆ ಮೇಯರ್ ಎಂ.ಚಂದ್ರೇಗೌಡ ತಿಳಿಸಿದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಸರ್ಕಾರಿ ಕಲಾ ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು, ದೈಹಿಕ ಶಿಕ್ಷಣ–ಕ್ರೀಡಾ ವಿಭಾಗ ವತಿಯಿಂದ ನಗರದ ಕಲಾ ಕಾಲೇಜು ಕ್ರೀಡಾಂಗಣದಲ್ಲಿ ಅಭ್ಯುದಿತ 2025 ರಾಜ್ಯಮಟ್ಟದ ಆಹ್ವಾನಿತ ಅಂತರ ಕಾಲೇಜು ಪುರುಷರ ವಾಲಿಬಾಲ್ ಮತ್ತು ಖೋ–ಖೋ ಪಂದ್ಯಾವಳಿಗೆ ಪಾರಿವಾಳವನ್ನು ಹಾರಿ ಬಿಡುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಈ ಹಿಂದೆ ಖಾಸಗಿ ಶಾಲೆಗಳಲ್ಲಿ ಅವಕಾಶ ಸಿಗದಿದ್ದರೆ ಸರ್ಕಾರಿ ಶಾಲೆಗಳಿಗೆ ವಿದ್ಯಾರ್ಥಿಗಳು ದಾಖಲಾಗುವ ಪರಿಸ್ಥಿತಿ ಇತ್ತು. ಆದರೆ ಇದೀಗ ರಾಜ್ಯದಲ್ಲಿ ಆಳುವ ಸರ್ಕಾರಗಳು ಹಾಗೂ ಉತ್ತಮ ಅಧಿಕಾರಿಗಳು ಅದರ ದಿಕ್ಕನ್ನೇ ಬದಲಾಯಿಸಿ, ಸರ್ಕಾರಿ ಶಾಲೆಗಳಲ್ಲಿ ಅವಕಾಶ ಸಿಗದಿದ್ದಾಗ ಖಾಸಗಿ ಶಾಲೆಗಳಿಗೆ ತೆರಳುವ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ ಇದು ಶ್ಲಾಘನೀಯ ಎಂದರು.

ಸರ್ಕಾರಿ ಕಲಾ ಕಾಲೇಜು ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಪಥದತ್ತ ಸಾಗಲಿ. ಇಂದು ನಡೆಯುತ್ತಿರುವ ಕ್ರೀಡಾಕೂಟ ಯಶಸ್ವಿಯಾಗಲಿ ಎಂದು ಹಾರೈಸಿದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ಇರ್ಷಾದ್ ಎಂ.ಬಿ. ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಮಾರಂಭದಲ್ಲಿ ಅಂತರಾಷ್ಟ್ರೀಯ ಖೋ–ಖೋ ಕ್ರೀಡಾಪಟು ಬಿ.ಚೈತ್ರ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವಿಶೇಷಾಧಿಕಾರಿ ಡಾ.ಶ್ರೀಕಾಂತ್ ಆರ್, ಪರೀಕ್ಷಾ ನಿಯಂತ್ರಕರಾದ ಡಾ.ಕೆ.ಡಿ. ಮುರುಳೀಧರ್, ಪತ್ರಾಂಕಿತ ವ್ಯವಸ್ಥಾಪಕ ಸತ್ಯಮೂರ್ತಿ, ಕ್ರೀಡಾ ಸಮಿತಿ ಸಂಚಾಲಕ ಡಾ.ಪವನ್, ಕಾಲೇಜಿನ ಆಡಳಿತ ವಿಭಾಗದ ಸಿಬ್ಬಂದಿ, ಕಾಲೇಜಿನ ಎಲ್ಲಾ ವಿಭಾಗದ ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಉಪನ್ಯಾಸಕರು, ದೈಹಿಕ ನಿರ್ದೇಶಕರು ಉಪಸ್ಥಿತರಿದ್ದರು. ಕ್ರೀಡಾ ಸಮಿತಿಯ ಮೂಲ ಸೌಕರ್ಯಗಳ ಸಮಿತಿ ಸಂಚಾಲಕ ಡಾ.ಪಾರ್ಥೇಶ್ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

ಪೂಂಚ್‌ನಲ್ಲಿ ಪಾಕಿಸ್ತಾನಿ ಶೆಲ್ ದಾಳಿಯ ಸಂತ್ರಸ್ತರಿಗೆ ಧೈರ್ಯ ತುಂಬಿದ ರಾಹುಲ್ ಗಾಂಧಿ



ಪೂಂಚ್, ಮೇ.24– ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ಸಮಯದಲ್ಲಿ ಪಾಕಿಸ್ತಾನದ ಗಡಿಯಾಚೆಗಿನ ಶೆಲ್ ದಾಳಿಯಲ್ಲಿ ಗಾಯಗೊಂಡವರನ್ನು ವಿಪಕ್ಷ ನಾಯಕ ರಾಹುಲ್ ಗಾಂಧಿ ಭೇಟಿಯಾದರು. ಇಂದು ಬೆಳಗ್ಗೆ ಜಮ್ಮು ವಿಮಾನ ನಿಲ್ದಾಣಕ್ಕೆ ಬಂದು ಅಲ್ಲಿಂದ ಹೆಲಿಕಾಪ್ಟರ್ ಮೂಲಕ ಪೂಂಚ್ ತಲುಪಿದರು. ಪಾಕ್ ಗಡಿಯಾಚೆಗಿನ ಶೆಲ್ ದಾಳಿಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ದುಃಖಿತ ಕುಟುಂಬಗಳನ್ನು ಭೇಟಿ ಮಾಡಿದರು. ರಾಹುಲ್ ಗಾಂಧಿ ಶಾಲಾ ಮಕ್ಕಳೊಂದಿಗೆ ಸಂವಹನ ನಡೆಸಿ ಅವರ ಮನೋಸ್ಥೈರ್ಯವನ್ನು ಹೆಚ್ಚಿಸಿದರು.

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಪೂಂಚ್‌ನ ಶಾಲೆಗೆ ಭೇಟಿ ನೀಡಿ ಗಡಿಯಾಚೆಯಿಂದ ಪಾಕಿಸ್ತಾನಿ ಶೆಲ್ ದಾಳಿಯಿಂದ ತೊಂದರೆಗೊಳಗಾದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈಗ ನೀವು ಅಪಾಯವನ್ನು ಮತ್ತು ಸ್ವಲ್ಪ ಭಯಾನಕ ಪರಿಸ್ಥಿತಿಯನ್ನು ನೋಡಿದ್ದೀರಿ, ಆದರೆ ಚಿಂತಿಸಬೇಡಿ, ಎಲ್ಲವೂ ಸರಿಯಾಗುತ್ತದೆ. ಈ ಸಮಸ್ಯೆಯನ್ನು ನಿಭಾಯಿಸುವ ನಿಮ್ಮ ಮಾರ್ಗವೆಂದರೆ ಕಷ್ಟಪಟ್ಟು ಓದುವುದು, ಶಾಲೆಯಲ್ಲಿ ಬಹಳಷ್ಟು ಸ್ನೇಹಿತರನ್ನು ಮಾಡಿಕೊಳ್ಳಿ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಪಾಕಿಸ್ತಾನದ ಶೆಲ್ ದಾಳಿಯಲ್ಲಿ ಹಾನಿಗೊಳಗಾದ ಗುರುದ್ವಾರ ಮತ್ತು ದೇವಾಲಯಕ್ಕೂ ರಾಹುಲ್ ಗಾಂಧಿ ಭೇಟಿ ನೀಡಿದ್ದಾರೆ. ರಾಹುಲ್ ಗಾಂಧಿ ಅವರು ಗುಂಡಿನ ದಾಳಿಯಲ್ಲಿ ಮೃತಪಟ್ಟ ಮಕ್ಕಳ ಮನೆಗಳಿಗೂ ಭೇಟಿ ನೀಡಿದ್ದಾರೆ. ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತೀಕಾರವಾಗಿ ಭಾರತ ಮೇ 7ರಂದು ಆಪರೇಷನ್ ಸಿಂಧೂರ್ ಅಡಿಯಲ್ಲಿ ಪಾಕಿಸ್ತಾನ ಮತ್ತು ಪಿಒಕೆಯಲ್ಲಿನ ಒಂಬತ್ತು ಭಯೋತ್ಪಾದಕ ಉಡಾವಣಾ ಪ್ಯಾಡ್‌ಗಳ ಮೇಲೆ ನಿಖರವಾದ ದಾಳಿ ನಡೆಸಿತ್ತು ಇದಾದ ನಂತರ ಪೂಂಚ್ ವಲಯದಲ್ಲಿ ಗಡಿಯುದ್ದಕ್ಕೂ ಫಿರಂಗಿ ಶೆಲ್ ದಾಳಿ ಮತ್ತು ಮೋರ್ಟಾರ್ ಶೆಲ್ ದಾಳಿ ಹೆಚ್ಚಾಗಿತ್ತು.

ಶೀಘ್ರವೇ ಮೈಸೂರಲ್ಲಿ ವಚನ ಸಾಹಿತ್ಯ ಸಮ್ಮೇಳನ


ಮೈಸೂರು, ಮೇ24(ಜಿಎ)–ಮೈಸೂರಿನಲ್ಲಿ ಈ ಬಾರಿ 25ನೇ ವಚನ ಸಾಹಿತ್ಯ ಸಮ್ಮೇಳನವನ್ನು ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ವತಿಯಿಂದ ಸದ್ಯದಲ್ಲಿಯೇ ಆಯೋಜಿಸಲಾಗುವುದು ಎಂದು ಬೆಂಗಳೂರಿನ ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಚನ ಸಾಹಿತ್ಯದ ಬಗ್ಗೆ ಅಪಾರವಾದ ಅಧ್ಯಯನ ಮತ್ತು ಸಂಶೋಧನೆ ನಡೆಸಿದ ವಿದ್ವಾಂಸರಿಂದ ವಿಚಾರ ಗೋಷ್ಠಿಗಳನ್ನು ಆಯೋಜಿಸುವ ಮೂಲಕ ವಚನ ಸಾಹಿತ್ಯದ ಬಗ್ಗೆ ಜನರಿಗೆ ಅರಿವು ಮೂಡಿಸಲಾಗುವುದು. ಜೊತೆಗೆ ತುಮಕೂರು ಶ್ರೀ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಬದುಕು ಮತ್ತು ಸಾಧನೆಯನ್ನು ಒಳಗೊಂಡಿರುವ ಅತ್ಯಮೂಲ್ಯವಾದ ಬೃಹತ್ ಗ್ರಂಥವನ್ನು ಅಂದಿನ ಸಮಾವೇಶದಲ್ಲಿ ಲೋಕಾರ್ಪಣೆಗೊಳಿಸಲಾಗುವುದು ಎಂದರು.

ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕ ಡಾ.ಶಿವಕುಮಾರ ಸ್ವಾಮಿ, ಸಹ ಕಾರ್ಯದರ್ಶಿ ಸತೀಶ್, ರವೀಂದ್ರ ಉಪಸ್ಥಿತರಿದ್ದರು.


ನಿಧನ

ಸತೀಶ್ ಚಂದ್ರಬಾಬು




ಮೈಸೂರು, ಮೇ 24 –ಕೇಂದ್ರ ರೇಷ್ಮೆ ಮಂಡಳಿ ನಿವೃತ್ತ ಉದ್ಯೋಗಿ ಸತೀಶ್ ಚಂದ್ರಬಾಬು (62) ಶನಿವಾರ ತೀವ್ರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ (ಮೇ 25) ಬೆಳಗ್ಗೆ 11 ಗಂಟೆಗೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಲಕ್ಷ್ಮಮ್ಮ



ಮೈಸೂರಿನ ಬೆಲವತ್ತ ಗ್ರಾಮದ ದಿವಂಗತ ಲಿಂಗಯ್ಯ ಅವರ ಪತ್ನಿ ಲಕ್ಷ್ಮಮ್ಮ (94) ಇಂದು ನಿಧನರಾದರು. ಮೃತರು ಪುತ್ರರು, ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಜೋಡಿತೆಂಗಿನಮರ ರುದ್ರಭೂಮಿಯಲ್ಲಿ ಶನಿವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೇಮಾ



ಮೈಸೂರು ತಾಲೂಕಿನ ಪರಸಯ್ಯನಹುಂಡಿ ಗ್ರಾಮದ ಪ್ರೇಮಾ(62) ಶುಕ್ರವಾರ ನಿಧನರಾದರು. ಮೃತರು ಪತಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ಮ್ಯಾನೇಜರ್ ನಂಜುಂಡಸ್ವಾಮಿ, ಇಬ್ಬರು ಪುತ್ರರು, ಸೊಸೆಯಂದಿರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಪರಸಯ್ಯನಹುಂಡಿ ಗ್ರಾಮದ ಸ್ಮಶಾನದಲ್ಲಿ ಶುಕ್ರವಾರ ಸಂಜೆ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ವಾರಾಂತ್ಯ ರಜೆ ಹಿನ್ನೆಲೆ; ಮೈಸೂರಲ್ಲಿ ಭಾರೀ ವಾಹನ ದಟ್ಟಣೆ

ಶನಿವಾರ ಅರಮನೆಗೆ 23,186 ಮಂದಿ, ಮೃಗಾಲಯಕ್ಕೆ 20,293 ಮಂದಿ ಭೇಟಿ





ಮೈಸೂರು ಅರಮನೆಯ ವರಹ ದ್ವಾರದ ಎದುರಿನ ರಸ್ತೆಯಲ್ಲಿ ಶನಿವಾರ ಕಂಡು ಬಂದ ಭಾರೀ ವಾಹನ ದಟ್ಟಣೆ. ಮತ್ತೊಂದು ಚಿತ್ರದಲ್ಲಿ ಮೈಸೂರು ಅರಮನೆಗೆ ಶನಿವಾರ ಭೇಟಿ ನೀಡಿದ್ದ ಸಂಸದೀಯ ಸ್ಥಾಯಿ ಸಮಿತಿಗಳ ಸದಸ್ಯರು ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು. ಅವರೊಂದಿಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸಹ ಇದ್ದಾರೆ.

ಮೈಸೂರು,ಮೇ 24(ಪಿಎಂ)–ವಾರಾಂತ್ಯದ ರಜೆ ಕಾರಣ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಲಗ್ಗೆಯಿಟ್ಟಿದ್ದ ಹಿನ್ನೆಲೆಯಲ್ಲಿ ಅರಮನೆ ಸುತ್ತಲಿನ ರಸ್ತೆಗಳಲ್ಲಿ ಶನಿವಾರ ಭಾರೀ ವಾಹನ ದಟ್ಟಣೆ. ಅಲ್ಲದೆ, ನಗರದ ವಿವಿಧ ಪ್ರವಾಸಿ ತಾಣಗಳಿಗೂ ಪ್ರವಾಸಿಗರ ಭಾರೀ ದಂಡೇ ಹರಿದು ಬಂದಿದ್ದ ಕಾರಣ ಮೃಗಾಲಯ ಸುತ್ತಮುತ್ತಲ ರಸ್ತೆಗಳು ಸೇರಿದಂತೆ ನಗರದ ಹೃದಯಭಾಗದಲ್ಲಿ ಭಾರೀ ವಾಹನ ದಟ್ಟಣೆ ಕಂಡು ಬಂದಿತು.

ನಾಲ್ಕನೇ ಶನಿವಾರ ಹಾಗೂ ನಾಳೆಯ ಭಾನುವಾರದ ರಜೆ ಕಾರಣ ಮೈಸೂರು ನಗರದ ಹೃದಯಭಾಗದ ರಸ್ತೆಗಳು ಬಹುತೇಕ ಪ್ರವಾಸಿಗರ ವಾಹನಗಳಿಂದ ತುಂಬಿದ್ದವು. ಅಲ್ಲದೆ, ಸ್ಥಳೀಯರ ವಾಹನಗಳು ಎಂದಿನಂತೆ ರಸ್ತೆಗಿಳಿದಿದ್ದ ಕಾರಣ ವ್ಯಾಪಕ ಸಂಚಾರ ದಟ್ಟಣೆ ಉಂಟಾಗಿ ಸಂಚಾರ ಪೊಲೀಸರು, ಸುಗಮ ಸಂಚಾರಕ್ಕೆ ಎಡೆ ಮಾಡುವಲ್ಲಿ ಹೈರಾಣಾದರು. ಬೆಳಗ್ಗಿಗಿಂತಲೂ ಮಧ್ಯಾಹ್ನ ಹೆಚ್ಚಿನ ವಾಹನ ದಟ್ಟಣೆ ಉಂಟಾಗಿತ್ತು.

ಮೈಸೂರು ಅರಮನೆ ಸುತ್ತಲಿನ ರಸ್ತೆಗಳಲ್ಲಿ ಪ್ರವಾಸಿಗರ ವಾಹನಗಳು ಮಾತ್ರವಲ್ಲದೆ, ನಗರ ಸಾರಿಗೆ ಹಾಗೂ ಸ್ಥಳೀಯರ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸಿದ ಹಿನ್ನೆಲೆಯಲ್ಲಿ ವ್ಯಾಪಕ ಸಂಚಾರ ದಟ್ಟಣೆ ಕಂಡು ಬಂದಿತು. ಕೆಆರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಚಾಮರಾಜ ಒಡೆಯರ್ ವೃತ್ತ, ಹಾರ್ಡಿಂಜ್ ವೃತ್ತ (ಜಯ ಚಾಮರಾಜ ಒಡೆಯರ್ ವೃತ್ತ), ಬೆಂಗಳೂರು–ನೀಲಗಿರಿ ರಸ್ತೆ, ಸಯ್ಯಾಜಿರಾವ್ ರಸ್ತೆ ಹಾಗೂ ಗನ್‌ಹೌಸ್ ವೃತ್ತದಲ್ಲಿ ಭಾರಿ ವಾಹನ ದಟ್ಟಣೆ ಇದ್ದಿತು.

ಈ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಇದ್ದ ಹಿನ್ನೆಲೆಯಲ್ಲಿ ಕೆಲ ವಾಹನ ಸವಾರರು ವಿವಿಧ ರಸ್ತೆ, ಅಡ್ಡ ರಸ್ತೆಗಳಲ್ಲಿ ಸಂಚರಿಸಲು ಮುಂದಾದರು. ಅದರಲೂ ದ್ವಿಚಕ್ರ ವಾಹನ ಸವಾರರ ಈ ಪ್ರಯತ್ನದಿಂದ ವಿವಿಧ ಇತರೆ ರಸ್ತೆಗಳಲ್ಲಿ ಸಹ ಸಂಚಾರ ದಟ್ಟಣೆ ಉಂಟಾಗಿತ್ತು. ದೊಡ್ಡ ಗಡಿಯಾರ ವೃತ್ತ, ಅಶೋಕ ರಸ್ತೆ, ವಾಣಿ ವಿಲಾಸ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಆರ್‌ಟಿಓ ವೃತ್ತ (09), ಅಗ್ರಹಾರ ವೃತ್ತ ಮಹಾರಾಣ ಪ್ರತಾಪ್ ಸಿಂಹಜೀ ವೃತ್ತ ಸೇರಿದಂತೆ ವಿವಿಧ ರಸ್ತೆಗಳಲ್ಲಿಯೂ ವಾಹನ ದಟ್ಟಣೆ ಭಾರೀಯಾಗಿ ಪರಿಣಮಿಸಿತ್ತು. ಬಹುತೇಕ ಸಂಜೆಯವರೆಗೂ ಇದೇ ಪರಿಸ್ಥಿತಿ ಇದ್ದಿತು. ನಾಳೆ ಭಾನುವಾರದ ರಜೆ ದಿನವಾಗಿದ್ದು, ಹೀಗಾಗಿ ನಾಳೆಯೂ ಇದೇ ರೀತಿಯ ದಟ್ಟಣೆ ಇರಲಿದೆ.

> ಸಂಸದೀಯ ಸ್ಥಾಯಿ ಸಮಿತಿ ಸದಸ್ಯರು ಅರಮನೆಗೆ ಶನಿವಾರ ಭೇಟಿ ನೀಡಿದ್ದರು. ಈ ಸಮಿತಿಯಲ್ಲಿರುವ ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹಾಗೂ ನ್ಯಾಯಮೂರ್ತಿಗಳು ಸಹ ಇಂದು ಅರಮನೆಗೆ ಭೇಟಿ ನೀಡಿದ್ದರು. ಹಾಗಾಗಿ ವಿಐಪಿ ಮೂವ್‌ಮೆಂಟ್ ಸಹ ಇದ್ದ ಹಿನ್ನೆಲೆಯಲ್ಲಿ ಅವರ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ಜೊತೆಗೆ ಸಾಮಾನ್ಯ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಅರಮನೆಗೆ ಶನಿವಾರ ಭೇಟಿ ನೀಡಿದ್ದರು.
>
> -ಟಿ.ಎಸ್.ಸುಬ್ರಹ್ಮಣ್ಯ, ಉಪನಿರ್ದೇಶಕರು, ಅರಮನೆ ಮಂಡಳಿ.

ಅರಮನೆಗೆ ಪ್ರವಾಸಿಗರ ಲಗ್ಗೆ: ಅಂಬಾ ವಿಲಾಸ ಅರಮನೆ ಅಂದ–ಚಂದವನ್ನೂ ಭಾರೀ ಸಂಖ್ಯೆಯ ಪ್ರವಾಸಿಗರು ಶನಿವಾರ ಕಣ್ತುಂಬಿಕೊಂಡರು. ರಾಜ್ಯದ ವಿವಿಧ ಭಾಗದ ಪ್ರವಾಸಿಗರು, ದೇಶ–ವಿದೇಶದ ಪ್ರವಾಸಿಗರು ಮಾತ್ರವಲ್ಲದೆ, ಸ್ಥಳೀಯರು ಸೇರಿದಂತೆ ಶನಿವಾರ ಒಟ್ಟು 23,186 ಮಂದಿ ಅರಮನೆಗೆ ಭೇಟಿ ನೀಡಿದ್ದರು. ಶುಕ್ರವಾರ 15,168 ಮಂದಿ ಅರಮನೆಗೆ ಭೇಟಿ ನೀಡಿದ್ದರೆ, ಶನಿವಾರ ಇದು ದುಪ್ಪಟ್ಟಾಗಿದೆ.

ವಯಸ್ಕರು 12,258, ಮಕ್ಕಳು 2,856 ಹಾಗೂ ವಿದೇಶಿ ಪ್ರವಾಸಿಗರು 54 ಸೇರಿದಂತೆ ಒಟ್ಟಾರೆ ಶುಕ್ರವಾರ 15,168 ಮಂದಿ ಅರಮನೆಗೆ ಭೇಟಿ ನೀಡಿದ್ದರು. ಶನಿವಾರ ಈ ಸಂಖ್ಯೆ ಬಹುತೇಕ ಎರಡರಷ್ಟಾಗಿದ್ದು, ನಾಳೆ ಭಾನುವಾರವೂ ಇದೇ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಅರಮನೆಗೆ ಭೇಟಿ ನೀಡುವ ಸಾಧ್ಯತೆ ಇದ್ದೇ ಇದೆ.

ಸಂಸದೀಯ ಸ್ಥಾಯಿ ಸಮಿತಿ ಅರಮನೆಗೆ ಭೇಟಿ: ಕೃಷಿ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣಾ ಸಮಿತಿಯ ಸಂದದೀಯ ಸ್ಥಾಯಿ ಸಮಿತಿಗಳ (31 ಮಂದಿ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರು) ಸಹ ಶನಿವಾರ ಅರಮನೆಗೆ ಭೇಟಿ ನೀಡಿದ್ದರು. ಈ ವೇಳೆ ಅರಮನೆ ವೈಶಿಷ್ಟ್ಯ ಕಂಡು ಅವರು ಸಂಭ್ರಮಿಸಿದರು. ಈ ಸಮಿತಿಯು ಮೇ 23ರಿಂದ 25ರವರೆಗೆ ಮೈಸೂರು ಜಿಲ್ಲೆಯಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿದ್ದು, ಇದರ ಭಾಗವಾಗಿ ಈ ಸಮಿತಿ ಸದಸ್ಯರು ಇಂದು ಅರಮನೆಗೆ ಭೇಟಿ ನೀಡಿದ್ದರು.

ಮೃಗಾಲಯಕ್ಕೂ ಪ್ರವಾಸಿಗರ ದಂಡು: ಮೈಸೂರಿಗೆ ಪ್ರವಾಸಕ್ಕೆ ಬಂದ ಬಹುತೇಕರು ಅರಮನೆಯೊಂದಿಗೆ ಮೃಗಾಲಯಕ್ಕೂ ಭೇಟಿ ನೀಡುವುದು ಸಾಮಾನ್ಯ. ಅಂತೆಯೇ ಶನಿವಾರ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಮೃಗಾಲಯಕ್ಕೆ ಭೇಟಿ ನೀಡಿದ್ದರು. ಆ ಮೂಲಕ ಇಲ್ಲಿನ ಪ್ರಾಣಿ ಪಕ್ಷಿ ಸಂಕುಲ, ಪ್ರಾಕೃತಿ ಸೌಂದರ್ಯ ಕಂಡು ಬೆರಗಾದರು. ಮೃಗಾಲಯಕ್ಕೆ ಶುಕ್ರವಾರ 13,481 ಮಂದಿ ಭೇಟಿ ನೀಡಿದ್ದರೆ, ಶನಿವಾರ 20,293 ಮಂದಿ ಭೇಟಿ ನೀಡಿದ್ದರು. ಅದೇ ರೀತಿಯಲ್ಲಿ ಮೃಗಾಲಯ ಅಧೀನದ ಕಾರಂಜಿ ಕೆರೆಗೆ ಶುಕ್ರವಾರ 1,099 ಮಂದಿ ಭೇಟಿ ನೀಡಿದ್ದರೆ, ಶನಿವಾರ 1,630 ಮಂದಿ ಭೇಟಿ ನೀಡಿದ್ದರು. ಇದರೊಂದಿಗೆ ಮೈಸೂರಿನ ಇತರೆ ಪ್ರವಾಸಿ ತಾಣಗಳಿಗೂ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿ ಭೇಟಿ ನೀಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.05.2025 ಭಾನುವಾರ, ಮಳೆ ನಕ್ಷತ್ರ: ರೋಹಿಣಿ 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಮೂತ್ರ ಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಸಂಧಿವಾತ ವ್ಯಾದಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10ಕ್ಕೆ.

■ **ವಿಜಯನಗರ ಸೇವಾ ಟ್ರಸ್ಟ್, ನಾರಾಯಣ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಎಸ್. ಶಂಕರ್, ಕಾರ್ಯದರ್ಶಿ ನವೀನ್, ಸ್ಥಳ: ವಿಜಯನಗರ ಮುಡಾ ಸ್ಪೋರ್ಟ್ಸ್ ಮೈದಾನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಕಲಾ ಸುರುಚಿ ಸಂಸ್ಥೆ :** ಸಾಹಿತ್ಯ ಚಾವಡಿ–ಸಂವಾದ ಕಾರ್ಯಕ್ರಮ, ಪುರಾಣಗಳ ವಿವೇಚನೆ ಕುರಿತು ಪತ್ರಕರ್ತ ಸೂರ್ಯಪ್ರಕಾಶ್ ಪಂಡಿತ್ ಅವರಿಂದ ಭಾಷಣ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಪ್ರಗತಿ ಪ್ರತಿಷ್ಠಾನ :** ಪಶು–ಪಕ್ಷಿಗಳಿಗೆ ನೀರು ಕುಡಿಯುವ ತೊಟ್ಟಿಗಳನ್ನು ಉಚಿತವಾಗಿ ಪ್ರಾಣಿ ಪ್ರಿಯರಿಗೆ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಪ್ರತಿಷ್ಠಾನದ ಆವರಣ, ವಿದ್ಯಾರಣ್ಯಪುರಂ, ಸಂಜೆ 4ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಕುಂಚಕಾವ್ಯ ಸಾಂಸ್ಕೃತಿಕ ಸಮಿತಿ :** ವಾರ್ಷಿಕ ಕಲಾ ಪ್ರದರ್ಶನದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಚಿತ್ರ ಕಲಾವಿದೆ ಶ್ರೀಮತಿ ಶಾಂತಮಣಿ ಮುದ್ದಯ್ಯ, ಮುಖ್ಯ ಅತಿಥಿಗಳು : ಕಾವಾ ನಿಕಟ ಪೂರ್ವ ಡೀನ್ ವಿಜಯರಾವ್, ಅಧ್ಯಕ್ಷತೆ : ಕಾವಾ ಡೀನ್ ಎ.ದೇವರಾಜು, ಉಪಸ್ಥಿತರು : ಕಾವಾ ಆಡಳಿತಾಧಿಕಾರಿ ಶ್ರೀಮತಿ ನಿರ್ಮಲ ಮಠಪತಿ, ಶೈಕ್ಷಣಿಕ ಸಂಯೋಜಕ ಎ.ಪಿ. ಚಂದ್ರಶೇಖರ, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಸಂಜೆ 4.30ಕ್ಕೆ.

■ **ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು :** ನಮ್ಮ ಬಸವ ಜಯಂತಿ–2025, ನಮ್ಮ ನಡೆ ಅನುಭವ ಮಂಟಪದ ಕಡೆ, ಬೆಳಗ್ಗೆ 9ಕ್ಕೆ ಸಮೂಹ ವಚನಗಾಯನ, ಬೆಳಗ್ಗೆ 10ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಮುದಾಯದ ವಿದ್ಯಾರ್ಥಿಗಳಿಗೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ, ವಚನ ಗಾಯನ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಣೆ, ಸಮ್ಮುಖ : ಶ್ರೀ ಸಾಂಬಾಸದಾಶಿವ ಸ್ವಾಮೀಜಿ, ಅಧ್ಯಕ್ಷತೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉದ್ಘಾಟನೆ : ಸಂಸದರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ವಿಶೇಷ ಆಹ್ವಾನಿತರು : ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ವೀಣಾ ಕಾಶಪ್ಪನವರ್, ಶ್ರೀಮತಿ ಮುಕ್ತಾಂಬ, ಅಧ್ಯಕ್ಷತೆ : ಜೆಎಸ್‌ಎಸ್ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಮೊರಬದ ಮಲ್ಲಿಕಾರ್ಜುನ, ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಪ್ರೊ. ಡಿ.ವಿ. ವಸಂತಕುಮಾರ್, ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕರಾದ ಪ್ರೊ. ಕವಿತಾ ರೈ; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಸಮ್ಮುಖ : ಶ್ರೀ ಚನ್ನಬಸವ ಸ್ವಾಮೀಜಿ, ಕೃತಿ ಬಿಡುಗಡೆ : ಡಾ. ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಅಧ್ಯಕ್ಷತೆ : ಅರಣ್ಯ ಸಚಿವ ಬಿ. ಈಶ್ವರ ಖಂಡ್ರೆ, ಮುಖ್ಯ ಭಾಷಣ : ಲೋಕಾಯುಕ್ತ ಬಿ.ಎಸ್. ಪಾಟೀಲ್, ಸಮಾರೋಪ ಭಾಷಣ : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮುಖ್ಯ ಅತಿಥಿಗಳು : ಸಂಸದ ಸುನೀಲ್ ಬೋಸ್, ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಮಹದೇವ ಬಿದರಿ, ನೈಸ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಖೇಣಿ, ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ. ಬಸವರಾಜು (ಹಿನಕಲ್), ಸಂಜೆ 6ಕ್ಕೆ ಹಿಂದೂಸ್ಥಾನಿ ಗಾಯಕ ಉಸ್ತಾದ್ ಫಯಾಜ್ ಖಾನ್ ಅವರಿಂದ ವಚನ ಗಾಯನ, ಸ್ಥಳ:ಕಲಾಮಂದಿರ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಚಾರು ಮಂಜೂಷಾ–6 ಕಾರ್ಯಕ್ರಮ, 'ಒಂದು ಕಿರುಪರಿಚಯ' ನಾಟಕ ಪ್ರದರ್ಶನ, ನಾಟಕ ರಚನೆ : ಡಾ. ದು. ಸರಸ್ವತಿ, ನಿರ್ದೇಶನ : ದೀಪಕ್ ಶ್ರೀನಿವಾಸನ್, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ವರ್ತುಲ ರಸ್ತೆ, ಸಂಜೆ 6.30ಕ್ಕೆ.

■ **ರಂಗಾಯಣ :** ರಂಗ ಸಂಗೀತ ಕಾರ್ಯಕ್ರಮ, ದೀಪಕ್ ಕುರ್ಕಿ ಸಿದ್ಧಪಡಿಸಿದ ಸಮಕಾಲೀನ ನೃತ್ಯ ಪ್ರದರ್ಶನ, ಸ್ಥಳ: ರಂಗಾಯಣ ಭೂಮಿಗೀತ, ಸಂಜೆ 6.30ಕ್ಕೆ.

■ **ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ, ಕಾವಲು ಮನೆ ಸಾಂಸ್ಕೃತಿಕ ಕೇಂದ್ರ :** ಬೆಳಗ್ಗೆ 10.30ಕ್ಕೆ ಆಧುನಿಕ ಕನ್ನಡ ರಂಗಭೂಮಿ ಪ್ರಯೋಗಶೀಲತೆ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಕೆ.ಎಂ. ಗಾಯತ್ರಿ, ಪ್ರಾಸ್ತಾವಿಕ ನುಡಿ : ಹಿರಿಯ ರಂಗಕರ್ಮಿ ಸಿ. ಬಸವಲಿಂಗಯ್ಯ, ಮುಖ್ಯ ಅತಿಥಿಗಳು : ಸಂಗೀತ ವಿವಿ ಉಪಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಅಧ್ಯಕ್ಷತೆ : ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ, ಉಪಸ್ಥಿತರು : ವೇದಿಕೆ ಅಧ್ಯಕ್ಷ ರಾಜೇಶ್ ಹೆಚ್. ತಲಕಾಡು, ಸಂಜೆ 6.30ಕ್ಕೆ ಸಿ2ಎಂ ಎಜುಟೆಕ್ ಸೆಲ್ಯೂಷನ್ಸ್ ಲಿಮಿಟೆಡ್ ಅವರಿಂದ ಸಾಹಿತಿ ದೇವನೂರು ಮಹಾದೇವ ಅವರ ಎದೆಗೆ ಬಿದ್ದ ಅಕ್ಷರ ನಾಟಕ ಪ್ರದರ್ಶನ, ರಂಗರೂಪ : ಎಸ್. ನಟರಾಜ ಬೂದಾಳ್, ಆರ್. ಸಂತೋಷ್ ನಾಯಕ್, ನಿರ್ದೇಶನ : ಸಿ. ಬಸವಲಿಂಗಯ್ಯ (ಬಸು), ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಡಾ.ಶ್ರೀರಾಂಭಟ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ –ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ ಎಸ್.ಸ್ನೇಹ, ಅಮೃತಾ ನಿತಿನ್ ಶಾಸ್ತ್ರೀ, ವ್ಯಾಖ್ಯಾನ –ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ರಮೇಶ್ ಚಂದ್ರ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಥೈರಾಯ್ಡ್ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳಲ್ಲಿ ಥೈರಾಯ್ಡ್ ತೊಂದರೆಗಳು ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮಕ್ಕಳ ಮತ್ತು ಹದಿಹರೆಯದವರ ಎಂಡೋಕ್ರೈನಾಲಜಿಸ್ಟ್ ಡಾ.ತೃಪ್ತಿ ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ – ವಿವಿಧ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕು ಚೆಲ್ಲುವ ಬಾನುಲಿ ಸರಣಿ, 10.55 ಮನ್ ಕೀ ಬಾತ್– ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು

ಮಧ್ಯಾಹ್ನ: 12.00 ವನಿತಾ ವಿಹಾರ –ಮಹಿಳಾ ಉದ್ಯಮಿ ಶಾರದಾ ಎಲ್ ಭಾರಧ್ವಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು –ಹೆಚ್.ಜಿ.ಶೋಭಾ, 12.35 ದೇವರನಾಮ–ದೇವರದಾಸೀಮಯ್ಯ ಅವರ ವಚನಗಳು, 12.45 ಜನಪದ ಸಂಗೀತ: ಟಿ.ನರಸೀಪುರ ತಾಲೂಕು ಸೋಸಲೆ ಹೋಬಳಿ ಕೈಯಂಬಳ್ಳಿ ಗ್ರಾಮದವರಾದ ಇಂದ್ರಮ್ಮ ಮತ್ತು ಸಂಗಡಿಗರಿಂದ ಬಿಸಿಲು ಮಾರಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ರೇಣುಕಾ ನಾಕೋಡ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ.ಎನ್.ರಮಣಿ–ಕೊಳಲು ವಾದನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ– ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–'ಪಂಜೆ ಮಂಗೇಶರಾಯರ ಬದುಕು ಮತ್ತು ಬರಹ'– ಈ ವಿಷಯವಾಗಿ ಮಾತನಾಡುತ್ತಾರೆ: ಡಾ. ಕೋರನ ಸರಸ್ವತಿ ಪ್ರಕಾಶ್, 8.00 ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಷ್ಟ್ರದ ಜನತೆಯೊಡನೆ ಹಂಚಿಕೊಂಡ ಮನದ ಮಾತು ಕಾರ್ಯಕ್ರಮದ ಕನ್ನಡ ಅವತರಣಿಕೆಯ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ರಾಜಪ್ಪ, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ನಿಶಾಂತ್ ಶರ್ಮ ಅವರ ತಬಲಾ ವಾದನ, ದಿನಕರ್ ಶರ್ಮ ಅವರ ಹಾರ್ಮೋನಿಯಂ ವಾದನ

■ **ವಿಸ್ಮಯ ಬಳಗ, ಮೈಸೂರು :** ವಿಸ್ಮಯ 25 ಬೆಳ್ಳಿ ಬೆರಗು, ವಿಸ್ಮಯ ಸಾಹಿತ್ಯ ಪ್ರೀತಿ, ಬೆಳಗ್ಗೆ 10ಕ್ಕೆ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಖ್ಯಾತ ವನ್ಯಜೀವಿ ಛಾಯಾಚಿತ್ರಕಾರ ಕೃಪಾಕರ ಸೇನಾನಿ, ಬೆಳಗ್ಗೆ 10.30 ಕ್ಕೆ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಶ್ರೀ ಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮೀಜಿ, ಶ್ರೀ ಸಾಲೂರು ಬೃಹನ್ಮಠದ ಡಾ. ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್‌ನ ಶ್ರೀ ಅರ್ಜುನ ಅವಧೂತ ಮಹಾರಾಜ ಗುರುಗಳು, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಬೆಳ್ಳಿ ಬೆರಗು ಮಾಲಿಕೆಯ ಪುಸ್ತಕಗಳ ಬಿಡುಗಡೆ: ಸಾಹಿತಿ ಡಾ. ನಾಗತಿಹಳ್ಳಿ ಚಂದ್ರಶೇಖರ್, ಉಪಸ್ಥಿತರು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಂಸದ ಪ್ರತಾಪ್ ಸಿಂಹ, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಪ್ರಾಸ್ತಾವಿಕ ನುಡಿ : ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಂ. ಕೃಷ್ಣೇಗೌಡ; ಮಧ್ಯಾಹ್ನ 12 ರಿಂದ ವಿಸ್ಮಯ ಮಾಧ್ಯಮ ಪ್ರೀತಿ, ಅಧ್ಯಕ್ಷತೆ : ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ವಿಸ್ಮಯ ಇಂಡಿಯಾ ಯೂ ಟ್ಯೂಬ್ ವಾಹಿನಿಗೆ ಚಾಲನೆ : ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಮುಖ್ಯ ಅತಿಥಿಗಳು : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಹಿರಿಯ ಪತ್ರಕರ್ತರಾದ ಸುದರ್ಶನ್ ಚನ್ನಂಗಿಹಳ್ಳಿ, ರವಿ ಹೆಗಡೆ, ಎನ್.ಕೆ. ಚನ್ನೇಗೌಡ, ರವಿಕೋಟಿ, ಅಂಶಿ ಪ್ರಸನ್ನಕುಮಾರ್; ಮಧ್ಯಾಹ್ನ 2 ರಿಂದ ವಿಸ್ಮಯ ಸಮಾಜ ಪ್ರೀತಿ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಮಾಜಿ ಸಚಿವ ಎಸ್.ವಿಶ್ವನಾಥ್, ಸಂಸದ ಸುನೀಲ್ ಬೋಸ್, ಶಾಸಕರಾದ ಡಿ. ರವಿಶಂಕರ್, ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಹೆಚ್.ಎಂ. ಗಣೇಶ್ ಪ್ರಸಾದ್, ಸಿ.ಎನ್. ಮಂಜೇಗೌಡ, ಕೆ. ವಿವೇಕಾನಂದ; ಸಂಜೆ 4.30 ರಿಂದ ವಿಸ್ಮಯ ಧಾರ್ಮಿಕ ಪ್ರೀತಿ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧಿಪತಿ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸಮ್ಮುಖ : ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಸಾನ್ನಿಧ್ಯ : ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಶ್ರೀ ಪ್ರಸನ್ನನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಶಂಭುನಾಥ ಸ್ವಾಮೀಜಿ, ಅಧ್ಯಕ್ಷತೆ : ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ವಿಸ್ಮಯ ಪ್ರಶಸ್ತಿ ಪುರಸ್ಕಾರ : ಹಿರಿಯ ಕವಿ ಕೆ.ಸಿ. ಶಿವಪ್ಪ, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಸಂಗೀತ ನಿರ್ದೇಶಕ ರವಿ ಬಸ್ರೂರು, ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, ಐಎಎಸ್ ಆಯ್ಕೆಗೊಂಡ ಅಭ್ಯರ್ಥಿ ಶ್ರೀಮತಿ ಎ.ಸಿ. ಪ್ರೀತಿ; ರಾತ್ರಿ 7 ರಿಂದ ವಿಸ್ಮಯ ಕಲಾ ಪ್ರೀತಿ, ಅಧ್ಯಕ್ಷತೆ : ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಮುಖ್ಯ ಅತಿಥಿಗಳು : ಸಂಗೀತ ನಿರ್ದೇಶಕ ಹಂಸಲೇಖ, ಶಾಸಕ ಸಿ.ಪಿ. ಯೋಗೀಶ್ವರ್, ಲಹರಿ ಸಂಗೀತ ಸಂಸ್ಥೆ ಮಾಲೀಕ ಲಹರಿ ವೇಲು, ಸಂಗೀತ ನಿರ್ದೇಶಕ ರವಿ ಬಸ್ರೂರು, ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, ಚಲನಚಿತ್ರ ನಟ ಮಂಡ್ಯ ರಮೇಶ್, ಹಿನ್ನೆಲೆ ಗಾಯಕರಾದ ಶ್ರೀಮತಿ ಶಮಿತಾ ಮಲ್ನಾಡ್, ಶ್ರೀಮತಿ ಹಂಸಿಕಾ ಅಯ್ಯರ್, ಹಾಸ್ಯ ನಟ ಚಂದ್ರಪ್ರಭಾ, ಸ್ಥಳ: ಘಟಿಕೋತ್ಸವ ಭವನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.

ಕಾವೇರಿ ಆರತಿ ವೇದಿಕೆ ನಿರ್ಮಾಣಕ್ಕೆ ಶೀಘ್ರವೇ ಟೆಂಡರ್

ಬೆಂಗಳೂರು, ಮೇ 24– ಮಂಡ್ಯ ಜಿಲ್ಲೆ ಕೆಆರ್‌ಎಸ್‌ನಲ್ಲಿ 'ಕಾವೇರಿ ಆರತಿ'ಗೆ ವೇದಿಕೆ ನಿರ್ಮಿಸಲು ಶೀಘ್ರ ಟೆಂಡರ್ ಕರೆಯಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ಬೆಂಗಳೂರಲ್ಲಿ ಸುರಂಗ ರಸ್ತೆ ನಿರ್ಮಾಣ ಹಾಗೂ ಮಂಡ್ಯದ ಕೆಆರ್ ಎಸ್‌ನಲ್ಲಿ ಕಾವೇರಿ ಆರತಿ ನಡೆಸುವ ಸಂಬಂಧ ವಿಧಾನ ಸೌಧದಲ್ಲಿ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ಆರತಿ ನಮ್ಮ ರಾಜ್ಯದ ಸಂಸ್ಕೃತಿ, ಪರಂಪರೆಯ ಪ್ರತೀಕ ಎಂದು ಹೇಳಿದರು.

ಕೊಡಗು, ಮಲೆನಾಡು, ಕರಾವಳಿ, ಬೆಂಗಳೂರು ಭಾಗದ ಆಚರಣೆ, ಈ ಭಾಗದ ಮಠಮಾನ್ಯಗಳ ಪರಂಪರೆ ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ರಮದ ವಿಧಿವಿಧಾನ ರೂಪಿಸಲಾಗುವುದು. ವಾರಾಂತ್ಯದ 3 ದಿನಗಳ ಕಾಲ ಈ ಕಾರ್ಯಕ್ರಮ ನಡೆಸಬೇಕೆಂಬ ಆಲೋಚನೆ ಇದೆ. ಪೂಜಾ ಕೈಂಕರ್ಯದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಏರ್ಪಡಿಸಲಾಗುವುದು. ಇದಕ್ಕಾಗಿ ಕಾವೇರಿ ನಿಗಮದಲ್ಲಿ 92 ಕೋಟಿ ಹಣ ಮೀಸಲಿಡಲಾಗಿದೆ ಎಂದು ತಿಳಿಸಿದರು.

ಇಂಧನ ಇಲಾಖೆ, ಲೋಕೋಪಯೋಗಿ, ಪ್ರವಾಸೋದ್ಯಮ, ಧಾರ್ಮಿಕ ದತ್ತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕಾರ್ಯಕ್ರಮಕ್ಕೆ ಸಹಕಾರ ನೀಡಲಿವೆ. ಸಾರ್ವಜನಿಕ ವೀಕ್ಷಣೆಗಾಗಿ 10 ಸಾವಿರ ಆಸನಗಳ ಗ್ಯಾಲರಿ ವಿನ್ಯಾಸ ಕೂಡ ಸಿದ್ಧವಾಗಿದೆ. ಈ ಕಾರ್ಯಕ್ರಮಕ್ಕೆ ಅತ್ಯುತ್ತಮ ಗೀತೆ ರಚನೆಗೆ ಆಹ್ವಾನ ನೀಡಲಾಗಿದೆ. ಇದು ದಕ್ಷಿಣ ಭಾರತದ ಕಾರ್ಯಕ್ರಮವಾಗಲಿದ್ದು, ಕಾವೇರಿ ನದಿ ಹರಿಯುವ ಕರ್ನಾಟಕ, ತಮಿಳುನಾಡು, ಕೇರಳ, ಪುದುಚೇರಿ ರಾಜ್ಯಗಳ ಭಾಗವಹಿಸುವಿಕೆಗೂ ಅವಕಾಶ ಕಲ್ಪಿಸಲಾಗುವುದು. ಬಹುತೇಕ ಎಲ್ಲಾ ಹಂತದ ಕಾರ್ಯಗಳ ನೀಲನಕ್ಷೆಗಳು ಸಿದ್ಧವಾಗಿವೆ. ಹರಿಯುವ ನೀರಿನಲ್ಲಿ ವೇದಿಕೆ ನಿರ್ಮಾಣಕ್ಕೆ ಶೀಘ್ರದಲ್ಲೇ ಟೆಂಡರ್ ಕರೆಯಲಾಗುವುದು ಎಂದು ಹೇಳಿದರು.

ಸುರಂಗ ಮಾರ್ಗ: ಬೆಂಗಳೂರಿನ ಎರಡು ಹಂತದ ಸುರಂಗ ರಸ್ತೆ ನಿರ್ಮಾಣಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದ್ದು, ಮೊದಲ ಹಂತದ ಯೋಜನೆಗೆ ಶೀಘ್ರವೇ ಟೆಂಡರ್ ಕರೆಯಲಾಗುವುದು. ಈ ಹಿನ್ನೆಲೆಯಲ್ಲಿ ಸುರಂಗ ರಸ್ತೆಯ ಪ್ರವೇಶ ಹಾಗೂ ನಿರ್ಗಮನ ಸ್ಥಳದಲ್ಲಿ ಸಂಚಾರ ದಟ್ಟಣೆ ಆಗಬಾರದೆಂಬ ಉದ್ದೇಶದಿಂದ ಈ ಯೋಜನೆಗೆ ಟೆಂಡರ್ ಕರೆಯುವ ಮುನ್ನ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಅಧಿಕಾರಿಗಳು, ಡಿಜಿಪಿ, ಐಜಿಪಿ ಮತ್ತು ಸಂಚಾರ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ವಿಧಾನಸೌಧದ ಒಂದು ಕಿ.ಮೀ ಸುತ್ತಮುತ್ತ ಎಲ್ಲೂ ನಿರ್ಗಮನಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಇಲ್ಲಿ ಟ್ರಾಫಿಕ್ ಜಾಮ್ ಆದರೆ ಎಲ್ಲಾ ಕಡೆ ಸಮಸ್ಯೆಯಾಗುತ್ತದೆ. ಹೀಗಾಗಿ ಪರಿಶೀಲಿಸಲು ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದು ವಿವರಿಸಿದರು.

ಇನ್ನು ಬೆಂಗಳೂರಿನಲ್ಲಿ 114 ಕಿ.ಮೀ ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ತೀರ್ಮಾನ ಮಾಡಿದ್ದು, ಈ ಯೋಜನೆ ಸಂಬಂಧ ಸಂಚಾರ ಪೊಲೀಸ್ ಅಧಿಕಾರಿಗಳ ಅಭಿಪ್ರಾಯ ಪಡೆಯಲಾಗಿದೆ. ಬೆಂಗಳೂರಿನ ಕಸ ವಿಲೇವಾರಿ ವಿಚಾರವಾಗಿ ದೊಡ್ಡ ಕ್ಷೇತ್ರಗಳಲ್ಲಿ ಎರಡು ಹಾಗೂ ಉಳಿದೆಡೆ ಒಂದೊಂದರಂತೆ ಒಟ್ಟು 33 ಪ್ಯಾಕೇಜ್‌ಗಳನ್ನು ಕರೆಯಲು ತೀರ್ಮಾನಿಸಿದ್ದೇವೆ. ಸುಮಾರು 4 ಸಾವಿರ ಕೋಟಿ ಮೊತ್ತದ ಈ ಯೋಜನೆಗೆ ಏಳು ವರ್ಷಗಳ ಅವಧಿಗೆ ಟೆಂಡರ್ ಕರೆಯಲಾಗುತ್ತಿದೆ ಎಂದರು.

ಸುಪ್ರೀಂಕೋರ್ಟ್ ಕೊಲಿಜಿಯಂನಲ್ಲಿ ರಾಜ್ಯದವರೇ ಆದ ನ್ಯಾಯಮೂರ್ತಿ ಬಿ.ವಿ.ನಾಗರತ್ನಗೆ ಸ್ಥಾನ

ನವದೆಹಲಿ,ಮೇ.24– ಸುಪ್ರೀಂಕೋರ್ಟ್‌ನ ಏಕೈಕ ಮಹಿಳಾ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಕೊಲಿಜಿಯಂನ ಸದಸ್ಯರಾಗಿದ್ದಾರೆ. ನ್ಯಾಯಮೂರ್ತಿ ಅಭಯ್ ಎಸ್. ಓಕಾ ನಿವೃತ್ತರಾದ ನಂತರ ಶನಿವಾರ ನಾಗರತ್ನ ಅವರು ಕೊಲಿಜಿಯಂನ ಭಾಗವಾದರು.



ಮಂಡ್ಯ ಜಿಲ್ಲೆ ಪಾಂಡವಪುರದವರಾದ ಬಿ.ವಿ.ನಾಗರತ್ನ ಅವರು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗುವ ಸರದಿಯಲ್ಲಿದ್ದಾರೆ. 2027ರ ಸೆಪ್ಟೆಂಬರ್ 23ರಂದು ದೇಶದ ಮೊದಲ ಮಹಿಳಾ ಸಿಜೆಐ ಆಗಿ ಬಿ.ವಿ.ನಾಗರತ್ನ ಅವರ ಕಾರ್ಯಭಾರ ಆರಂಭವಾಗಲಿದೆ. ಅವರ ಸೇವಾವಧಿ 2027ರ ಅಕ್ಟೋಬರ್ 29ರಂದು ಕೊನೆಗೊಳ್ಳಲಿದೆ.

ಕೊಲಿಜಿಯಂನಲ್ಲಿ ಸಿಜೆಐ ಬಿ.ಆರ್.ಗವಾಯಿ, ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ವಿಕ್ರಮ್ ನಾಥ್, ನ್ಯಾಯಮೂರ್ತಿ ಜೆ.ಕೆ.ಮಾಹೇಶ್ವರಿ ಮತ್ತು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಇದ್ದಾರೆ. ಹಿರಿಯ ನ್ಯಾಯಮೂರ್ತಿಗಳ ಮಂಡಳಿಯು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನ ನ್ಯಾಯಮೂರ್ತಿಗಳ ನೇಮಕಾತಿಗೆ ಹೆಸರುಗಳನ್ನು ಆಯ್ಕೆ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಿದೆ. ನ್ಯಾಯಮೂರ್ತಿಗಳ ವರ್ಗಾವಣೆಯನ್ನೂ ನಿರ್ಧರಿಸಲಿದೆ.

ಬಿ.ವಿ.ನಾಗರತ್ನ ಕರ್ನಾಟಕದವರು: 1962ರ ಅಕ್ಟೋಬರ್ 30ರಂದು ಮಂಡ್ಯ ಜಿಲ್ಲೆ ಪಾಂಡವಪುರದಲ್ಲಿ ಜನಿಸಿದ ಬಿ.ವಿ.ನಾಗರತ್ನ ಅವರು, ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಅವರ ಪುತ್ರಿ.

ತೈಲ ತುಂಬಿದ ಕಂಟೇನರ್ ಸಮುದ್ರ ಪಾಲು

ತಿರುವನಂತಪುರ, ಮೇ.24– ಕೊಚ್ಚಿಗೆ ಬರುತ್ತಿದ್ದ ಸರಕು ಸಾಗಣೆ ಹಡಗಿನಲ್ಲಿದ್ದ ತೈಲ ತುಂಬಿದ ಕಂಟೇನರ್‌ಗಳು ಸಮುದ್ರಕ್ಕೆ ಬಿದ್ದ ಕಾರಣ ಆತಂಕ ಸೃಷ್ಟಿಯಾಗಿದೆ. ಕಂಟೇನರ್‌ಗಳು ದಡಕ್ಕೆ ಬಂದರೆ ಅವುಗಳ ಬಳಿ ತೆರಳದಂತೆ ಕೇರಳ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಪ್ರಾಧಿಕಾರವು (ಕೆಎಸ್‌ಡಿಎಂಎ) ಜನರಿಗೆ ಎಚ್ಚರಿಸಿದೆ. ಕೊಚ್ಚಿ ಕರಾವಳಿಯಿಂದ ನೈರುತ್ಯಕ್ಕೆ 38 ನಾಟಿಕಲ್ ಮೈಲುಗಳಷ್ಟು ದೂರದಲ್ಲಿ ಅರಬ್ಬಿ ಸಮುದ್ರದಲ್ಲಿ ಅಪಘಾತ ಸಂಭವಿಸಿದೆ. ಲೈಬೀರಿಯಾ ಧ್ವಜ ಹೊತ್ತಿದ್ದ ಹಡಗು ವಿಝಿಂಜಂನಿಂದ ಕೊಚ್ಚಿಗೆ ಪ್ರಯಾಣಿಸುತ್ತಿದ್ದಾಗ ಒಂದು ಭಾಗಕ್ಕೆ ವಾಲಿದ್ದರಿಂದ ಸುಮಾರು ಹತ್ತು ಕಂಟೇನರ್‌ಗಳು ಸಮುದ್ರಕ್ಕೆ ಬಿದ್ದಿವೆ ಎಂದು ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ.

ಹಡಗಿನಲ್ಲಿದ್ದ ಎಲ್ಲ 24 ಸಿಬ್ಬಂದಿಯನ್ನು ಕರಾವಳಿ ಕಾವಲು ಪಡೆ ಮತ್ತು ನೌಕಾಪಡೆ ರಕ್ಷಿಸಿದೆ. ಕಂಟೇನರ್‌ಗಳಲ್ಲಿ ಮರೀನ್ ಗ್ಯಾಸ್ ಆಯಿಲ್ (ಹಡಗು, ನೌಕೆಗಳಲ್ಲಿ ಬಳಸುವ ಇಂಧನ) ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮಂಡ್ಯ ಜಿಲ್ಲೆ, ಚಿಕ್ಕನಹಳ್ಳಿ, ಕೋಡಿಶೆಟ್ಟಿಪುರ ಬಸ್ ಸ್ಟಾಂಡ್ ಹತ್ತಿರ ಮನೆ ನಂ.68/2ರಲ್ಲಿ ವಾಸವಾಗಿರುವ ಲೇಟ್ ಕೃಷ್ಣಗೌಡರವರ ಮಗನಾದ ಶ್ರೀ ಮಲ್ಲೇಶ್ ಕೆ. ಇವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರುಸಿಟಿ, ಯರಗನಹಳ್ಳಿ, 13ನೇ ಕ್ರಾಸ್, ಗೋಪಿಕಾ ಶಾಲೆ ಹಿಂಭಾಗ, ಶ್ರೀ ವೀರಭದ್ರೇಶ್ವರ ನಿಲಯ, ಇಲ್ಲಿ ವಾಸವಾಗಿರುವ ಲೇಟ್ ಸಂಜುಂಡಪ್ಪರವರ ಮಗನಾದ ಶ್ರೀ ಬಿ.ಎನ್.ಶಿವಶಂಕರ ರವರಿಂದ ಕ್ರಯಕ್ಕೆ ಪಡೆದುಕೊಳ್ಳುವವರಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಆಸಕ್ತಿ ಹಾಗೂ ಹಿತಾಸಕ್ತಿ ಇದ್ದಲ್ಲಿ ಅಥವಾ ಈ ಕುರಿತು ಯಾರಿಗಾದರೂ ಯಾವುದೇ ರೀತಿಯ ತಕರಾರು ಇದ್ದಲ್ಲಿ ಸದರಿ ವ್ಯಕ್ತಿಗಳು ಸೂಕ್ತ ದಾಖಲಾತಿಗಳೊಡನೆ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 7 ದಿನಗಳೊಳಗೆ ತಮ್ಮ ತಕರಾರನ್ನು ಖುದ್ದಾಗಿಯಾಗಲೀ ಅಥವಾ ಲಿಖಿತ ರೂಪದಲ್ಲಾಗಲೀ ನಮ್ಮ ಕಕ್ಷಿದಾರರ ವಿಳಾಸಕ್ಕಾಗಲೀ ಅಥವಾ ನಮ್ಮ ಕಛೇರಿಗೆ ಸಲ್ಲಿಸತಕ್ಕದ್ದು, ಮೊಬೈಲ್ ಸಂಖ್ಯೆ 9448246647, 7975679353 ಹಾಗೂ 7019664864 ಈ ಸಂಖ್ಯೆ ಗಳಿಗೆ ಮಾಹಿತಿ ನೀಡುವುದು. ಒಂದು ವೇಳೆ 7 ದಿನಗಳೊಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯಪತ್ರವನ್ನು ಬರೆಸಿ ನೋಂದಣಿ ಮಾಡಿಸಿಕೊಳ್ಳಲು ಸಿದ್ಧರಿರುತ್ತಾರೆ, ಆನಂತರ ಬಂದ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ.179, ಸರ್ವೆ ನಂ.183/1, 185/1, 186, 187, 188, 190, 191, 192/1, 193, 195, ಮತ್ತು 203ರಲ್ಲಿನ ಒಟ್ಟು 40 ಎಕರೆ 13 ಗುಂಟೆ ವಸತಿ ಉದ್ದೇಶಿತ ಅನ್ಯಾಕ್ರಾಂತ ಜಮೀನಿನಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ವಿನ್ಯಾಸ ನಕ್ಷೆಯನ್ವಯ ಬಿ.ಎಸ್.ಎನ್.ಎಲ್. ನೌಕರರ ಹೌಸಿಂಗ್ ಸಹಕಾರ ಸಂಘ(ನಿ), ಮೈಸೂರು ರವರು ನಿರ್ಮಿಸಿ ಅಭಿವೃದ್ಧಿಪಡಿಸಿರುವ ದೂರವಾಣಿನಗರ ಬಡಾವಣೆಯ ಬ್ಲಾಕ್ ನಂ.20ರಲ್ಲಿ 3ನೇ ನಂಬರ್ ನಿವೇಶನದ ವಿಸ್ತೀರ್ಣ ಪೂರ್ವ ಪಶ್ಚಿಮ: 50.00 ಅಡಿಗಳು, ಉತ್ತರ ದಕ್ಷಿಣ: (151.00 + 141.00)/2 ಅಡಿಗಳುಳ್ಳ ನಿವೇಶನಕ್ಕೆ ಚೆಕ್ಕುಬಂಧಿ:–

ಪೂರ್ವಕ್ಕೆ : ಬ್ಲಾಕ್ ನಂ.20 ರ ನಿವೇಶನ ನಂ.2, ಪಶ್ಚಿಮಕ್ಕೆ : ಬ್ಲಾಕ್ ನಂ.20 ರ ನಿವೇಶನ ನಂ.4, ಉತ್ತರಕ್ಕೆ : 60.00 ಅಡಿ ರಸ್ತೆ, ದಕ್ಷಿಣಕ್ಕೆ : ಬೌಂಡರಿ, ಈ ಮಧ್ಯೆ ಇರುವ ಖಾಲಿ ನಿವೇಶನ.

ದಿ:23-05-2025 ಸಹಿ/- ಎ.ಎಂ.ಭಾಸ್ಕರ್,
ವಕೀಲರು, # 1411, ಸಿ.ಹೆಚ್.-26,
ಶ್ರೀ ಲಕ್ಷ್ಮೀ ನಿಲಯ, ಕೃಷ್ಣಮೂರ್ತಿಪುರಂ,
ಮೈಸೂರು-570004. ಮೊ: 9448246647

ನಕ್ಕರೆ ಅದೇ ಸ್ವರ್ಗ

ಮೈಸೂರು ಪಾಕ್ ಮಹಿಮೆ

ಗುಂಡ : ಮೂರು ಹಲ್ಲು ಒಮ್ಮೆಲೇ ಹೋದವು
ಗೆಳೆಯ : ಹೇಗೆ?
ಗುಂಡ : ಹೆಂಡತಿ ಮಾಡಿದ ಮೈಸೂರು ಪಾಕ್ ತಿಂದು !
ಗೆಳೆಯ : ಒತ್ತಾಯ ಏನಿತ್ತು? ಬೇಡ ಅಂತ ಹೇಳಬೇಕಿತ್ತು.
ಗುಂಡ : ಹಾಗೆ ಹೇಳಿದ್ದರೆ, ಇರೋ 32 ಹಲ್ಲು ಉದುರುತ್ತಿತ್ತು !!

ಮೈಸೂರು ಮಿತ್ರ

ಭಾನುವಾರ, 25 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಶ್ರಮವು ನಿನ್ನದೇ, ಸಮಯವು ನಿನ್ನದೇ, ಸಾಧಿಸುವ ಛಲವಿದ್ದರೆ ಪ್ರತಿಫಲ ಕೂಡ ನಿನ್ನದಾಗುವುದು...!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗದವ ಅರಸನಲ್ಲ, ಹಠ ಹಿಡಿದವ ಸಾಮ್ರಾಟನಲ್ಲ.

ನಿಮ್ಮ ಪತ್ರಗಳು

ಪಾಕ್ ಮೇಲಿನ ಸಿಟ್ಟಿಗೆ 'ಮೈಸೂರು ಪಾಕ್' ಹೆಸರೇ ಬದಲು

ಮಾನ್ಯರೆ,

ನಮ್ಮ ದೇಶದ ಜನರು 'ಪಾಕ್' ಪದವನ್ನೇ ಎಷ್ಟೊಂದು ದ್ವೇಷಿಸುತ್ತಿದ್ದಾರೆ ಎಂಬುದಕ್ಕೆ ಜೈಪುರದ ಮಿಠಾಯಿ ತಯಾರಕರು 'ಮೈಸೂರ್ ಪಾಕ್' ಹೆಸರನ್ನು 'ಮೈಸೂರು ಶ್ರೀ' ಅಂತ ಬದಲಿಸಿದ್ದಾರೆ ! ಮೋತಿ ಪಾಕ್, ಆಮ್ ಪಾಕ್, ಸೇರಿದಂತೆ ಪಾಕ್‌ಗಳಿಗೆಲ್ಲಾ ಶ್ರೀ ಎಂದು ಹೆಸರು ಬದಲಾಯಿಸಿಯಾಗಿದೆ.

ಪಹಲ್ಗಾವ್ ದಾಳಿಯ ಬಳಿಕ ದೇಶದಲ್ಲಿ ಪಾಕಿಸ್ತಾನ ವಿರುದ್ಧ ಎಷ್ಟೊಂದು ಆಕ್ರೋಶ ಮನೆ ಮಾಡಿದೆ ಎಂಬುದಕ್ಕೆ ಇದೂ ಒಂದು ಉದಾಹರಣೆ. ನಮ್ಮ ಸರ್ಕಾರ ನೆರೆ ದೇಶದ ವಿರುದ್ಧ ರಾಜತಾಂತ್ರಿಕ ಮತ್ತು ಸೇನಾ ಕ್ರಮ ಜರುಗಿಸಿದರೆ ರಾಜಸ್ಥಾನದ ವಿವಿಧ ಸಿಹಿ ತಿಂಡಿ ತಯಾರಿಸುತ್ತಿರುವವರು ತಮ್ಮದೇ ಆದ ರೀತಿಯಲ್ಲಿ ಪಾಕ್ ಕೃತ್ಯವನ್ನು ಖಂಡಿಸಿದ್ದಾರೆ. ಇದು ಗ್ರಾಹಕರ ಒತ್ತಾಯವೂ ಆಗಿತ್ತು ಎಂಬುದು ಇನ್ನೂ ಮಹತ್ವ ಪಡೆಯುತ್ತದೆ. ಜೈಪುರದ ಈ ಕ್ರಮವನ್ನು ದೇಶದೆಲ್ಲೆಡೆ ಅನುಕರಿಸುವಂತಾಗಲಿ. ಪಾಕ್ ಪದದ ನಿಜವಾದ ಅರ್ಥ ಬೇಯಿಸಿದ ಅಥವಾ ರುಚಿಕರ ಎಂದಿದ್ದರೂ ಅದೂ ಬೇಡ ಅಂದರೆ ಜನರ ಮನಸ್ಸಲ್ಲಿ ಈ ಪದ ಎಷ್ಟೊಂದು ಕಠೋರವಾಗಿ ಕಾಣುತ್ತಿರಬಹುದಲ್ಲವೆ?

ಮೈಸೂರಲ್ಲೇ ತಯಾರಾಗುವ ಉತ್ಪಾದನಾ ಕೇಂದ್ರದ ಹೆಸರನ್ನೂ ಬದಲಾಯಿಸಿ 'ಮೈಸೂರು ಶ್ರೀ' ಅಂತ ಮರು ನಾಮಕರಣ ಮಾಡಿದರೆ ಇನ್ನೂ ಚೆನ್ನ. ಗ್ರಾಹಕರೇ ಈ ಬದಲಾವಣೆ ನಿರೀಕ್ಷಿಸುತ್ತಿದ್ದಾರೆಂದರೆ, ಹಾಗೆ ಮಾಡುವುದರಿಂದ ಕಂಪನಿಗೆ ಯಾವುದೇ ನಷ್ಟ ಆಗದೇ, ರಾಷ್ಟ್ರ ಪ್ರೇಮವನ್ನೂ ಹೆಚ್ಚಿಸಿದಂತಾದೀತು !

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

ಸಿಇಟಿ, ನೀಟ್ ಪರೀಕ್ಷೆ ಫಲಿತಾಂಶಗಳು ಇನ್ನು ಒಟ್ಟಿಗೆ ಬರಲಿ

ಮಾನ್ಯರೆ,

ಸಿಇಟಿ ಫಲಿತಾಂಶ ಈಗ ಬಂದಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರು ನೀಟ್ ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದಾರೆ. ಸಾಮಾನ್ಯವಾಗಿ ಮೊದಲು ಸಿಇಟಿ ಫಲಿತಾಂಶ ಬರುತ್ತದೆ. ಸಿಇಟಿ ಕೌನ್ಸಿಲಿಂಗ್ ಸಹ ಬೇಗನೆ ಆರಂಭವಾಗುತ್ತದೆ. ಆದರೆ ನೀಟ್ ಫಲಿತಾಂಶ ಹಾಗೂ ಕೌನ್ಸೆಲಿಂಗ್ ತಡವಾಗುತ್ತದೆ.

ಸಿಇಟಿ ಹಾಗೂ ನೀಟ್ ಬರೆದಿರುವವರು ಆಯ್ಕೆ ಗೊಂದಲದಲ್ಲಿ ಇರುತ್ತಾರೆ. ಸಿಇಟಿ, ನೀಟ್ ಫಲಿತಾಂಶ ರ‍್ಯಾಂಕಿಂಗ್ ಅಂತರ ಏರುಪೇರಾಗಬಹುದು. ಕೆಲವರು ಎರಡರಲ್ಲೂ ಪರೀಕ್ಷೆ ಬರೆದಿರುತ್ತಾರೆ. ಯಾವುದಕ್ಕೆ ಸೇರಬೇಕು ಅಂತ ಯೋಚನೆ ಮಾಡುತ್ತಿರುತ್ತಾರೆ. ಇದರಿಂದ ಕೆಲವು ವಿದ್ಯಾರ್ಥಿಗಳಿಗೆ ಅಡ್ಮಿಶನ್ ತಡವಾಗಬಹುದು. ಆದ್ದರಿಂದ ಸಿಇಟಿ, ನೀಟ್ ಫಲಿತಾಂಶವನ್ನು ಒಟ್ಟಿಗೆ ಪ್ರಕಟಿಸಿದರೆ ವಿದ್ಯಾರ್ಥಿಗಳುತಮ್ಮ ನಿರ್ಧಾರವನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಇದರಿಂದ ವಿದ್ಯಾರ್ಥಿಗಳ ಅಡ್ಮಿಶನ್‌ಗೆ ಅನುಕೂಲವಾಗುತ್ತದೆ. ಆದ್ದರಿಂದ ಪ್ರವೇಶ ಪರೀಕ್ಷೆಯ ಫಲಿತಾಂಶ ಜೊತೆಯಾಗಿಯೇ ಬರಲಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಎಲ್ಲೆಂದರಲ್ಲಿ ಕಸ ಚೆಲ್ಲಬೇಡಿ

ಮಾನ್ಯರೆ,



ಮೈಸೂರು ನಗರದ ವಿದ್ಯಾರಣ್ಯಪುರಂ ಬಡಾವಣೆಯ ವಾರ್ಡ್ ನಂ.61ರ ಚಿಲುಮೆಯ ಉದ್ಯಾನವನದ ಪಕ್ಕದಲ್ಲಿರುವ ನಾಲ್ಕನೆಯ ಮುಖ್ಯ ರಸ್ತೆ, ಐದನೇ ಕ್ರಾಸ್‌ನಲ್ಲಿರುವ ಖಾಲಿ ನಿವೇಶನದಲ್ಲಿ ಕಸದ ರಾಶಿಯೋ ರಾಶಿ. ಗಾಳಿ ಬಂದಾಗಲೆಲ್ಲ ರಸ್ತೆಗೆ ಹರಡಿ ಅಕ್ಕ ಪಕ್ಕದ ನಿವಾಸಿಗಳಿಗೆ, ಉದ್ಯಾನವನದಲ್ಲಿ ವಿಹರಿಸುವವರಿಗೆ ರಸ್ತೆಯಲ್ಲಿ ಓಡಾಡುವವರು ಈ ದುರ್ವಾಸನೆಯನ್ನು ಸೇವನೆ ಮಾಡುವಂತಾಗಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗುತ್ತಿದೆ. ಸ್ವಚ್ಛತೆಯ ಬಗ್ಗೆ ಮಹಾನಗರ ಪಾಲಿಕೆಯು ಅರಿವನ್ನು ಮೂಡಿಸುತ್ತಿದ್ದರೂ ಜನರು ಮಾತ್ರ ತಮ್ಮ ಮನೆಯ ಕಸವನ್ನು ಖಾಲಿ ನಿವೇಶನ ಮತ್ತು ಚರಂಡಿಯಲ್ಲಿ ಹಾಕುವುದನ್ನು ಮಾತ್ರ ಮರೆತ್ತಿಲ್ಲ. ಸುಶಿಕ್ಷಿತರೇ ಈ ರೀತಿಯ ಕೆಲಸ ಮಾಡಲು ನಾಚಿಕೆಯಾಗಬೇಕು. ಪ್ರತಿನಿತ್ಯವೂ ಮಹಾನಗರ ಪಾಲಿಕೆಯ ಪೌರಕಾರ್ಮಿಕರು ಸ್ವಚ್ಛಗೊಳಿಸಿದರೆ ಮತ್ತೆ ಸಂಜೆಯಾಗುತ್ತಿದ್ದಂತೆ ಕಸವು ಆ ಸ್ಥಳದಲ್ಲಿ ರಾರಾಜಿಸುತ್ತದೆ. ಇದೇ ಅಲ್ಲದೆ ಬೀಡಾಡಿ ದನಗಳು ಕಸವನ್ನು ಚೆಲ್ಲಾಪಿಲ್ಲಿ ಮಾಡಿ ರಸ್ತೆಗೆ ಹರಡುತ್ತವೆ. ಸಾರ್ವಜನಿಕರು ಕೂಡ ಸ್ವಚ್ಛತೆಯನ್ನು ಕಾಪಾಡುವುದರಲ್ಲಿ ಕೈಜೋಡಿಸಬೇಕು. ಎಲ್ಲಿ ಸ್ವಚ್ಛತೆ ಇರುತ್ತದೆಯೋ ಅಲ್ಲಿ ಆರೋಗ್ಯವಿರುತ್ತದೆ. ಆದ್ದರಿಂದ ಖಾಲಿ ನಿವೇಶನ, ಚರಂಡಿ, ರಸ್ತೆ ಬದಿಯಲ್ಲಿ ದಯವಿಟ್ಟು ಕಸವನ್ನು ಹಾಕದೆ ನಿಗದಿಪಡಿಸಿದ ಸ್ಥಳದಲ್ಲೇ ಹಾಕಿ ಮೈಸೂರಿನ ಅಂದವನ್ನು ಹೆಚ್ಚಿಸಲು ಎಲ್ಲರ ಸಹಕಾರ ಬಹಳ ಮುಖ್ಯವಾಗಿರುತ್ತದೆ.

–ಪರಶಿವಮೂರ್ತಿ ಎನ್ ಪಿ, ನಂಜೇಪುರ, ಸರಗೂರು ತಾ.

ಮತ್ತೆ ಕೊರೊನಾ; ಮಾಸ್ಕ್ ಧರಿಸಿ, ಅಂತರ ಕಾಯ್ದುಕೊಂಡರೆ ಸಾಕು

ಮಾನ್ಯರೆ,

ಕಳೆದ ಐದು ವರ್ಷಗಳ ಹಿಂದೆ, ದೇಶದ ಆರ್ಥಿಕತೆಯನ್ನೇ ಬುಡಮೇಲು ಮಾಡಿದ ಸಾಂಕ್ರಾಮಿಕ ಕೊರೊನಾ ವೈರಸ್ ಈಗ ಮತ್ತೆ ಸಿಂಗಾಪುರ, ಚೀನಾ, ಹಾಂಗಾಗ್ ಸೇರಿದಂತೆ ಕೆಲವು ದೇಶಗಳಲ್ಲಿ ಕಾಣಿಸಿಕೊಂಡಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಕರ್ನಾಟಕವೂ ಸೇರಿದಂತೆ ದೇಶದಲ್ಲಿ 398 ಜನರಿಗೆ ಕೊರೊನಾ ಕಾಣಿಸಿಕೊಂಡಿದೆ ಎಂದು ಹೇಳಲಾಗುತ್ತಿದೆ. ಮುಂದೆ ಕಾಣಿಸಿಕೊಳ್ಳುವ ಕೊರೊನಾ ವೈರಸ್‌ನ ತಳಿ ಮೊದಲಿನಷ್ಟು ತೀವ್ರ ಮತ್ತು ಪ್ರಬಲವಾಗಿ ಇರುವುದಿಲ್ಲ. ಜನರು ಮಾಸ್ಕ್ ಧರಿಸಿ ಅಂತರ ಕಾಯ್ದುಕೊಂಡರೆ ಸಾಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಈ ಮೊದಲೇ ಹೇಳಿದೆ. ಆದರೆ ಕೆಲವು ದೃಶ್ಯ ಮಾಧ್ಯಮಗಳು ಮತ್ತೆ ಕೊರೊನಾ ಎಚ್ಚರಿಕೆ ಎಂದು ಜನರಲ್ಲಿ ಭಯ ಹುಟ್ಟಿಸುತ್ತಿವೆ. ಮಾಧ್ಯಮಗಳು ಜನರಿಗೆ ತಿಳುವಳಿಕೆ ನೀಡಬೇಕೇ ವಿನಃ ಭಯ ಮತ್ತು ಆತಂಕ ಹುಟ್ಟಿಸುವ ಕೆಲಸ ಮಾಡಬಾರದು. ಇದರಿಂದಾಗಿ ಸಾರ್ವಜನಿಕರು ದಿಗಿಲುಗೊಳ್ಳುತ್ತಾರೆ. ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆ ಈ ಬಗ್ಗೆ ಕೆಲವು ಮಾಧ್ಯಮಗಳಿಗೆ ಕಡಿವಾಣ ಹಾಕಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ ಮೈಸೂರು




ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ನಡೆದು ಬಂದ ದಾರಿಯೆಡೆಗೆ?

ಅಕ್ಷರ ಜ್ಞಾನ ಎಂಬುದು ಬಹುಶಃ ಮಕ್ಕಳಿಗೆ ತಂದೆ–ತಾಯಂದಿರು ನೀಡಬಹುದಾದಂತಹ ಅತ್ಯುತ್ತಮ ಉಡುಗೊರೆ. ಮಠ–ಮಂದಿರಗಳಲ್ಲಿ, ಗುರುಕುಲಗಳಲ್ಲಿ ಮರಳ ಮೇಲೆ ಅಕ್ಷರಗಳನ್ನು ತಿದ್ದುತ್ತಾ ಕಲಿತ ನಮ್ಮ ಹಿರಿಯರು ಅದರ ಮಹತ್ವವನ್ನು ಅರಿತಿದ್ದರಿಂದಲೇ ಎಂದೆಂದೂ ಮುಗಿಯದಷ್ಟು ಜ್ಞಾನ ಭಂಡಾರವನ್ನು ನಮಗಾಗಿ ಬಿಟ್ಟು ಹೋಗಿದ್ದಾರೆ. ಇಂದಿನ ಮಕ್ಕಳಿಗೆ ಕಲಿಯಲು ಅದೆಷ್ಟು ರೀತಿಯ ಅತ್ಯಾಧುನಿಕ ಸಾಧನಗಳಿವೆ! ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ ಎಂದ ಕುಮಾರವ್ಯಾಸ. ಅವನಿಗೇನು ಗೊತ್ತಿತ್ತು, ಈ ಅಳುಪುವ ಕಾರ್ಯವು ಮುಂದೊಂದು ದಿನ ಅದೆಷ್ಟು ಸಲೀಸಾಗಲಿದೆ ಅಂತ. (ಓಲೆಗರಿಯ ಮೇಲೆ ಲೆಕ್ಕಣಿಕೆಯಿಂದ ಮೃದುವಾಗಿ ಕೆತ್ತುತ್ತಾ ಬರಿಯುವಾಗ, ಒಂದು ತಪ್ಪಾದರೂ ಅದನ್ನು ಅಳುಪುವುದು ಏನು ಸಾಮಾನ್ಯದ ಕೆಲಸವೇ ಎಂದು ನಾನು ಅನೇಕ ಬಾರಿ ಲಿಪಿಕಾರರಿಗೆ ಮನದಲ್ಲೇ ಕೈ ಮುಗಿದಿರುವೆ.) ಜ್ಞಾನವನ್ನು ಗಳಿಸುವ ಹಾದಿಯಲ್ಲಿ ಪ್ರಥಮ ಹೆಜ್ಜೆ ಈ ಅಕ್ಷರ ಕಲಿಕೆ. ಮಗುವಿಗೆ ಅಕ್ಷರಗಳ ಪರಿಚಯ ಮಾಡಿಸಿದ ನಂತರವೇ ಅದಕ್ಕೆ ಓದುವ ರುಚಿಯನ್ನು–ಅಭಿರುಚಿಯನ್ನು ಪರಿಚಯಿಸುವುದು ಹೆತ್ತವರ ಆದ್ಯ ಕರ್ತವ್ಯಗಳಲ್ಲಿ ಒಂದು. ಅಲ್ಲಿಯವರಿಗೆ ಕೇವಲ ಮೌಖಿಕ ಅಥವಾ ಕೇಳುವ, ಓದಿದುದನ್ನು ಕೇಳುತ್ತಾ ಬೆಳೆದ ಮಗುವಿಗೆ ತಾನೇ ಓದಲು ಇದು ಪ್ರೇರೇಪಣೆ ನೀಡುತ್ತದೆ.



ಓದುವ ಹುಚ್ಚನ್ನು ನನ್ನಲ್ಲಿ ಹುಟ್ಟುಹಾಕಿದ ನನ್ನ ಹೆತ್ತವರಿಗೆ ನಾನು ಎಂದೆಂದೂ ಚಿರಋಣಿ. ನನ್ನ ಅಮ್ಮ ಕೇವಲ ಎರಡನೆಯ ತರಗತಿಯವರೆಗೆ ಮಾತ್ರ ಶಾಲೆ ಕಲಿತದ್ದು. ತಂದೆಯವರು ಅಂದಿನ ಲೋಯರ್ ಸೆಕಂಡರಿಯವರೆಗೆ. ಆದರೆ ಅವರಿಬ್ಬರಲ್ಲೂ ಅಪಾರವಾಗಿ ಇದ್ದ ಓದುವ ಹವ್ಯಾಸವು ಬಹುಶಃ ಸಹಜವಾಗಿಯೇ ನನಗೊಬ್ಬಳಿಗೇ ಅಲ್ಲದೆ ಎಲ್ಲ ಮಕ್ಕಳಿಗೂ ರವಾನೆಯಾಗಿತ್ತು. ಅಮ್ಮನಲ್ಲಿ ಎಂದೂ ಬತ್ತದ ಓದುವ ಆಸಕ್ತಿ. ಸ್ವ ಪರಿಶ್ರಮದಿಂದಲೇ ಅವಳು ಇಂಗ್ಲೀಷನ್ನೂ ನಿರರ್ಗಳವಾಗಿ ಓದುವಷ್ಟು ಪರಿಣತಿಯನ್ನು ಪಡೆದಿದ್ದಳೆಂದರೆ ಅದರಲ್ಲಿ ಎಳ್ಳಷ್ಟೂ ಅತಿಶಯೋಕ್ತಿ ಇಲ್ಲ.

ಮೈಸೂರಿನ ಪ್ರಖ್ಯಾತ ಪುಸ್ತಕ ಪ್ರಕಾಶಕರಾದ ಡಿ.ವಿ.ಕೆ. ಮೂರ್ತಿಗಳು ಅಪ್ಪನ ಆತ್ಮೀಯ ಗೆಳೆಯರು. ಅವರು ಅನೇಕ ಪುಸ್ತಕಗಳನ್ನು ಅಪ್ಪನಿಗೆ ಓದಲು ನೀಡುತ್ತಿದ್ದರು. ಅದರ ಮೊದಲ ಓದುಗಳು ಅಮ್ಮ. ಹೀಗಾಗಿ ರಾಮಾಯಣ, ಮಹಾಭಾರತ, ಹರಿವಂಶ ಮುಂತಾದವುಗಳಲ್ಲದೆ ಅರೇಬಿಯನ್ ನೈಟ್ಸ್, ಬಂಕಿಮ ಚಂದ್ರರ ಕಾದಂಬರಿಗಳಿಂದ ಹಿಡಿದು ಅ.ನ.ಕೃಷ್ಣರಾಯ, ತ.ರಾ. ಸುಬ್ಬರಾಯ, ಶಿವರಾಮ ಕಾರಂತ, ಕುವೆಂಪು, ತ್ರಿವೇಣಿಯವರೆಗೆ ಅಮ್ಮ ಎಲ್ಲವನ್ನೂ ಓದಿದುದಷ್ಟೇ ಅಲ್ಲ, ಅವುಗಳನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದಳು. ಅಪ್ಪ ಸಂಗೀತ ಗ್ರಂಥಗಳನ್ನು ಹೆಚ್ಚಾಗಿ ಓದುತ್ತಿದ್ದರು. ಜೊತೆಗೆ ಭರ್ತೃಹರಿಯ ನೀತಿ ಶತಕ, ಜಯದೇವನ ಗೀತಗೋವಿಂದ, ದಾಸ ಸಾಹಿತ್ಯ ಮುಂತಾದುವು ಅವರ ಪ್ರೀತಿಯ ಓದು. ನನ್ನ ಬಾಲ್ಯದಲ್ಲಿ ಅವರು ಗಂಟೆಗಟ್ಟಲೆ ದಾಸರ ಪದಗಳನ್ನು ಓದುತ್ತಾ ಕುಳಿತದ್ದನ್ನು ಕಂಡಾಗಲೆಲ್ಲ ನನಗೆ ಆಶ್ಚರ್ಯ ಆಗುತ್ತಿತ್ತು. ನನಗೆ ತಿಳಿದಿದ್ದಂತೆ ದಾಸರ ಪದಗಳು ಇರುವುದು ಹಾಡಲು. ಅದರಲ್ಲಿ ಗಂಟೆಗಟ್ಟಲೆ ಓದಲು ಏನಿದೆ ಎಂಬುದು ನನಗೆ ಅರ್ಥ ಆಗದ ವಿಷಯವಾಗಿತ್ತು. ಮುಂದೆ ದಾಸ ಸಾಹಿತ್ಯದ ರುಚಿ ನನಗೆ ಹತ್ತಿದಾಗ ಅವರು ಏಕೆ ಅಷ್ಟು ಗಹನವಾಗಿ ಅದರ ಅಧ್ಯಯನದಲ್ಲಿ ತೊಡಗಿರುತ್ತಿದ್ದರು ಎಂಬುದು ಅರ್ಥವಾಗಿತ್ತು!

> ತಂದೆ–ತಾಯಿಗಳು ಬಾಯಲ್ಲಿ ಆಡುವುದಕ್ಕಿಂತಲೂ ಅವರ ನಡವಳಿಕೆಯನ್ನು ನೋಡಿಯೇ ಮಕ್ಕಳು ಹೆಚ್ಚಾಗಿ ಕಲಿಯುತ್ತಾರೆ ಎಂಬುದು ವಾಸ್ತವ. ಹೀಗಾಗಿ ಮಕ್ಕಳ ಎದುರಿಗೆ ಹೇಗೆ ನಡೆದುಕೊಳ್ಳಬೇಕು ಎಂಬ ಜವಾಬ್ದಾರಿಯನ್ನು ಹೆತ್ತವರು ಮರೆಯುವಂತೆಯೇ ಇಲ್ಲ. ಅವರ ನಡೆ–ನುಡಿ ಎಲ್ಲವೂ ಬೆಳೆಯುತ್ತಿರುವ ಮಕ್ಕಳ ಎಳೆಯ ಮನಸ್ಸಿನ ಮೇಲೆ ಪರಿಣಾಮ ಬೀರುವುದಷ್ಟೇ ಅಲ್ಲದೆ ಅವುಗಳಿಗೆ ಸಿಗುವ ಸಂಸ್ಕಾರದ ತಳಹದಿಯೂ ಆಗಿರುತ್ತದೆ ಎಂಬುದನ್ನು ಮರೆಯಬಾರದು. ಆ ವಿಚಾರದಲ್ಲಿ ನಾನು ಬಹಳ ಅದೃಷ್ಟವಂತೆ ಎಂದೇ ನನ್ನ ಭಾವನೆ.

ತಂದೆ–ತಾಯಿಗಳು ಬಾಯಲ್ಲಿ ಆಡುವುದಕಿಂತಲೂ ಅವರ ನಡವಳಿಕೆಯನ್ನು ನೋಡಿಯೇ ಮಕ್ಕಳು ಹೆಚ್ಚಾಗಿ ಕಲಿಯುತ್ತಾರೆ ಎಂಬುದು ವಾಸ್ತವ. ಹೀಗಾಗಿ ಮಕ್ಕಳ ಎದುರಿಗೆ ಹೇಗೆ ನಡೆದುಕೊಳ್ಳಬೇಕು ಎಂಬ ಜವಾಬ್ದಾರಿಯನ್ನು ಹೆತ್ತವರು ಮರೆಯುವಂತೆಯೇ ಇಲ್ಲ. ಅವರ ನಡೆ–ನುಡಿ ಎಲ್ಲವೂ ಬೆಳೆಯುತ್ತಿರುವ ಮಕ್ಕಳ ಎಳೆಯ ಮನಸ್ಸಿನ ಮೇಲೆ ಪರಿಣಾಮ ಬೀರುವುದಷ್ಟೇ ಅಲ್ಲದೆ ಅವುಗಳಿಗೆ ಸಿಗುವ ಸಂಸ್ಕಾರದ ತಳಹದಿಯೂ ಆಗಿರುತ್ತದೆ ಎಂಬುದನ್ನು ಮರೆಯಬಾರದು. ಆ ವಿಚಾರದಲ್ಲಿ ನಾನು ಬಹಳ ಅದೃಷ್ಟವಂತೆ ಎಂದೇ ನನ್ನ ಭಾವನೆ. ನನ್ನ ನಾಡು, ನುಡಿ, ಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ಹೆಮ್ಮೆ, ಗೌರವ ಹುಟ್ಟುವಂತೆ ಮಾಡಿದುದು ಅವರೇ ಎಂಬುದು ನಿಸ್ಸಂಶಯ. ಆ ಋಣವನ್ನು ನಾನು ಎಂದಾದರೂ ತೀರಿಸಬಲ್ಲೆನೇ ನನ್ನ ತಂದೆಯವರ ಬಾಯಲ್ಲಿ ಅನೃತವನ್ನು ಎಂದೂ ನಾನು ಕೇಳಿ ಅರಿಯೆ. ಎಂದಿಗೂ ಅವರದು ನೇರ ನಡೆ ನುಡಿ. ತನಗೆ ಸತ್ಯ ಎಂದು ತೋರಿದುದನ್ನು ದಿಟ್ಟವಾಗಿ ಹೇಳುವ ಎದೆಗಾರಿಕೆ ಅವರಲ್ಲಿ ಇತ್ತು. ಶ್ರೀಮನ್ನಾಲ್ವಡಿ ಕೃಷ್ಣರಾಜರಲ್ಲಿ ಅದಮ್ಯ ಗೌರವವನ್ನು ಇಟ್ಟಿದ್ದ ಅವರಲ್ಲಿ ಮಹಾರಾಜರಿಗೆ ಬಾಗಿಸಿದ ಶಿರ ಮತ್ಯಾರಿಗೂ ಮಣಿಯದು ಎಂಬ ಭಾವನೆ ತುಂಬಿತ್ತು. ಸಂಗೀತವನ್ನೇ ಉಸಿರಾಡುತ್ತಿದ್ದ ಅವರಲ್ಲಿ ಲೌಕಿಕ ವ್ಯವಹಾರದ ತಿಳುವಳಿಕೆ ಅಷ್ಟಾಗಿ ಇರದಿದುದರಿಂದಲೇ ತಮ್ಮ ತಿಂಗಳ ಗಳಿಕೆಯನ್ನು ಅಮ್ಮನ ಕೈಯಲಿಟ್ಟು ನಿಶ್ಚಿಂತರಾಗಿರುತ್ತಿದ್ದರು. ಮಕ್ಕಳ ಓದು, ಮದುವೆ–ಮುಂಜಿ, ಮನೆಯ ನಿರ್ವಹಣೆ ಸಮಸ್ತವೂ ಅಮ್ಮನದೇ ಆಗಿತ್ತು.

ಅವರಿಬ್ಬರ ಓದಿನ ಹವ್ಯಾಸದಿಂದಾಗಿ ಮನೆಯ ಕಪಾಟುಗಳಲ್ಲಿ ಪುಸ್ತಕಗಳು ತುಂಬಿರುತ್ತಿದ್ದುವು. ಓದು ಎಂದು ಯಾರೂ ಒತ್ತಾಯಿಸದಿದ್ದರೂ ಅದು ಸಹಜವಾಗಿಯೇ ನಮ್ಮೆಲ್ಲರಿಗೂ ಬಂದಿತು. ಶಾಲೆಯಲ್ಲಿ ಕಲಿಯುತ್ತಿದ್ದ ಹೊಸ ಹೊಸ ವಿಷಯಗಳೂ ನಮ್ಮಲ್ಲಿ ಆಸಕ್ತಿಯನ್ನು ಹುಟ್ಟುಹಾಕುತ್ತಿದ್ದುವು. ಶಾಲೆಯ ಓದೂ ಸಹ ಎಂದೂ ಒತ್ತಡ ತರುವ ವಿಷಯ ಆಗಿರಲಿಲ್ಲ. ಶಾಲೆಯಿಂದ ಬಂದೊಡನೆ ಚೀಲವನ್ನಿಟ್ಟು ಆಟ ಆಡಲು ಹೊರಗೆ ಓಡುತ್ತಿದ್ದುದೇ ಹೆಚ್ಚು. ತೊಂಬತ್ತರ ಮೇಲೆ ಅಂಕಗಳನ್ನು ಗಳಿಸಬೇಕೆಂಬ ಒತ್ತಾಯ ಯಾರಿಂದಲೂ ಇರುತ್ತಿರಲಿಲ್ಲ. ಅರವತ್ತು ,ಅರವತ್ತೈದು ಅಂಕ ತೆಗೆದುಬಿಟ್ಟರೆ ಸಂತೋಷವೋ ಸಂತೋಷ, ಫಸ್ಟ್ ಕ್ಲಾಸ್ ಎಂದು. ಶಾಲೆಯಲ್ಲಿ ಕಲಿತುದುದನ್ನು ಮರೆಯುವಂತೆಯೇ ಇರಲಿಲ್ಲ. ಅಷ್ಟು ಚೆನ್ನಾಗಿ ಕಲಿಸುತ್ತಿದ್ದರು.

ಪಿಯುಸಿ ಮುಗಿದ ನಂತರ ಆಸೆಯಿಂದ ಕನ್ನಡ ಬಿಎ ಆನರ್ಸಿಗೆ ಸೇರಿದೆ. ವಿದ್ವಾಂಸರಾದ ಜಿ.ಎಸ್.ಶಿವರುದ್ರಪ್ಪ, ರಂ.ಶ್ರೀ ಮುಗಳಿ. ಎಂ.ವಿ. ಸೀತಾರಾಮಯ್ಯ, ಎನ್.ಎಸ್.ಲಕ್ಷ್ಮಿನಾರಾಯಣ ಭಟ್ಟ, ಚಂದ್ರಶೇಖರ ಕಂಬಾರ, ಎಸ್.ವಿದ್ಯಾಶಂಕರ್, ಹು.ಕ.ಜಯದೇವ್ ಅವರಂತಹ ಪಂಡಿತರನ್ನು ಕಾಣುವ ಅನನ್ಯ ಸಂದರ್ಭ. ಅಲ್ಲಿ ಗುರುಗಳು ಆರಂಭದಲ್ಲಿಯೇ ಹೇಳಿದ ಮಾತೊಂದು ಎದೆಯಲ್ಲಿ ಇಳಿಯಿತು. ಆನರ್ಸ್ ವಿದ್ಯಾರ್ಥಿಗಳು ತೊಂಡುದನ ಮೇಯ್ದಂತೆ ಮೇಯಬೇಕು ಎಂದು. ಓದುವ ಕ್ರಿಯೆಯನ್ನು ಅಷ್ಟು ನಿರಂತರವಾಗಿ ಇಟ್ಟುಕೊಳ್ಳಬೇಕೆಂಬ ಎಚ್ಚರಿಕೆಯನ್ನು ವಿದ್ಯಾರ್ಥಿಗಳ ಮನದಲ್ಲಿ ಬೇರೂರುವಂತೆ ಮಾಡಿದ್ದರು.

ಅಲ್ಲಿಂದ ಮುಂದೆ ತೌಲನಿಕ ಅಧ್ಯಯನಕ್ಕೆ ಪೂರಕವಾಗುವಂತೆ ಇಂಗ್ಲಿಷ್ ಸಾಹಿತ್ಯದ ಓದುವಿಕೆಯೂ ಜೊತೆಗೂಡಿತು. ಪಿ.ಲಂಕೇಶರು ಇಂಗ್ಲಿಷನ್ನು, ತಿರುಮಲೆ ತಾತಾಚಾರ್ಯ ಅವರು ಸಂಸ್ಕೃತವನ್ನು, ಭಾರತೀ ರಮಣಾಚಾರ್ಯ ಅವರು ಹಿಂದಿಯನ್ನೂ ಕಲಿಸುತ್ತಿದ್ದರು. ಸಾಹಿತ್ಯದ ದಿಗ್ಗಜರನ್ನು ನೋಡುವ, ಮಾತನಾಡಿಸುವ ಅವಕಾಶಗಳೂ ಸಾಕಷ್ಟು ಇರುತ್ತಿದ್ದುವು. ದ.ರಾ. ಬೇಂದ್ರೆ, ಶಿವರಾಮ ಕಾರಂತ, ಗಿರೀಶ್ ಕಾರ್ನಾಡ್, ಅನಂತಮೂರ್ತಿ ಮುಂತಾದ ಅನೇಕ ಸಾಹಿತಿಗಳು ನಮ್ಮ ಕನ್ನಡ ವಿಭಾಗಕ್ಕೆ ಭೇಟಿ ಕೊಡುವ ಅವಕಾಶಗಳು ಇರುತ್ತಲೇ ಇತ್ತು. ಖ್ಯಾತ ವಿಮರ್ಶಕರಾಗಿದ್ದ ಬಿ.ವಿ.ಕೆ.ಶಾಸ್ತ್ರಿಗಳು ನನ್ನ ಮಾರ್ಗದರ್ಶಕರಾಗಿರಲು ಒಪ್ಪಿದುದು ನನ್ನ ಜೀವಿತದ ಮಹಾಭಾಗ್ಯ ಎಂದೇ ನನ್ನ ಭಾವನೆ. ಮುಂದೆ ಅನೇಕ ಮಹನೀಯರ, ಸಂಗೀತ ವಿಶಾರದರ ಒಡನಾಟವು ನನ್ನ ಮೇಲೆ ಅಪಾರ ಪ್ರಭಾವವನ್ನು ಬೀರಿದುವು.

ಹೀಗೆ ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಹೊರಗಿನ ಹಲವಾರು ಅಂಶಗಳು ಅರಿವಿಲ್ಲದಂತೆಯೇ ತಮ್ಮ ಪ್ರಭಾವವನ್ನು ಬೀರಿ, ತಮ್ಮ ಛಾಪನ್ನು ಒತ್ತಿರುತ್ತವೆ. ಇವೆಲ್ಲದರ ಒಟ್ಟಾಂಶವೇ ನಮ್ಮ ವ್ಯಕ್ತಿತ್ವವನ್ನು, ಚಿಂತನೆಯ ಹಾದಿಯನ್ನು ರೂಪಿಸಿರುತ್ತವೆ ಎಂಬುದು ಅದೆಷ್ಟು ಸತ್ಯ ಎಂದೆನಿಸದಿರದು. ಎಲ್ಲದಕ್ಕೂ ಮೂಲ ನಮ್ಮ ತಂದೆ–ತಾಯಿಗಳು. ಅವರ ಸ್ಮರಣೆಯೇ ನಮ್ಮ ಬಾಳ ದೀವಿಗೆ.

ಮನೆ ಮಾದೇಗೌಡರಿಗೆ ನರೆಡ್ಕೊ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ

ಎಲ್ಲರಿಗೂ ಸೂರು ಕಲ್ಪಿಸುವ ಹೊಣೆಗಾರಿಕೆ ನಿಮ್ಮದು ಆಗಬೇಕು; ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮಾದೇಗೌಡರ ಕಿವಿಮಾತು

ಮೈಸೂರು, ಮೇ 24(ಎಂಕೆ)– 'ಮನೆ ಮನೆ ಮಾದೇಗೌಡ್ರು' ಖ್ಯಾತಿಯ ವಿಧಾನ ಪರಿಷತ್ ಮಾಜಿ ಸದಸ್ಯರು, ಸಿಐಟಿಬಿ ಮಾಜಿ ಅಧ್ಯಕ್ಷರೂ ಆದ ಡಿ.ಮಾದೇಗೌಡ ಅವರಿಗೆ ನರೆಡ್ಕೊ (ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್ಮೆಂಟ್ ಕೌನ್ಸಿಲ್) ಮೈಸೂರು ಚಾಪ್ಟರ್ ವತಿಯಿಂದ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು.

ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ ರಾಜು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ನರೆಡ್ಕೊ ರಾಷ್ಟ್ರೀಯ ಅಧ್ಯಕ್ಷ ಜಿ.ಹರಿಬಾಬು, ಮೈಸೂರು ಚಾಪ್ಟರ್ ಅಧ್ಯಕ್ಷ ವಿ.ಸಿ.ರವಿಕುಮಾರ್, ಖಜಾಂಚಿ ಎ.ಪಿ. ನಾಗೇಶ್ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಡಿ.ಮಾದೇಗೌಡರು, 75 ವರ್ಷಗಳ ಹಿಂದೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಎಲ್ಲರ ಕನಸು, ಅದರಲ್ಲೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸು ಕೂಡ ಈ ದೇಶದಲ್ಲಿ ಯಾರು ಕೂಡ ತಿನ್ನಲು ಅನ್ನ, ಉಡಲಿಕೆ ಬಟ್ಟೆ, ಇರಲಿಕ್ಕೆ ತಲೆಮೇಲೊಂದು ಸೂರು, ಶಿಕ್ಷಣ ಮತ್ತು ಆರೋಗ್ಯಕ್ಕೆ ಕೊರತೆ ಆಗಬಾರದು ಎಂಬುದಾಗಿತ್ತು. ಅದಕ್ಕಾಗಿಯೇ ಲಕ್ಷಾಂತರ ಜನ ಪ್ರಾಣ ಮತ್ತು ಆಸ್ತಿಯನ್ನು ಕಳೆದುಕೊಂಡಿದ್ದಾರೆ. ದೇಶದ ಪ್ರತಿಯೊಬ್ಬ ನಾಗರಿಕನಿಗೂ ಕನಿಷ್ಠ ಈ ಐದು ಮುಖ್ಯ ಅವಶ್ಯಕತೆಗಳನ್ನು ಈಡೇರಿಸುವುದು ನಮ್ಮೆಲ್ಲರ ಕರ್ತವ್ಯವೆಂಬುದನ್ನೇ ಗಮನದಲ್ಲಿಟ್ಟುಕೊಂಡು ಸಂವಿಧಾನವನ್ನು ರಚನೆ ಮಾಡಲಾಯಿತು ಎಂದರು.

ಸೂರ್ಯ ಮುಳಗದ ಸಾಮ್ರಾಜ್ಯವನ್ನೇ ಮಣಿಸಿ, ಸ್ವಾತಂತ್ರ್ಯ ಪಡೆದಿದ್ದೇವೆ. ಆದರೆ, 75 ವರ್ಷದಲ್ಲಿ ಸೂರಿನ ಪರಿಸ್ಥಿತಿ ಏನಾಗಿದೆ.... ಪ್ರತಿಯೊಂದು ಕುಟುಂಬಕ್ಕೂ ಸೂರನ್ನು ಕೊಡಲು ಈ ದೇಶದಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಈ ದೇಶದಲ್ಲಿ ಸಾಕಷ್ಟು ಭೂಮಿ ಇದೆ. ಮೂಲ ಸೌಕರ್ಯವಾದ ಕುಡಿಯುವ ನೀರು ಎಲ್ಲೆಲ್ಲೂ ಇದೆ. ಕೊರತೆ ಇರುವುದು ಎಲ್ಲಿ ಎಂಬು ದನ್ನು ಹೇಳುತ್ತಾ ಹೋದರೆ ಬಹಳ ದೊಡ್ಡ ಭಾಷಣ ವಾಗುತ್ತದೆ ಎನ್ನುತ್ತಲೇ ಮುಡಾ ಹಗರಣವನ್ನು ಪರೋಕ್ಷವಾಗಿ ಪ್ರಸ್ತಾಪಿಸಿ ಬೇಸರ ವ್ಯಕ್ತಪಡಿಸಿದರು.



ನರೆಡ್ಕೊ ಮೈಸೂರು ಚಾಪ್ಟರ್ ವತಿಯಿಂದ ಶನಿವಾರ 'ಮನೆ ಮನೆ ಮಾದೇಗೌಡ್ರು' ಖ್ಯಾತಿಯ ವಿಧಾನಪರಿಷತ್ ಮಾಜಿ ಸದಸ್ಯರು, ಸಿಐಟಿಬಿ ಮಾಜಿ ಅಧ್ಯಕ್ಷರೂ ಆದ ಡಿ.ಮಾದೇಗೌಡ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು. ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ ರಾಜು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನರೆಡ್ಕೊ ರಾಷ್ಟ್ರೀಯ ಅಧ್ಯಕ್ಷ ಜಿ.ಹರಿಬಾಬು ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.


ದಿಕ್ಸೂಚಿ ಕೊಡಬಹುದು: ಆದರೆ ನೀವು(ರಿಯಲ್ ಎಸ್ಟೇಟ್ ಉದ್ಯಮಿಗಳು) ಮನಸ್ಸು ಮಾಡಿದರೆ ಒಂದು ದಿಕ್ಸೂಚಿಯನ್ನು ಸಮಾಜ ಮತ್ತು ಸರ್ಕಾರಕ್ಕೆ ಕೊಡ ಬಹುದು. ನಿಮ್ಮೆಲ್ಲರ ಕನಸು ಏನಾಗಬೇಕು ಎಂದರೆ, ಕನಿಷ್ಠ ಇಂತಿಷ್ಟು ವರ್ಷದಲ್ಲಿ ದೇಶದ ಎಲ್ಲರಿಗೂ ಸೂರು ಕೊಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಲಿ ಇಲ್ಲವೆ ನಮಗೆ ಕೊಡಲಿ ಎಂದೇಳುವ ಕೆಚ್ಚು ನಿಮಗೆ ಬರಬೇಕು. ಆಗಲೇ ಈ ಸಂಸ್ಥೆಯನ್ನು ಸ್ಥಾಪನೆ (ನರೆಡ್ಕೊ) ಮಾಡಿರುವುದೂ ಸಾರ್ಥಕವಾಗಲಿದೆ ಎಂದು ಹೇಳಿದರು.

ಸಮಸ್ಯೆಗಳನ್ನು ಬಗೆಹರಿಸುವ ಗುರಿ: ನರೆಡ್ಕೊ ರಾಷ್ಟ್ರೀಯ ಅಧ್ಯಕ್ಷ ಜಿ.ಹರಿಬಾಬು ಮಾತನಾಡಿ, ನಮ್ಮ ಕ್ಷೇತ್ರದಲ್ಲಿ ನಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತಂದು ಬಗೆಹರಿಸಿಕೊಳ್ಳುವುದೇ ನಮ್ಮ ಸಂಘಟನೆಯ ಮುಖ್ಯ ಗುರಿಯಾಗಿದೆ. ಹಾಗೆಯೇ ಸಹ ಸದಸ್ಯರಿಂದ ಕಲಿಯುವುದು, ತಜ್ಞರಿಂದ ಉದ್ಯಮಕ್ಕೆ ಬೇಕಾದ ಜ್ಞಾನವನ್ನು ಪಡೆಯುವುದಕ್ಕೆ ಬೇಕಾದ ವೇದಿಕೆ ಸೃಷ್ಟಿಸುವುದು ನಮ್ಮ ಜವಾಬ್ದಾರಿಯಾಗಿದೆ. ರಿಯಲ್ ಎಸ್ಟೇಟ್ ಉದ್ಯಮಕ್ಕಿರುವ ಅಡೆ–ತಡೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವುದೇ ನನ್ನ ಮೊದಲ ಆದ್ಯತೆಯಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನರೆಡ್ಕೊ ಸದಸ್ಯತ್ವ ಪಡೆದ ರಿಯಲ್ ಎಸ್ಟೇಟ್ ಉದ್ಯಮಿಗಳನ್ನು ಅಭಿನಂದಿಸಿ ಆಹ್ವಾನ ನೀಡಲಾಯಿತು. ಹಾಗೆಯೇ ಮಹಿಳಾ ಉದ್ಯಮಿ ಆಶಾ ದಿವ್ಯೇಶ್ ನೇತೃತ್ವದ ಮಹಿಳಾ ಚಾಪ್ಟರ್ (ನರೆಡ್ಕೊ ನಾರಿ) ಅಸ್ತಿತ್ವಕ್ಕೆ ಚಾಲನೆ ನೀಡಲಾಯಿತು.

ಜಿಎಸ್‌ಎಸ್ ಸಂಸ್ಥೆಯ ಶ್ರೀಹರಿ, ನರೆಡ್ಕೊ ರಾಜ್ಯ ಉಪ ಮುಖ್ಯಸ್ಥ ಮನೋಜ್ ಎಂ.ಲೊಡಾ, ಮೈಸೂರು ಚಾಪ್ಟರ್ ಮುಖ್ಯಸ್ಥ ಟಿ.ಜಿ.ಆದಿಶೇಷನ್‌ಗೌಡ, ಕಾರ್ಯದರ್ಶಿ ಜಿ.ಕೆ.ಸುಧೀಂದ್ರ, ಉಪಾಧ್ಯಕ್ಷ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್, ಖಜಾಂಚಿ ಎ.ಪಿ.ನಾಗೇಶ್, ಜಂಟಿ ಕಾರ್ಯದರ್ಶಿ ಪಿ.ಎಸ್.ಗಗನ್‌ದೀಪ್, ಅವಾರ್ಡ್ ಕಮಿಟಿ ಮುಖ್ಯಸ್ಥ ಎನ್.ದಿವ್ಯೇಶ್ ಮತ್ತಿತರರು ಉಪಸ್ಥಿತರಿದ್ದರು.

ಎಪಿಎನ್ ಪ್ರಾಪರ್ಟೀಸ್‌ಗೆ ಬೆಸ್ಟ್ ರೆಸಿಡೆನ್ಷಿಯಲ್ ಲೇಔಟ್ ನಿರ್ಮಾಣ ಪ್ರಶಸ್ತಿ...



ಎಪಿಎನ್ ಪ್ರಾಪರ್ಟೀಸ್ ಸಂಸ್ಥೆಗೆ ಮುಡಾ ಬೆಸ್ಟ್ ರೆಸಿಡೆನ್ಷಿಯಲ್ ಲೇಔಟ್ ನಿರ್ಮಾಣ ಪ್ರಶಸ್ತಿಯನ್ನು ನೀಡಲಾಯಿತು. ಎಪಿಎನ್ ಪ್ರಾಪರ್ಟೀಸ್‌ನ ಪಾಲುದಾರ ಎ.ಪಿ.ನಾಗೇಶ್, ವಿಶೇಷವಾಗಿ ಅಭಿವೃದ್ಧಿಪಡಿಸಿದ ಎಪಿಎನ್ ಹಿಲ್‌ವ್ಯೂವ್ ಬಡಾವಣೆಗೆ ಈ ಪ್ರಶಸ್ತಿ ನೀಡಲಾಯಿತು. ಹಾಗೆಯೇ ರಿಯಲ್ ಎಸ್ಟೇಟ್ ಉದ್ಯಮದ ನಾನಾ ವಿಭಾಗಗಳಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿರುವ 38 ಮಂದಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಭಾನುವಾರ 25 ಮೇ 2025

ಮೈಸೂರು ಜಿಲ್ಲೆಯಲ್ಲಿ ಇನ್ನೂ 9 ಇಂದಿರಾ ಕ್ಯಾಂಟಿನ್‌ಗೆ ಸಿಎಂ ಸಿದ್ದರಾಮಯ್ಯ ಚಾಲನೆ

ಮೈಸೂರು, ಮೇ 24(ಎಂಟಿವೈ)– ಬಡವರು ಹಾಗೂ ಅಸಂಘಟಿತ ಕಾರ್ಮಿಕರೂ ಸೇರಿದಂತೆ ಜನಸಾಮಾನ್ಯರ ಹಸಿವು ನೀಗಿಸಲು ಮೈಸೂರು ಜಿಲ್ಲೆಯಲ್ಲಿ ಹೆಚ್ಚುವರಿಯಾಗಿ 9 ಇಂದಿರಾ ಕ್ಯಾಂಟೀನ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಲೋಕಾರ್ಪಣೆ ಮಾಡಿದರು.

ಮೈಸೂರು–ಹುಣಸೂರು ಮುಖ್ಯರಸ್ತೆಯ ಹಿನಕಲ್ ಆಶ್ರಮ ರಸ್ತೆಯಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ, ಬಿಸಿ ಬೇಳೆ ಬಾತ್ ಸವಿಯುವ ಮೂಲಕ ಗ್ರಾಹಕರಿಗೆ ರುಚಿ, ಶುಚಿ, ಗುಣಮಟ್ಟದ ಆಹಾರ ಪೂರೈಸುವಂತೆ ಸಲಹೆ ನೀಡಿದರು. ಇದೇ ವೇಳೆ ಮೈಸೂರು ಪಾಲಿಕೆ ವ್ಯಾಪ್ತಿ ಸಿದ್ದಾರ್ಥನಗರದಲ್ಲಿ ನೂತನ ಜಿಲ್ಲಾಧಿಕಾರಿ ಕಚೇರಿ ಬಳಿ, ವಾಲ್ಮೀಕಿ ರಸ್ತೆಯಲ್ಲಿನ ಮಹಾರಾಣಿ ಕಾಲೇಜು ಆವರಣ, ಹಿನಕಲ್ ಹಾಗೂ ವಿವಿಧ ತಾಲೂಕು ವ್ಯಾಪ್ತಿಯಲ್ಲಿ 9 ಇಂದಿರಾ ಕ್ಯಾಂಟೀನ್‌ಗಳು ಕಾರ್ಯಾರಂಭವಾಗಿವೆ.

ಬಡವರಿಗೆ ನೆರವಾದ ಇಂದಿರಾ ಕ್ಯಾಂಟೀನ್: ಈ ವೇಳೆ ಸಿಎಂ ಸಿದ್ದರಾಮಯ್ಯ ಮಾತನಾಡಿ, ಬಡವರ ಹಸಿವು ನೀಗಿಸುವ ನಿಟ್ಟಿನಲ್ಲಿ ನಾನು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ 2017ರಲ್ಲಿ ರಾಜ್ಯಾದ್ಯಂತ ಇಂದಿರಾ ಕ್ಯಾಂಟೀನ್ ಆರಂಭಿಸಲಾಯಿತು. ಈ ಕ್ಯಾಂಟೀನ್‌ಗಳಲ್ಲಿ ಬಡವರು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ಅಸಂಘಟಿತ ಕಾರ್ಮಿಕರು ಕಡಿಮೆ ದರದಲ್ಲಿ ಊಟ, ಉಪಹಾರ ಸೇವಿಸುತ್ತಾ ಇಂದಿರಾ ಕ್ಯಾಂಟೀನ್‌ನ ಪ್ರಯೋಜನ ಪಡೆಯುತ್ತಿದ್ದಾರೆ. ಇದೀಗ ಎರಡನೇ ಬಾರಿ ಮುಖ್ಯಮಂತ್ರಿಯಾದ ಬಳಿಕ ಹಿನಕಲ್ ಸೇರಿದಂತೆ ಮೈಸೂರು ಜಿಲ್ಲೆಯಲ್ಲಿ ಮತ್ತೆ 9 ಸೇರಿದಂತೆ ರಾಜ್ಯದಲ್ಲಿ 184 ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಇಂದಿರಾ ಕ್ಯಾಂಟೀನ್‌ಗಳಿಗೆ ಯಾವುದೇ ಸೌಲಭ್ಯ ಒದಗಿಸಲಿಲ್ಲ. ಇದರಿಂದ ಕ್ಯಾಂಟೀನ್‌ಗಳು ಸೊರಗಿದವು. ಅಪಾರ ಸಂಖ್ಯೆಯ ಜನರಿಗೆ ವರದಾನವಾಗಿದ್ದ ಇಂದಿರಾ ಕ್ಯಾಂಟೀನ್ ಇನ್ನು ಮುಂದೆ ಜನರಿಗೆ ಉತ್ತಮ ಸೇವೆ ಒದಗಿಸಲಿವೆ ಎಂದರು.

ರಾಜಕೀಯ ಶಕ್ತಿ ತುಂಬಿದ ಗ್ರಾಮ ಹಿನಕಲ್: ಹಿನಕಲ್ ಗ್ರಾಮ ನನಗೆ ರಾಜಕೀಯವಾಗಿ ಶಕ್ತಿ ಕೊಟ್ಟ ಗ್ರಾಮ. ಈ ಹಿಂದಿನಿಂದಲೂ ಹಿನಕಲ್ ಗ್ರಾಮದ ಜನತೆ ನನ್ನ ಬೆಂಬಲಕ್ಕೆ ನಿಂತಿದ್ದಾರೆ. ಹಾಗಾಗಿ ಹಿನಕಲ್ ಗ್ರಾಮದ ಮೇಲೆ ನನಗೆ ಹೆಚ್ಚು ಪ್ರೀತಿ. ಈ ಗ್ರಾಮವನ್ನು ಹಂತ ಹಂತವಾಗಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲು ನಿರ್ಧರಿಸಿದ್ದೇನೆ. ಅಭಿವೃದ್ಧಿಗಾಗಿ ಬೇಕಾಗಿರುವ ಎಲ್ಲಾ ಸವಲತ್ತುಗಳನ್ನು ಕಲ್ಪಿಸುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪೌರಾಡಳಿತ ಸಚಿವ ರಹೀಂ ಖಾನ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ವಿಧಾನಸಭಾ ಪರಿಷತ್ ಸದಸ್ಯರಾದ ಡಾ.ಯತ್ರೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಜಿಪಂ ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ ಜಿ.ಪಂ. ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ, ಮುಖಂಡರಾದ ಹೊನ್ನಪ್ಪ, ಕೆ.ಜಿ.ನಾಗರಾಜ್, ವೆಂಕಟೇಶ್, ರಕ್ಷಿತ್, ಶ್ರೀನಿವಾಸ್, ಚಂದ್ರು, ರಮೇಶ್, ಹಿನಕಲ್ ಪ್ರಕಾಶ್, ಹಿನಕಲ್ ಉದಯ್, ನಿಶಾಂತ್ ಪಟೇಲ್ ಇನ್ನಿತರರು ಉಪಸ್ಥಿತರಿದ್ದರು.

ಸಿಎಂ–ಜಿಟಿಡಿ ಆತ್ಮೀಯ ಒಡನಾಟ!: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹಿನಕಲ್‌ನಲ್ಲಿ ಇಂದು ಆರಂಭವಾದ ಇಂದಿರಾ ಕ್ಯಾಂಟೀನ್ ಉದ್ಘಾಟನೆಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಾಸಕ ಜಿ.ಟಿ.ದೇವೇಗೌಡರ ಆತ್ಮೀಯ ಒಡನಾಟ ಎಲ್ಲರ ಗಮನ ಸೆಳೆಯಿತು. ಕ್ಯಾಂಟೀನ್‌ನಲ್ಲಿ ಸಿಎಂ ಬಿಸಿಬೇಳೆ ಬಾತ್ ಸೇವಿಸುವ ವೇಳೆ ಜಿಟಿಡಿ ಕೂಡ ತನ್ನ ಪ್ಲೇಟ್‌ನಲ್ಲಿದ್ದ ಬಿಸಿಬೇಳೆ ಬಾತ್‌ನ್ನ ತನ್ವೀರ್ ಸೇಠ್‌ಗೆ ತಿನ್ನಿಸಿ, ಹಾಸ್ಯ ಚಟಾಕಿ ಹಾರಿಸಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ನಗುತ್ತಲೇ, ಎಲ್ಲರ ಸಂತಸದಲ್ಲಿ ಬೆರೆತರು. ಕಾರ್ಯಕ್ರಮ ಮುಗಿಯುವವರೆಗೂ ಜಿಟಿಡಿ, ಸಿಎಂ ಜೊತೆ ಅತ್ಯಂತ ಆತ್ಮೀಯತೆಯಿಂದಲೇ ಒಡನಾಡಿ, ಮಾತುಕತೆ ನಡೆಸಿದರು.

ಎಲ್ಲೆಲ್ಲಿ ಹೊಸ ಕ್ಯಾಂಟೀನ್: ಮೈಸೂರು ಜಿಲ್ಲೆಯಲ್ಲಿ ಇಂದಿನಿಂದ ಮೈಸೂರಿನ ವಾಲ್ಮೀಕಿ ರಸ್ತೆಯ ಮಹಾರಾಣಿ ವಾಣಿಜ್ಯ ಕಾಲೇಜು ಆವರಣ, ಸಿದ್ದಾರ್ಥ ನಗರದಲ್ಲಿ ನೂತನ ಜಿಲ್ಲಾಧಿಕಾರಿ ಕಚೇರಿ ಪಕ್ಕ, ಊಟಿ ರಸ್ತೆಯ ಬಂಡೀಪಾಳ್ಯದ ಎಪಿಎಂಸಿ ಆವರಣ, ಹಿನಕಲ್, ಬನ್ನೂರಿನ ಎಪಿಎಂಸಿ ಬಳಿ, ಪಿರಿಯಾಪಟ್ಟಣದ ಬಿಎಂ ರಸ್ತೆ ಸರಗೂರಿನ ಹೆಚ್.ಬಿ.ರಸ್ತೆಯ ಐಬಿ ಕಾಂಪೌಂಡ್ ಬಳಿ, ಬೋಗಾದಿ–ಹಿನಕಲ್ ರಿಂಗ್‌ರಸ್ತೆ ಜವರೇಗೌಡ ಲೇಔಟ್ ಎದುರು, ರಮ್ಮನಹಳ್ಳಿ ಮಹದೇವಪುರ ಮುಖ್ಯ ರಸ್ತೆಯಲ್ಲಿ ನೂತನ ಇಂದಿರಾ ಕ್ಯಾಂಟೀನ್‌ಗಳು ಆರಂಭವಾಗಿವೆ



ಮೈಸೂರಿನ ಹಿನಕಲ್‌ನಲ್ಲಿ ನೂತನವಾಗಿ ಸ್ಥಾಪಿಸಿರುವ ಇಂದಿರಾ ಕ್ಯಾಂಟೀನ್‌ಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಳಿಕ ಬಿಸಿಬೇಳೆ ಬಾತ್ ಸವಿದರು.

ಇನ್ನೇನ್ ಬೇಕಪ್ಪಾ ಜಿ.ಟಿ.ದೇವೇಗೌಡ...!

ಮೈಸೂರು,ಮೇ 24(ಎಂಟಿವೈ)– ಹಿನಕಲ್‌ನ ಆಶ್ರಮ ರಸ್ತೆಯಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟನಾ ಸಮಾರಂಭದಲ್ಲಿ ತಮ್ಮ ಭಾಷಣದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಮುಂಡೇಶ್ವರಿ ಕ್ಷೇತ್ರಕ್ಕೆ 'ಇನ್ನೇನ್ ಬೇಕಪ್ಪಾ ಜಿ.ಟಿ.ದೇವೇಗೌಡ' ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಾಮುಂಡೇಶ್ವರಿ ಶಾಸಕ ಜಿ.ಟಿ. ದೇವೇಗೌಡರಿಗೆ ಆಫರ್ ಕೊಟ್ಟರು. ಹಿನಕಲ್ ಗ್ರಾಮದ ಜನತೆ ನನಗೆ ಮೊದಲಿನಿಂದಲೂ ಬೆಂಬಲ ನೀಡುತ್ತಾ ಬಂದಿದ್ದಾರೆ. ಹಾಗಾಗಿ ಹಿನಕಲ್ ಅಭಿವೃದ್ಧಿಗೆ ಬದ್ಧನಾಗಿದ್ದೇನೆ ಎಂದು ಹೇಳುತ್ತಾ, ವೇದಿಕೆ ಮೇಲಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರತ್ತ ತಿರುಗಿ 'ಇನ್ನೇನ್ ಬೇಕಪ್ಪಾ ಜಿ.ಟಿ.ದೇವೇಗೌಡ' ಎಂದು ಕೇಳಿದರು.

ತಕ್ಷಣ, ಎದ್ದು ಸಿಎಂ ಬಳಿ ಬಂದ ಜಿಟಿಡಿ, ಹಿನಕಲ್ ಭಾಗದಲ್ಲಿ ಒಂದು ಕಾಲೇಜು ಬೇಕಿದೆ ಎಂದರು. ಅದಕ್ಕೆ ಸಿಎಂ, 'ಪದವಿ ಕಾಲೇಜೋ, ಪದವಿ ಪೂರ್ವ ಕಾಲೇಜೋ' ಎಂದಾಗ, ಜಿಟಿಡಿ, 'ಪಿಯು ಕಾಲೇಜು ಸಾಕು' ಎಂದರು. ತಕ್ಷಣ ಸಿಎಂ ಸಿದ್ದರಾಮಯ್ಯ, 'ಜಿ.ಟಿ.ದೇವೇಗೌಡ ಪಿಯು ಕಾಲೇಜು ಕೇಳಿದ್ದಾರೆ. ಸಾಧ್ಯವಾದರೆ ಈ ಸಾಲಿನಲ್ಲೇ ಮಂಜೂರು ಮಾಡುತ್ತೇನೆ. ಇಲ್ಲದಿದ್ದಲ್ಲಿ, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಮಂಜೂರು ಮಾಡುತ್ತೇನೆ' ಎಂದು ಭರವಸೆ ನೀಡಿದರು. ಈ ವೇಳೆ ನೆರೆದಿದ್ದ ಅಪಾರ ಸಂಖ್ಯೆಯ ಜನ ಶಿಳ್ಳೆ ಹೊಡೆದು ಸ್ವಾಗತಿಸಿ, ಸಂಭ್ರಮಿಸಿದರು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೇರಿದ ನಗರ ಸಭೆ, ಪಟ್ಟಣ ಪಂಚಾಯತಿ ಹಾಗೂ ಪುರಸಭೆಯಲ್ಲಿ ಇಂಜಿನಿಯರ್‌ಗಳ ಕೊರತೆ ಇದೆ ಎಂದು ಜಿ.ಟಿ.ದೇವೇಗೌಡರು ತಮ್ಮ ಅಳಲು ತೋಡಿಕೊಂಡಾಗಲೂ ಸಿಎಂ ಸಿದ್ದರಾಮಯ್ಯ ಅಗತ್ಯವಿರುವ ಇಂಜಿನಿಯರ್‌ಗಳ ನೇಮಕ ಮಾಡುವುದಾಗಿಯೂ ತಿಳಿಸಿದರು.

ಹಿನಕಲ್ ಗ್ರಾಮಕ್ಕೆ ಶವ ಸಾಗಿಸುವ ವಾಹನ ಹಸ್ತಾಂತರ

ಮೈಸೂರು, ಮೇ 24(ಎಂಟಿವೈ)– ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಶವ ಸಂಸ್ಕಾರಕ್ಕೆ ಅನುಕೂಲವಾಗುವಂತೆ ವಾಹನವನ್ನು ಹಿನಕಲ್ ಗ್ರಾಮಸ್ಥರಿಗೆ ಹಸ್ತಾಂತರಿಸಿದರು.

ಗ್ರಾಮದಲ್ಲಿ ಯಾರಾದರು ಮೃತಪಟ್ಟರೆ, ಅಂತ್ಯ ಸಂಸ್ಕಾರಕ್ಕೆ ವಾಹನದ ಕೊರತೆ ಇತ್ತು. ಈ ಹಿನ್ನೆಲೆಯಲ್ಲಿ 9 ಲಕ್ಷ ರೂ. ವೆಚ್ಚದಲ್ಲಿ ಖರೀದಿಸಿದ ವಾಹನದ ಕೀ ಅನ್ನು ಸಿಎಂ, ಗ್ರಾಮಸ್ಥರಿಗೆ ಹಸ್ತಾಂತರಿಸಿದರು. ಈ ವೇಳೆ ಮುಖಂಡ ಹಿನಕಲ್ ಪಾಪಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಿಇಟಿ ಫಲಿತಾಂಶ ಪ್ರಕಟ: ವಿವಿಧ ವೃತ್ತಿಪರ ಕೋರ್ಸ್ ಪ್ರವೇಶಕ್ಕೆ 2,75,677 ಮಂದಿ ಅರ್ಹರು

ಇಂಜಿನಿಯರಿಂಗ್‌ನಲ್ಲಿ ಬೆಂಗಳೂರು ಚೈತನ್ಯ ಸಿಬಿಎಸ್‌ಇ ಶಾಲೆಯ ಭವೇಶ್ ಜಯಂತಿ; ಬಿಎಸ್ಸಿ ಕೃಷಿ ವಿಭಾಗದಲ್ಲಿ ಅಕ್ಷಯ್ ಎಂ.; ನರ್ಸಿಂಗ್ ವಿಭಾಗದಲ್ಲಿ ಬೆಂಗಳೂರು ಯಲಹಂಕದ ನಾರಾಯಣ ಇ–ಟೆಕ್ನೋ ಕಾಲೇಜು ಹರೀಶ್‌ರಾಜ್; ಪಶು ವೈದ್ಯಕೀಯದಲ್ಲಿ ಯಲಹಂಕದ ನಾರಾಯಣ ಇ–ಟೆಕ್ನೋ ಕಾಲೇಜಿನ ಹರೀಶ್‌ರಾಜ್; ಬಿ.ಫಾರ್ಮ್ ಆತ್ರೇಯಾ ವೆಂಕಟಾಚಲಂ ಪ್ರಥಮ ರ್‍ಯಾಂಕ್

ಬೆಂಗಳೂರು, ಮೇ 24(ಕೆಎಂಶಿ)– ವೈದ್ಯಕೀಯ ಶಿಕ್ಷಣ ಹೊರತುಪಡಿಸಿ ಉಳಿದ ವೃತ್ತಿಶಿಕ್ಷಣ ತರಗತಿಗಳ ಪ್ರವೇಶಕ್ಕೆ 2,75,677 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಿಇಟಿ ಪರೀಕ್ಷೆ ಫಲಿತಾಂಶ ಪ್ರಕಟಿಸಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಈ ಬಾರಿ 3,11,991 ವಿದ್ಯಾರ್ಥಿಗಳ ಪೈಕಿ 2,75,677 ವೃತ್ತಿ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ ಎಂದರು.

ಇಂಜಿನಿಯರಿಂಗ್ ವಿಭಾಗದಲ್ಲಿ 2,62,195, ಬಿಎನ್‌ವೈಎಸ್ ಕೋರ್ಸ್‌ಗೆ 1,98,679, ಬಿಎಸ್ಸಿ ಕೃಷಿಗೆ 2,14,588, ಪಶುವೈದ್ಯಕೀಯ 2,18,282, ಬಿ–ಫಾರ್ಮಾಗೆ 2,66,256, ಡಿ–ಫಾರ್ಮಾಗೆ 2,66,757, ಬಿಎಸ್ಸಿ ನರ್ಸಿಂಗ್‌ಗೆ 2,08,171 ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ.

ಈ ಬಾರಿಯ ಭೌತಶಾಸ್ತ್ರ ವಿಷಯದಲ್ಲಿ ಒಂದು ಪ್ರಶ್ನೆಗೆ ಮಾತ್ರ ಕೃಪಾಂಕ, ರಸಾಯನ ಹಾಗೂ ಜೀವಶಾಸ್ತ್ರದಲ್ಲಿ ಒಂದು ಪ್ರಶ್ನೆಗೆ ಎರಡು ಉತ್ತರಗಳು ಸರಿ ಎಂದು ವಿಷಯ ತಜ್ಞರ ಸಮಿತಿ ತೀರ್ಮಾನಿಸಿದ್ದು, ಆ ಪ್ರಕಾರ ಮೌಲ್ಯಮಾಪನ ಮಾಡಲಾಗಿದೆ ಎಂದರು.

ಸಿಇಟಿ ಎಂಜಿನಿಯರಿಂಗ್ ವಿಭಾಗದಲ್ಲಿ ಬೆಂಗಳೂರಿನ ಮಾರತಹಳ್ಳಿ ಚೈತನ್ಯ ಸಿಬಿಎಸ್‌ಇ ಶಾಲೆಯ ಭವೇಶ್ ಜಯಂತಿ ಮೊದಲ ರ್‍ಯಾಂಕ್, ಚೈತನ್ಯ ಟೆಕ್ನೋ ಸ್ಕೂಲ್, ಕನಕಪುರ ರಸ್ತೆ ಉತ್ತರಹಳ್ಳಿ ವಿದ್ಯಾರ್ಥಿ ಸಾತ್ವಿಕ್ ಬಿರಾದರ್ ಎರಡನೇ ರ್‍ಯಾಂಕ್, ದಿನೇಶ್ ಗೋಮತಿ ಶಂಕರ್ ಅರುಣಾಚಲಂ 3ನೇ ರ್‍ಯಾಂಕ್ ಗಳಿಸಿದ್ದಾರೆ ಎಂದರು.

ಬಿಎಸ್ಸಿ ಕೃಷಿ ವಿಭಾಗದಲ್ಲಿ ಅಕ್ಷಯ್ ಎಂ. ಪ್ರಥಮ ಸ್ಥಾನ, ಸಾಯಿಶ್ ಶರವಣ ಪಂಡಿತ್ ದ್ವಿತೀಯ ಹಾಗೂ ಸುಚಿತ್ ಪಿ. ಪ್ರಸಾದ್ ಮೂರನೇ ಸ್ಥಾನ ಗಳಿಸಿದ್ದಾರೆ.

ನರ್ಸಿಂಗ್ ವಿಭಾಗದಲ್ಲಿ ಯಲಹಂಕದ ನಾರಾಯಣ ಇ–ಟೆಕ್ನೋ ಕಾಲೇಜಿನ ಹರೀಶ್ ರಾಜ್ ಪ್ರಥಮ ರ್‍ಯಾಂಕ್, ಹೆಚ್‌ಎಸ್‌ಆರ್ ಲೇಔಟ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿ ಆತ್ರೇಯ ದ್ವಿತೀಯ ರ್‍ಯಾಂಕ್, ಮಂಗಳೂರಿನ ವಳಚ್ಚಿಲ್‌ನ ಎಕ್ಸ್‌ಪರ್ಟ್ ಕಾಲೇಜಿನ ಶಾಪಲ್ ಶೆಟ್ಟಿ ಮೂರನೇ ರ್‍ಯಾಂಕ್ ಗಳಿಸಿದ್ದಾರೆ.

ಪಶು ವೈದ್ಯಕೀಯ ವಿಭಾಗದಲ್ಲಿ ಯಲಹಂಕದ ನಾರಾಯಣ ಇ–ಟೆಕ್ನೋ ಕಾಲೇಜಿನ ಹರೀಶ್ ರಾಜ್ ಪ್ರಥಮ ರ್‍ಯಾಂಕ್, ಹೆಚ್‌ಎಸ್‌ಆರ್ ಲೇಔಟ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿ ಆತ್ರೇಯ ದ್ವಿತೀಯ ರ್‍ಯಾಂಕ್, ಮಂಗಳೂರಿನ ವಳಚ್ಚಿಲ್‌ನ ಎಕ್ಸ್‌ಪರ್ಟ್ ಕಾಲೇಜಿನ ಶಾಪಲ್ ಶೆಟ್ಟಿ ಮೂರನೇ ರ್‍ಯಾಂಕ್ ಗಳಿಸಿದ್ದಾರೆ.

ಬಿ–ಫಾರ್ಮ್ ಟಾಪರ್ಸ್–ಪ್ರಥಮ ಆತ್ರೇಯಾ ವೆಂಕಟಾಚಲಂ, ದ್ವಿತೀಯ ಭವೇಶ್ ಜಯಂತಿ, ತೃತೀಯ ಹರೀಶ್ ರಾಜ್ ಡಿ.ವಿ., ವೆಟರ್ನರಿ ಪ್ರಾಕ್ಟಿಕಲ್– ಪ್ರಥಮ ರಕ್ಷಿತಾ ವಿ.ಪಿ., ದ್ವಿತೀಯ ನಂದನ್, ತೃತೀಯ ಸ್ಥಾನ ಭುವನೇಶ್ವರಿ ಗಳಿಸಿದ್ದಾರೆ.

ಸಿಇಟಿ ಪರೀಕ್ಷೆ ವೇಳೆ ಜನಿವಾರ ತೆಗೆಸಿದ್ದ ವಿಚಾರವನ್ನು ಫಲಿತಾಂಶ ಪ್ರಕಟಿಸುವ ವೇಳೆ ಉಲ್ಲೇಖಿಸಿದ ಸಚಿವರು, ಘಟನೆ ಉದ್ದೇಶಪೂರ್ವಕವಾಗಿ ಆಗಿದ್ದಲ್ಲ, ಸಿಬ್ಬಂದಿಯ ತಪ್ಪಿನಿಂದ ಆಗಿದೆ, ಈ ವಿಚಾರದಲ್ಲಿ ಬೀದರ್‌ನ ಸುಚಿವೃತ ಕುಲಕರ್ಣಿ ಎಂಬ ವಿದ್ಯಾರ್ಥಿಗೆ ನ್ಯಾಯ ಒದಗಿಸಿದ್ದೇವೆ ಎಂದರು.

ಈ ವಿದ್ಯಾರ್ಥಿ ಹಾಗೂ ಪೋಷಕರ ಅಭಿಪ್ರಾಯದ ಮೇರೆಗೆ ಸರಾಸರಿ ಅಂಕ ಹಂಚಿಕೆ ಮಾಡುವ ಮೂಲಕ ರ್‍ಯಾಂಕ್ ನೀಡಲಾಗಿದ್ದು, ವಿದ್ಯಾರ್ಥಿಗೆ 2 ಲಕ್ಷದ 6 ಸಾವಿರದ ರ್‍ಯಾಂಕ್ ಬಂದಿದೆ ಎಂದರು.

ಪರೀಕ್ಷೆ ಮುಗಿದ ಬಳಿಕ ಎಲ್ಲಾ ವಿದ್ಯಾರ್ಥಿಗಳ ಎಲ್ಲಾ ವಿಷಯಗಳಿಗೆ 11.67 ಲಕ್ಷ ಓಎಂಆರ್ ಶೀಟ್‌ಗಳನ್ನು ಪ್ರಥಮ ಬಾರಿಗೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು.

ಸುಮಾರು 10,000 ಅಭ್ಯರ್ಥಿಗಳು ತಮ್ಮ ನೋಂದಣಿ ಹಾಗೂ ರೋಲ್ ನಂಬರ್‌ಗಳನ್ನು ತಪ್ಪಾಗಿ ಬರೆದಿದ್ದರಿಂದ ಫಲಿತಾಂಶ ಪ್ರಕಟಣೆಗೆ ನಾಲ್ಕು ದಿನ ವಿಳಂಬವಾಯಿತು ಎಂದರು.

ಇದೇ ಮೊದಲ ಬಾರಿಗೆ ಸಿಇಟಿ ಫಲಿತಾಂಶಕ್ಕೂ ಮುನ್ನ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಫಲಿತಾಂಶ ಪ್ರಕಟಿಸಲಾಗಿದೆ. ನೀಟ್ ಫಲಿತಾಂಶದ ನಂತರ ಹಾಗೂ ಎಂಸಿಸಿ ಕೌನ್ಸಿಲಿಂಗ್ ವೇಳಾಪಟ್ಟಿ ನೋಡಿಕೊಂಡು ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸಿಲಿಂಗ್ ನಡೆಸಲಾಗುವುದು ಎಂದರು.

ಸಿಇಟಿ ನೋಂದಣಿ ಸಂಖ್ಯೆ ನಮೂದಿಸುವಲ್ಲಿ ಕೆಲ ಅಭ್ಯರ್ಥಿಗಳಿಂದ ದೋಷ

ಅಂಕ ದಾಖಲಿಸಲು ನಾಳೆಯಿಂದ ಅವಕಾಶ

ಬೆಂಗಳೂರು, ಮೇ 24– ಸರಿಯಾಗಿ ನೋಂದಣಿ ಸಂಖ್ಯೆಯನ್ನು ನಮೂದಿಸದ ಕಾರಣದಿಂದ ಸಿಇಟಿ–2025ರ ಫಲಿತಾಂಶ ಪ್ರಕಟವಾಗದೇ ಇರುವ ಅಭ್ಯರ್ಥಿಗಳಿಗೆ ತಮ್ಮ ಅಂಕಗಳನ್ನು ದಾಖಲಿಸಲು ಅವಕಾಶ ನೀಡುವ ಸಲುವಾಗಿ ಮೇ 26ರಿಂದ ಆನ್‌ಲೈನ್ ಲಿಂಕ್ ತೆರೆಯಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಸಿಇಟಿ–2025ರ ಫಲಿತಾಂಶವನ್ನು ಕೆಇಎ ಶನಿವಾರ ಪ್ರಕಟಿಸಿದ್ದು, ಕೆಲವು ಅಭ್ಯರ್ಥಿಗಳು ಹಿಂದಿನ ವರ್ಷದಲ್ಲಿ 2ನೇ ಪಿಯು/12ನೇ ತರಗತಿ ಪರೀಕ್ಷೆಗಳಲ್ಲಿ ತಾವು ತೇರ್ಗಡೆಯಾಗಿದ್ದರೂ ಫಲಿತಾಂಶ ಪ್ರಕಟವಾಗಿಲ್ಲ ಎಂದು ಮನವಿ ಸಲ್ಲಿಸುತ್ತಿರುವ ಹಿನ್ನೆಲೆಯಲ್ಲಿ ಅವರು ಶನಿವಾರ ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

ಸಿಇಟಿ–2025ರ ಫಲಿತಾಂಶವನ್ನು ಪ್ರಕಟಿಸುವ ಮೊದಲು 2ನೇ ಪಿಯು/12ನೇ ತರಗತಿ ಅಂಕಗಳನ್ನು ಆಯಾ ಮಂಡಳಿಗಳಿಂದಲೇ ಪಡೆಯಲಾಗುವುದು ಎಂದು ಸೂಚಿಸಲಾಗಿತ್ತು ಮತ್ತು ಅಭ್ಯರ್ಥಿಗಳು ಸರಿಯಾದ ನೋಂದಣಿ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ ಎಂದು ಸೂಚಿಸಲಾಗಿತ್ತು. ಆದರೂ ಕೆಲವು ಅಭ್ಯರ್ಥಿಗಳು ನೋಂದಣಿ ಸಂಖ್ಯೆಯನ್ನು ಸರಿಯಾಗಿ ನಮೂದಿಸಿರಲಿಲ್ಲ. ಹೀಗಾಗಿ ಅಂತಹ ಅಭ್ಯರ್ಥಿಗಳ ಫಲಿತಾಂಶ ಪ್ರಕಟಿಸಲು ಸಾಧ್ಯವಾಗಿಲ್ಲ ಎಂದು ಪ್ರಸನ್ನ ವಿವರಿಸಿದ್ದಾರೆ.

ಮೇ 26ರಿಂದ ತೆರೆಯಲಾಗುವ ಲಿಂಕ್‌ನಲ್ಲಿ ಅಭ್ಯರ್ಥಿಗಳು 2ನೇ ಪಿಯು/12ನೇ ತರಗತಿ ಅಂಕಗಳನ್ನು ನೋಂದಣಿ ಸಂಖ್ಯೆಯೊಂದಿಗೆ ದಾಖಲಿಸಬೇಕು ಮತ್ತು ಅಂಕಪಟ್ಟಿಯನ್ನು ಅಪ್‌ಲೋಡ್ ಮಾಡಬೇಕು. ಅಭ್ಯರ್ಥಿಗಳು ದಾಖಲಿಸುವ ಅಂಕಗಳನ್ನು ಆಯಾ ಪರೀಕ್ಷಾ ಮಂಡಳಿಯಿಂದ ಪರಿಶೀಲಿಸಿ ಧೃಡೀಕರಿಸಿದ ನಂತರವೇ ಸ್ಪಾಟ್ ರಾಂಕ್ ಅನ್ನು ಮೇ 29ರಿಂದ ನೀಡಲು ಕ್ರಮವಹಿಸಲಾಗುವುದು. ಸ್ಪಾಟ್ ರಾಂಕ್ ಪಡೆಯಲು ಅಭ್ಯರ್ಥಿಗಳು ಪ್ರಾಧಿಕಾರಕ್ಕೆ ಬರುವ ಅವಶ್ಯಕತೆ ಇರುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಆರೋಗ್ಯ ಮಾತೆ ಚರ್ಚ್‌ಗೆ ನೂತನ ಪಾರಿಷ್ ಪಾದ್ರಿ


ಇಂದು ರೆ. ಫಾ. ರೇಮಂಡ್ ಅಧಿಕಾರ ಸ್ವೀಕಾರ



ಆರೋಗ್ಯ ಮಾತೆ ಚರ್ಚ್, ಹುಲಿಕೆರೆ



ಫಾ. ರೇಮಂಡ್



ಫಾ. ಫರ್ನಾಂಡಿಸ್

ಮೈಸೂರು, ಮೇ 24– ಕೊಡಗಿನ ಅಮ್ಮತ್ತಿಯಲ್ಲಿರುವ ಸೇಂಟ್ ಆಂಥೋನಿ ಚರ್ಚ್‌ನ ಪಾರಿಷ್ ಪಾದ್ರಿಯಾಗಿ ಸೇವೆ ಸಲ್ಲಿಸುತ್ತಿದ್ದ ರೆವರೆಂಡ್ ಫಾದರ್ ರೇಮಂಡ್ ಅವರನ್ನು ಕೆಆರ್‌ಎಸ್ ರಸ್ತೆಯ ಹುಲಿಕೆರೆಯಲ್ಲಿರುವ ಆರೋಗ್ಯ ಮಾತೆ ಚರ್ಚ್‌ನ (ಅವರ್ ಲೇಡಿ ಆಫ್ ಗುಡ್ ಹೆಲ್ತ್ ಚರ್ಚ್) ಹೊಸ ಪಾರಿಷ್ ಪಾದ್ರಿಯಾಗಿ ವರ್ಗಾವಣೆ ಮಾಡಲಾಗಿದೆ.

1976 ರಲ್ಲಿ ಕೆ.ಆರ್.ನಗರ ತಾಲೂಕಿನ ಡೋರ್ನಹಳ್ಳಿಯಲ್ಲಿ ಜನಿಸಿದ ಫಾದರ್ ರೇಮಂಡ್ ಅವರನ್ನು ಏಪ್ರಿಲ್ 25, 2006 ರಂದು ಪಾದ್ರಿಯನ್ನಾಗಿ ನೇಮಿಸಲಾಯಿತು. ಜೂನ್ 2, 2019 ರಂದು ಸೇಂಟ್ ಆಂಥೋನಿ ಚರ್ಚ್‌ನ ಪಾರಿಷ್ ಪಾದ್ರಿಯಾಗಿ ಅಧಿಕಾರ ವಹಿಸಿಕೊಂಡರು. ಮೇ 18 ರಂದು ಅಮ್ಮತ್ತಿ ಚರ್ಚ್‌ನಲ್ಲಿ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ಫಾ. ರೇಮಂಡ್ ಅವರು ಕೆಆರ್‌ಎಸ್ ರಸ್ತೆಯ ಹುಲಿಕೆರೆಯಲ್ಲಿರುವ ಆರೋಗ್ಯ ಮಾತೆ ಚರ್ಚ್‌ನ (ಅವರ್ ಲೇಡಿ ಆಫ್ ಗುಡ್ ಹೆಲ್ತ್ ಚರ್ಚ್) ಹೊಸ ಪಾರಿಷ್ ಪಾದ್ರಿಯಾಗಿ ಮೇ 25 ರಂದು ಬೆಳಗ್ಗೆ 9.30ಕ್ಕೆ ಫಾ. ವಿನ್ಸೆಂಟ್ ಫರ್ನಾಂಡೀಸ್ ಅವರಿಂದ ಅಧಿಕಾರ ಸ್ವೀಕರಿಸಲಿದ್ದಾರೆ.

ಸುವರ್ಣ ಮಹೋತ್ಸವ: ರೆವರೆಂಡ್ ಫಾದರ್ ವಿನ್ಸೆಂಟ್ ಫರ್ನಾಂಡಿಸ್ ಅವರು ಮೇ 24 ರಂದು (ಇಂದು)ತಮ್ಮ ಪೌರೋಹಿತ್ಯದ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡು ಮೈಸೂರಿನ ಬನ್ನಿಮಂಟಪದಲ್ಲಿರುವ ಧರ್ಮಪ್ರಾಂತ್ಯದ ಪುರೋಹಿತರ ನಿವೃತ್ತಿ ನಿಲಯವಾದ 'ಪ್ರಶಾಂತ ನಿಲಯ'ಕ್ಕೆ ಸ್ಥಳಾಂತರಗೊಂಡಿದ್ದಾರೆ.

2018 ರಿಂದ 2025 ರವರೆಗೆ ಹುಲಿಕೆರೆ ಚರ್ಚ್‌ನ ಪಾರಿಷ್ ಪಾದ್ರಿಯಾಗಿ ಸೇವೆ ಸಲ್ಲಿಸಿದ್ದ ರೆವರೆಂಡ್ ಫಾದರ್ ವಿನ್ಸೆಂಟ್ ಫರ್ನಾಂಡಿಸ್, 1950 ರಲ್ಲಿ ಉಡುಪಿಯಲ್ಲಿ ಜನಿಸಿದರು. ಜೂನ್ 17, 1976 ರಂದು ಪಾದ್ರಿಯಾಗಿ ದೀಕ್ಷೆ ಪಡೆದರು. ಅವರು ಶಾಂತಿಪುರ, ಮಾರ್ಟಳ್ಳಿ, ವಿರಾಜಪೇಟೆ, ಪಿಜಿಪಾಳ್ಯ ಮತ್ತು ಮಳವಳ್ಳಿ ಚರ್ಚ್‌ಗಳಲ್ಲಿ ಪಾರಿಷ್ ಪಾದ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

2001 ರಿಂದ 2007 ರವರೆಗೆ ಮೈಸೂರಿನಲ್ಲಿ ಓಡಿಪಿ (ಜನರ ಅಭಿವೃದ್ಧಿಗಾಗಿರುವ ಸಂಸ್ಥೆ) ನಿರ್ದೇಶಕರಾಗಿ ಮತ್ತು 2014 ರಿಂದ 2018 ರವರೆಗೆ ಸೇಂಟ್ ಮೇರಿಸ್ ಮೈನರ್ ಸೆಮಿನರಿಯ ರೆಕ್ಟರ್ ಆಗಿ ಸೇವೆ ಸಲ್ಲಿಸಿದ್ದಾರೆ.

ತಮ್ಮ 50 ವರ್ಷಗಳ ಪೂರ್ವಜರ ಅವಧಿಯಲ್ಲಿ, ರೆವರೆಂಡ್ ಫಾದರ್ ವಿನ್ಸೆಂಟ್ ಫರ್ನಾಂಡಿಸ್ ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ಚರ್ಚ್‌ಗಳ ಅಭಿವೃದ್ಧಿ, ವಸತಿ ಯೋಜನೆ ಸೇರಿದಂತೆ ಇತರ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ.

ಲಾಭದ ಆಸೆಗೆ ಬಿದ್ದು ಲಕ್ಷ ಲಕ್ಷ ಕಳೆದುಕೊಂಡ ಮೈಸೂರು ಉದ್ಯಮಿಗಳು!

ಮೈಸೂರು, ಮೇ 24– ಕ್ರಿಪ್ಟೋ ಕರೆನ್ಸಿ ಹಾಗೂ ಟ್ರೇಡಿಂಗ್ ಆಪ್ ಮೂಲಕ ಲಕ್ಷಾಂತರ ರೂ. ಹಣ ಹೂಡಿಕೆ ಮಾಡಿ ಮೈಸೂರಿನ ಉದ್ಯಮಿಗಳಿಬ್ಬರು ಮೋಸ ಹೋಗಿದ್ದಾರೆ.

ಮೈಸೂರಿನ ಸಿದ್ದಾರ್ಥನಗರದ ಉದ್ಯಮಿ 51.89 ಲಕ್ಷ ರೂ. ಹಾಗೂ ಬೋಗಾದಿ ಎಸ್‌ಬಿಎಂ ಲೇಔಟ್‌ನ ಉದ್ಯಮಿ 22.32 ಲಕ್ಷ ರೂ. ಹಣವನ್ನು ಅಧಿಕ ಲಾಭದಾಸೆಗೆ ಹೂಡಿಕೆ ಮಾಡಿ ಕಳೆದುಕೊಂಡಿದ್ದು, ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಹಣ ಡಬಲ್ ಆಮಿಷ: ಸಿದ್ಧಾರ್ಥನಗರದ ಉದ್ಯಮಿ, ತಮ್ಮ ಸ್ನೇಹಿತರೊಬ್ಬರು ಬಿಂಗ್‌ಎಕ್ಸ್ ಆಪ್ ಬಳಸಿ ಹಣ ಗಳಿಸುತ್ತಿರುವ ಬಗ್ಗೆ ತಿಳಿದುಕೊಂಡಿದ್ದರು. ಬಳಿಕ ಆ ಆಪ್ ಅನ್ನು ಡೌನ್ ಲೋಡ್ ಮಾಡಿಕೊಂಡು ಬಳಸಲಾರಂಭಿಸಿದರು. ಆ ವೇಳೆ ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿ ಹಣ ಡಬಲ್ ಮಾಡುವ ಜಾಹಿರಾತು ಕಾಣಿಸಿತು. ಅದರ ಲಿಂಕ್ ಕ್ಲಿಕ್ ಮಾಡಿದಾಗ ಸ್ವಯಂ ಚಾಲಿತವಾಗಿ ಏಜೆಂಟ್‌ಗೆ ಸಂಪರ್ಕ ಪಡೆಯಿತು. ಆತ ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿ, ಹಣ ಡಬಲ್ ಮಾಡುವ ಪ್ರಕ್ರಿಯೆ ಬಗ್ಗೆ ತಿಳಿಸಿ, ಕೆಲ ವೆಬ್‌ಸೈಟ್ ಹಾಗೂ ಇತರ ಏಜೆಂಟ್‌ಗಳನ್ನು ಪರಿಚಯ ಮಾಡಿಸಿದ. ನಂತರ ವಾಟ್ಸ್‌ಆಪ್ ಗ್ರೂಪ್‌ಗೆ ಸೇರಿಸಿ, ಬಿಂಗ್‌ಎಕ್ಸ್ ಆಪ್‌ನಲ್ಲಿ ಖಾತೆ ತೆರೆಯಲಾಯಿತು. ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಬೇಕೆಂದು ಹೇಳಿ ಮೂವರ ಖಾತೆಗೆ ಒಟ್ಟು 24 ಲಕ್ಷ ರೂ. ವರ್ಗಾಯಿಸಿದ. ಅದನ್ನು ನಂಬಿದ ಉದ್ಯಮಿ ಯುಎಸ್‌ಡಿಟಿ 1,22,949 ರೂ. ವರ್ಗಾವಣೆ ಮಾಡಿದರು. ಆಗ ಬೆನಿಫಿಟ್ ಪ್ಲಾಟ್‌ಫಾರ್ಮ್‌ನಲ್ಲಿ ಲಾಭ ಸೇರಿ 2 ಕೋಟಿ ರೂ. ಹಣ ಇರುವುದಾಗಿ ತೋರಿಸಿದೆ. ಆ ಹಣವನ್ನು ವಿತ್‌ಡ್ರಾ ಮಾಡಲು 35 ಲಕ್ಷ ರೂ. ಪಾವತಿಸಲು ತಿಳಿಸಿದರು. ಅಷ್ಟು ಹಣವನ್ನು ವರ್ಗಾವಣೆ ಮಾಡಿದರೂ ವಿಳಂಬ ಶುಲ್ಕವೆಂದು ಮತ್ತೆ 25 ಲಕ್ಷ ರೂ. ಪಡೆದರು. ಕೊನೆಗೆ ವಂಚನೆಗೊಳಗಾಗಿರುವುದು ಅರಿವಾಗಿ ದೂರು ನೀಡಿದ್ದಾರೆ.

ಟ್ರೇಡಿಂಗ್ ನೆಪದಲ್ಲಿ ಮೋಸ: ಬೋಗಾದಿ ಉದ್ಯಮಿ, ಟ್ರೇಡಿಂಗ್ ಆಪ್ ಸಂಬಂಧ ವಾಟ್ಸ್‌ಆಪ್‌ಗೆ ಬಂದ ಸಂದೇಶವನ್ನು ನಂಬಿ ಮೋಸ ಹೋಗಿದ್ದಾರೆ. ವಂಚಕರು ಸೂಚಿಸಿದ ಆಪ್ ಮೂಲಕ ತಮ್ಮ ಖಾತೆ ಮಾತ್ರವಲ್ಲದೆ ತಂದೆ–ತಾಯಿ ಖಾತೆಯಿಂದ ಒಟ್ಟು 22.32 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಹಣ ಹೂಡಿಕೆ ಮಾಡಿಸಿಕೊಂಡ ವಂಚಕರು, ನಂತರ ಸಂಪರ್ಕ ಕಡಿದುಕೊಂಡಿದ್ದಾರೆ.

ವಿರಾಜಪೇಟೆ ಶಾಸಕ ಪೊನ್ನಣ್ಣ ಆಪ್ತ ಸಹಾಯಕನ ಪತ್ನಿ ಆತ್ಮಹತ್ಯೆ



ಹಾಸನ, ಮೇ.24– ವಿರಾಜಪೇಟೆ ಕಾಂಗ್ರೆಸ್ ಶಾಸಕ ಎ.ಎಸ್. ಪೊನ್ನಣ್ಣ ಅವರ ಆಪ್ತ ಸಹಾಯಕ ಮಹೇಂದ್ರ ಅವರ ಪತ್ನಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ 35 ವರ್ಷದ ಶೃತಿ, ಹಾಸನ ಜಿಲ್ಲೆಯ ಸಕಲೇಶಪುರದ ಪಿಡಬ್ಲ್ಯೂಡಿ ಕ್ವಾಟರ್ಸ್‌ನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಲ ತಿಂಗಳುಗಳಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಶೃತಿ ವಿಷ ಸೇವಿಸಿ ತೀವ್ರವಾಗಿ ಅಸ್ವಸ್ಥಗೊಂಡಿದ್ದರು. ಅವರನ್ನು ಹಾಸನದ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಈ ಕುರಿತು ಸಕಲೇಶಪುರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೋಗಾದಿ ಪಪಂ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟಿನ್ ಉದ್ಘಾಟನೆ



ಮೈಸೂರಿನ ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬೋಗಾದಿ ಮತ್ತು ಹಿನಕಲ್ ರಸ್ತೆಯಲ್ಲಿ ನಿರ್ಮಿಸಿರುವ ಇಂದಿರಾ ಕ್ಯಾಂಟಿನ್‌ಅನ್ನು ಬೋಗಾದಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಎಂ.ಬಸವರಾಜು ಉದ್ಘಾಟಿಸಿದರು. ಈ ವೇಳೆ ಪಟ್ಟಣ ಪಂಚಾಯಿತಿಯ ಜೂನಿಯರ್ ಇಂಜಿನಿಯರ್ ಸೌಮ್ಯ, ರೆವಿನ್ಯೂ ಇನ್ಸ್‌ಪೆಕ್ಟರ್ ವಿಜಯ್‌ಕುಮಾರ್, ಆರೋಗ್ಯ ನಿರೀಕ್ಷಕ ಪುನೀತ್‌ಕುಮಾರ್, ಬೋಗಾದಿ ಪ.ಪಂ ಮಾಜಿ ಅಧ್ಯಕ್ಷ, ಮಾಜಿ ಉಪಾಧ್ಯಕ್ಷರು, ಗ್ರಾಪಂ ಮಾಜಿ ಸದಸ್ಯರು ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಸುಗಮ ವಾಹನ ಸಂಚಾರಕ್ಕೆ ತೊಡಕಾದ ತ್ಯಾಜ್ಯ ಸಂಗ್ರಹಣಾ ಕೇಂದ್ರ!

• ಮೈಸೂರಿನ ಕಾರಂಜಿ ಕೆರೆ ರಸ್ತೆಯಲ್ಲಿರುವ ಪಾಲಿಕೆಯ ತ್ಯಾಜ್ಯ ಕೇಂದ್ರ • ಸುರಕ್ಷತೆ ದೃಷ್ಟಿಯಿಂದ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ನಾಗರಿಕರ ಒತ್ತಾಯಪೂರ್ವಕ ಮನವಿ

ಮೈಸೂರು,ಮೇ 24(ಪಿಎಂ)– ಸುಗಮ ವಾಹನ ಸಂಚಾರಕ್ಕೆ ತೊಡಕಾಗುತ್ತಿದೆ ಅಲ್ಲಿರುವ ತ್ಯಾಜ್ಯ ಸಂಗ್ರಹಣಾ ಕೇಂದ್ರ! ಹೌದು, ಮೊದಲೇ ಅದು ಕಿರಿದಾದ ರಸ್ತೆ. ವಾಹನಗಳ ಸಂಚಾರವೂ ದಿನನಿತ್ಯ ಹೆಚ್ಚೇ. ಇಂತಹ ರಸ್ತೆಯ ಬದಿಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ ಇದ್ದು, ಇದು ಎಷ್ಟು ಸೂಕ್ತ–ಸುರಕ್ಷಿತ ಎಂಬ ಪ್ರಶ್ನೆ ಉದ್ಭವಿಸಿದೆ.

ಮೈಸೂರಿನ ಮಹಾರಾಣ ಪ್ರತಾಪ್ ಸಿಂಹಜೀ ವೃತ್ತದಿಂದ ನಗರಕ್ಕೆ ಪ್ರವೇಶ ಪಡೆಯಲು ಕಾರಂಜಿ ಕೆರೆ ರಸ್ತೆಯಲ್ಲಿ ಹೊರಟರೇ ಆರಂಭದಲ್ಲೇ ಪಾಲಿಕೆಯ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ ಎಡಭಾಗದಲ್ಲಿ (ಮೃಗಾಲಯದ ನಿರ್ಮಾಣ ಹಂತದಲ್ಲಿರುವ ಅಕ್ವೇರಿಯಂ ಮೇಲ್ಭಾಗ) ಇದೆ. ಈ ಕೇಂದ್ರ ಇಲ್ಲಿರುವುದು ವಾಹನ ಸವಾರರು ಹಾಗೂ ಕೇಂದ್ರದಲ್ಲಿ ಕೆಲಸ ಮಾಡುವವರು ಇಬ್ಬರಿಗೂ ಸುರಕ್ಷಿತವಲ್ಲ ಎಂಬುದು ಇಲ್ಲಿ ನಿತ್ಯ ಸಂಚರಿಸುವ ವಾಹನ ಸವಾರರ ವಾದವಾಗಿದೆ.

ಈ ರಸ್ತೆಯಲ್ಲಿ ಫುಟ್‌ಪಾತ್ ಸಹ ಇಲ್ಲ. ಪಾದಚಾರಿಗಳಿಗಾಗಿ ಫುಟ್‌ಪಾತ್ ನಿರ್ಮಾಣಕ್ಕೆ ಸ್ಥಳಾವಕಾಶವೂ ಬಹುತೇಕ ಇಲ್ಲಿಲ್ಲ. ಇಂತಹ ಸನ್ನಿವೇಶದಲ್ಲಿ ಈ ಕೇಂದ್ರ ಇಲ್ಲಿರುವುದು ವಾಹನ ಸವಾರರಿಗೂ ಕಿರಿಕಿರಿ ಉಂಟು ಮಾಡಿದೆ. ನಗರದ ವಿವಿಧ ಭಾಗಗಳಿಗೆ ಸಂಚರಿಸಲು ಮಾತ್ರವಲ್ಲದೆ, ಚಾಮುಂಡಿಬೆಟ್ಟ, ತಿ.ನರಸೀಪುರ, ಕೊಳ್ಳೇಗಾಲ ಮೊದಲಾದ ಸ್ಥಳಗಳಿಗೆ ನಗರದಿಂದ ಹೋಗಲು ಹಾಗೂ ಅಲ್ಲಿಂದ ನಗರಕ್ಕೆ ಪ್ರವೇಶ ಪಡೆಯಲು ಇದೊಂದು ಪ್ರಮುಖ ರಸ್ತೆಯಾಗಿದೆ.

ಹಾಗಾಗಿ ಖಾಸಗಿ ವಾಹನಗಳು ಮಾತ್ರವಲ್ಲದೆ, ರಾಜ್ಯ ರಸ್ತೆ ಸಾರಿಗೆ ಹಾಗೂ ನಗರ ಸಾರಿಗೆ ಬಸ್‌ಗಳೂ ಇಲ್ಲಿ ಸಂಚರಿಸುತ್ತವೆ. ಶಾಲಾ–ಕಾಲೇಜು ವಾಹನಗಳು ಈ ಮಾರ್ಗದಲ್ಲಿ ಓಡಾಡುತ್ತವೆ. ದ್ವಿಚಕ್ರ ವಾಹನಗಳ ಸಂಖ್ಯೆಯೂ ಹೆಚ್ಚಿದೆ. ಈ ರೀತಿಯ ಸನ್ನಿವೇಶದಲ್ಲಿ ಕೇಂದ್ರಕ್ಕೆ ತ್ಯಾಜ್ಯ ತರುವ ವಾಹನಗಳು ಇಲ್ಲಿ ನಿಲುಗಡೆ ಮಾಡಿದಾಗ, ಸಂಚಾರ ದಟ್ಟಣೆ ಇನ್ನು ವ್ಯಾಪಕವಾಗುತ್ತಿದ್ದು, ಈ ಸಂದರ್ಭದಲ್ಲಿ ಕೆಲ ವಾಹನ ಸವಾರರು ಅವಸರದಲ್ಲಿ ಮುನ್ನುಗ್ಗಲು ಪ್ರಯತ್ನಿಸುವುದೂ ಇದೆ. ಈ ವೇಳೆ ಕೇಂದ್ರದಲ್ಲಿ ಕೆಲಸ ಮಾಡುವವರಿಗೂ ಅಪಾಯಕಾರಿ ಆಗುವುದನ್ನೂ ತಳ್ಳಿ ಹಾಕಲಾಗದು.

ಈ ಕೇಂದ್ರದ ಮುಂದೆ ಸ್ಥಳಾವಕಾಶವೂ ಅತ್ಯಂತ ಕಡಿಮೆಯೇ ಇದ್ದು, ತ್ಯಾಜ್ಯಗಳನ್ನು ವಾಹನಗಳಿಂದ ಕೇಂದ್ರಕ್ಕೆ ಕೊಂಡೊಯ್ಯಲು ಸಾಕಷ್ಟು ಅಡತಡೆ ಇಲ್ಲಿದೆ. ತ್ಯಾಜ್ಯ ತಂದ ವಾಹನಗಳು ಇಲ್ಲಿ ನಿಲುಗಡೆ ಮಾಡಿದಾಗ, ಹಿಂಬದಿಯ ವಾಹನಗಳು ಮುಂದೆ ಹೋಗಲು ಪದೇ ಪದೇ ಹಾರ್ನ್ ಮಾಡುವುದು ಇದೆ. ಸಮೀಪದಲ್ಲೇ ಮೃಗಾಲಯ ಹಾಗೂ ಕಾರಂಜಿ ಕೆರೆ ಇರುವ ಹಿನ್ನೆಲೆಯಲ್ಲಿ ಇಲ್ಲಿ ಹಾರ್ನ್ ಮಾಡದಂತೆಯೂ ಬೋರ್ಡ್ ಹಾಕಲಾಗಿದೆ. ಅದಾಗ್ಯೂ ವಾಹನ ದಟ್ಟಣೆ ಕಾರಣಕ್ಕೆ ಹಾರ್ನ್ ಮಾಡುವುದು ಇಲ್ಲಿ ಸರ್ವೇ ಸಾಮಾನ್ಯವಾಗುತ್ತಿದೆ.

ಈ ಎಲ್ಲಾ ದೃಷ್ಟಿಯಿಂದ ಸದರಿ ಕೇಂದ್ರ ಇಲ್ಲಿರುವುದು ಸೂಕ್ತವೂ ಅಲ್ಲ, ಸುರಕ್ಷಿತವೂ ಅಲ್ಲ ಎಂಬುದು ಪ್ರಜ್ಞಾವಂತ ನಾಗರಿಕರ ಅಭಿಮತವಾಗಿದೆ. ಲೋಕರಂಜನ್ ಮಹಲ್ ರಸ್ತೆ ಹಾಗೂ ನಜರ್‌ಬಾದ್‌ನ ವಿವಿಧ ಬಡಾವಣೆಗಳಿಗೆ ಇದು ಸಂಪರ್ಕ ರಸ್ತೆಯಾಗಿದ್ದು, ಹೀಗಾಗಿ ವಾಹನಗಳ ಸಂಖ್ಯೆ ಪ್ರತಿನಿತ್ಯ ಇದ್ದೇ ಇದೆ. ಹೀಗಾಗಿ ಈ ಕೇಂದ್ರವನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರ ಮಾಡಬೇಕೆಂಬುದು ನಾಗರಿಕರ ಮನವಿಪೂರ್ವಕ ಒತ್ತಾಯವಾಗಿದೆ



ಮೈಸೂರಿನ ಕಾರಂಜಿ ಕೆರೆ ರಸ್ತೆಯಲ್ಲಿ ಪಾಲಿಕೆಯ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರದ ಮುಂದೆ ಸಾಗುತ್ತಿರುವ ವಾಹನಗಳು.

ಮದ್ದೂರು ಪಟ್ಟಣದಲ್ಲಿ ಘರ್ಜಿಸಿದ ಜೆಸಿಬಿಗಳು

● ಒತ್ತುವರಿಯಾಗಿದ್ದ ಹಲವು ವಾಣಿಜ್ಯ ಮಳಿಗೆಗಳು ನೆಲಸಮ ● ಕೆಲಕಾಲ ಉದ್ವಿಗ್ನ ಪರಿಸ್ಥಿತಿ, ಪೊಲೀಸರೊಂದಿಗೆ ವಾಗ್ವಾದ





ಮದ್ದೂರು ಪಟ್ಟಣದ ಶಿವಪುರದ ಕೊಪ್ಪ–ಮದ್ದೂರು ರಸ್ತೆ ಹಾಗೂ ಚರಂಡಿಯನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಿದ್ದ ವಾಣಿಜ್ಯ ಮಳಿಗೆ, ಕಟ್ಟಡಗಳನ್ನು ಶನಿವಾರ ತೆರವುಗೊಳಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಉದ್ರಿಕ್ತಗೊಂಡ ಗುಂಪೊಂದು ಪೊಲೀಸರ ಜೊತೆ ವಾಗ್ವಾದಕ್ಕೆ ಇಳಿದಿರುವುದನ್ನು ಕಾಣಬಹುದು.

ಮದ್ದೂರು, ಮೇ 24(ಚಾಮನಹಳ್ಳಿ ಮಂಜು)– ಪಟ್ಟಣದ ಶಿವಪುರದ ಕೊಪ್ಪ –ಮದ್ದೂರು ರಸ್ತೆಯನ್ನು ಹಾಗೂ ಚರಂಡಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದ ವಾಣಿಜ್ಯ ಮಳಿಗೆಗಳು, ಕಟ್ಟಡಗಳನ್ನು ಪುರಸಭೆ ಲೋಕೋಪಯೋಗಿ ಹಾಗೂ ಪೊಲೀಸ್ ಇಲಾಖೆಗಳು ಜಂಟಿ ಕಾರ್ಯಾಚರಣೆ ನಡೆಸಿ ಒತ್ತುವರಿ ತೆರವುಗೊಳಿಸಲಾಯಿತು.

ಶನಿವಾರ ಬೆಳ್ಳಂಬೆಳಗ್ಗೆ 7 ಗಂಟೆಗೆ ಪಟ್ಟಣದ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಿವಕುಮಾರ್ ಅವರ ಬಿಗಿ ಪೊಲೀಸ್ ಭದ್ರತೆಯೊಂದಿಗೆ ತೆರಳಿದ ಲೋಕೋಪಯೋಗಿ ಎಇಇ ದೇವಾನಂದ್, ಮುಖ್ಯಾಧಿಕಾರಿ ಮೀನಾಕ್ಷಿ ಹಾಗೂ ಅಧಿಕಾರಿಗಳು, ಸಿಬ್ಬಂದಿ ಸುಮಾರು 70ಕ್ಕೂ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ತೆರವು ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಮಾಡಿದರು. ಈ ವೇಳೆ ಪಟ್ಟಣದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಕೆಲವರು ತೆರವು ಕಾರ್ಯಾಚರಣೆಯನ್ನು ವಿರೋಧಿಸಿ ಆಕ್ರೋಶ ವ್ಯಕ್ತಪಡಿಸಿ ಪೊಲೀಸರೊಂದಿಗೆ ವಾಗ್ವಾದಕ್ಕೆ ಇಳಿದಿದ್ದರು. ಪೊಲೀಸರು ಎಲ್ಲರನ್ನು ನಿಭಾಯಿಸಿ ಪರಿಸ್ಥಿತಿ ನಿಯಂತ್ರಿಸಿ ಕಾರ್ಯಾಚರಣೆ ಸುಗಮವಾಗಿ ನಡೆಯಲು ಅನುವು ಮಾಡಿಕೊಟ್ಟರು.

ಪುರಸಭಾ ಮುಖ್ಯಾಧಿಕಾರಿ ಮೀನಾಕ್ಷಿ ಮಾತನಾಡಿ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಶಿವಪುರದ ಹೊಸ ಕೊಪ್ಪ ಸರ್ಕಲ್ ಬಳಿ ಸೇತುವೆ ಕಾಮಗಾರಿ ಮಾಡುವ ಸಂದರ್ಭದಲ್ಲಿ ಸರ್ಕಾರಿ ಜಾಗ ಹಾಗೂ ಚರಂಡಿ ಒತ್ತುವಾರಿಯಾಗಿದ್ದು ಒತ್ತುವರಿ ಜಾಗವನ್ನು ತೆರವುಗೊಳಿಸುವಂತೆ ಪುರಸಭೆಗೆ ಮನವಿ ಮಾಡಿದ್ದರು. ಈ ಹಿನ್ನಲೆಯಲ್ಲಿ ಪುರಸಭೆ ವತಿಯಿಂದ ಒತ್ತುವರಿ ಮಾಡಿಕೊಂಡಿದ್ದ ಅಂಗಡಿ ಮಾಲೀಕರಿಗೆ ಮೌಖಿಕವಾಗಿ ತಿಳಿಸಲಾಗಿತ್ತು ಹಾಗೂ ಈ ಸಂಬಂಧ ಧ್ವನಿವರ್ಧಕದ ಮೂಲಕ ಪ್ರಚಾರವನ್ನು ಮಾಡಲಾಗಿತ್ತು. ಆದರೆ, ಕೆಲವು ಅಂಗಡಿ ಮಾಲೀಕರು ಸ್ಥಳವನ್ನು ತೆರವು ಮಾಡದ ಕಾರಣ ಪೊಲೀಸ್ ಬಂದೋಬಸ್ತ್‌ನಲ್ಲಿ ತೆರವು ಮಾಡಲಾಗಿದೆ ಎಂದರು.

ಮದ್ದೂರು–ಕೊಪ್ಪ ರಸ್ತೆಯನ್ನು ಕೆಲವರು ಒತ್ತುವರಿ ಮಾಡಿಕೊಂಡು ಮಳಿಗೆಗಳು, ಇತರೆ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದು, ಈ ಸಂಬಂಧ ಈಗಾಗಲೇ ಸ್ಥಳವನ್ನು ತೆರವು ಮಾಡುವಂತೆ ಮೌಖಿಕವಾಗಿ ತಿಳಿಸಿದ್ದು ಖಾಲಿ ಮಾಡದ ಕಾರಣ ಒತ್ತುವರಿ ತೆರವುಗೊಳಿಸಲಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆ ಎಇಇ ದೇವಾನಂದ್ ಹೇಳಿದರು.

ದುಃಖಿತರಾದ ವರ್ತಕರು: ಮೂರು ದಿನಗಳ ಮುಂಚೆಯೇ ಮಳಿಗೆಗಳು, ಕಟ್ಟಡಗಳನ್ನು ಖಾಲಿ ಮಾಡುವಂತೆ ಪುರಸಭೆ, ಲೋಕೋಪಯೋಗಿ ಇಲಾಖೆಗಳು ಸಂಬಂಧಪಟ್ಟವರಿಗೆ ಮೌಖಿಕವಾಗಿ ತಿಳಿಸಲಾಗಿತ್ತು. ಬಳಿಕ ಕೆಲವರು ಖಾಲಿ ಮಾಡಿದ್ದರು, ಕೆಲವರು ತೆರವು ಕಾರ್ಯಾಚರಣೆ ನಡೆಯುವುದಿಲ್ಲ ಎಂಬ ಭರವಸೆಯಲ್ಲಿ ಖಾಲಿ ಮಾಡಿರಲಿಲ್ಲ. ಮುಂಜಾನೆಯೇ ಜೆಸಿಬಿ ಕಾರ್ಯಾಚರಣೆ ಸದ್ದು ಕೇಳಿಸುತ್ತಿದ್ದಂತೆ ಮಳಿಗೆ ಕಟ್ಟಡಗಳಲ್ಲಿದ್ದ ಸಾಮಾನುಗಳನ್ನು ಹೊರ ತಂದು, ಕಣ್ಣೆದುರೇ ನೆಲಸಮ ಆಗುತ್ತಿರುವುದನ್ನು ಕಂಡು ದುಃಖಿತರಾದರು.

ಶಿವಪುರ ಕೊಪ್ಪ ಸರ್ಕಲ್‌ನಲ್ಲಿ ತೆರವು ಕಾರ್ಯಾಚರಣೆ ವಿಷಯ ತಿಳಿದು ಪಟ್ಟಣದ ಪೇಟೆಬೀದಿಯ ವ್ಯಾಪಾರಸ್ಥರು ಬೆಚ್ಚಿ ಬಿದ್ದಿದ್ದಾರೆ. ಈಗಾಗಲೇ ಮದ್ದೂರು ಪಟ್ಟಣದ ಪೇಟೆಬೀದಿಯ ರಸ್ತೆ ಅಗಲೀಕರಣ ಮಾಡಲು ಬಜೆಟ್‌ನಲ್ಲಿ ಪ್ರಸ್ತಾಪವಾಗಿದ್ದು, ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಸಿಗಬೇಕಿದೆ. ಒಂದು ವೇಳೆ ಅನುಮೋದನೆ ಸಿಕ್ಕರೆ ಇನ್ನು ಕೆಲ ದಿನಗಳಲ್ಲೇ ಪಟ್ಟಣದ ರಸ್ತೆ ಅಗಲೀಕರಣವಾಗುವುದರಿಂದ ಬೀದಿ ಬದಿ ವ್ಯಾಪಾರಿಗಳಿಗೆ, ಹಾಗೂ ಪೇಟೆ ಬೀದಿಯಲ್ಲಿ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಮಳಿಗೆ, ಕಟ್ಟಡ ನಿರ್ಮಿಸಿಕೊಂಡಿರುವವರಿಗೆ ಸಹಜ ವಾಗಿ ಸಂಕಷ್ಟ ಎದುರಾಗಲಿದೆ.

ಚಿರತೆ ದಾಳಿಗೆ ಹಸು ಬಲಿ



ಕೆ.ಆರ್.ಪೇಟೆ, ಮೇ 24– ಜಮೀನಿನ ಬಳಿ ಮೇಯುತ್ತಿದ್ದ ಹಸುವಿನ ಮೇಲೆ ಚಿರತೆಯು ದಾಳಿ ನಡೆಸಿ ತಿಂದು ಹಾಕಿರುವ ಘಟನೆ ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆದಿದೆ.

ಅಗ್ರಹಾರಬಾಚಹಳ್ಳಿ ಗ್ರಾಮದ ಕೃಷ್ಣೇಗೌಡ ಎಂಬುವವರಿಗೆ ಸೇರಿದ ಸುಮಾರು 50 ಸಾವಿರ ರೂ. ಬೆಲೆ ಬಾಳುವ ಹಸುವನ್ನು ಚಿರತೆಯು ಶುಕ್ರವಾರ ಸಂಜೆ ದಾಳಿ ಮಾಡಿ ಕೊಂದು ಭಾಗಶಃ ತಿಂದು ಪರಾರಿಯಾಗಿದೆ. ಖಾಸಗಿ ಫೈನಾನ್ಸ್‌ನಲ್ಲಿ ಸಾಲ ಮಾಡಿ ಹಸುವನ್ನು ಖರೀದಿ ಮಾಡಿದ್ದ ಕೃಷ್ಣೇಗೌಡರಿಗೆ ಸಾಲ ತೀರಿಸುವ ದಾರಿ ಇಲ್ಲದೇ ಕಂಗಾಲಾಗಿದ್ದಾರೆ.

ಘಟನಾ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿದ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್ ಸಂಬಂಧಪಟ್ಟ ಅರಣ್ಯ ಅಧಿಕಾ ರಿಗಳು ಬೋನನ್ನು ಇಟ್ಟು ಚಿರತೆಯನ್ನು ಸೆರೆ ಹಿಡಿಯಬೇಕೆಂದು ಮನವಿ ಮಾಡಿದರು.

ಘಟನಾ ಸ್ಥಳಕ್ಕೆ ಅರಣ್ಯ ಅಧಿಕಾರಿಗಳಾದ ತಾಲೂಕು ಅರಣ್ಯಾಧಿಕಾರಿ ಅನಿತಾ, ಪ್ರಶಾಂತ್, ತಾಲೂಕು ಪಶು ವೈದ್ಯಾಧಿಕಾರಿಗಳಾದ ಡಾ.ದೇವರಾಜ್, ಗ್ರಾಮಸ್ಥರಾದ ಉದ್ಯಾನಿ ಮಹದೇವೇಗೌಡ, ಎ.ಸಿ.ಅಭಿ, ನಿಶಾಂತ್, ಪ್ರಮೋದ್, ಪ್ರತಾಪ್, ರಾಜೇಗೌಡ, ಪ್ರತಾಪ್ ಮತ್ತಿತರರು ಉಪಸ್ಥಿತರಿದ್ದರು.

ಕಲುಷಿತ ನೀರು ಕುಡಿದು ಕುರಿಗಳ ಸಾವು

ಮದ್ದೂರು: ವಿಷ ಮಿಶ್ರಿತ ಕಲುಷಿತ ನೀರು ಕುಡಿದು 12 ಕ್ಕೂ ಹೆಚ್ಚು ಕುರಿಗಳು ಸಾವನ್ನಪ್ಪಿರುವ ದಾರುಣ ಘಟನೆ ತಾಲೂಕಿನ ಸೋಮನಹಳ್ಳಿ ಕೈಗಾರಿಕಾ ಪ್ರದೇಶದ ಬಳಿ ಶುಕ್ರವಾರ ಜರುಗಿದೆ.

ಮಂಡ್ಯ ತಾಲೂಕಿನ ಬಸರಾಳು ಹೋಬಳಿಯ ಚನ್ನಾಪುರ ಗ್ರಾಮದ ರಾಜು ಎಂಬುವವರ ಕುರಿಗಳೇ ಸಾವನ್ನಪ್ಪಿರುವುದು ಎನ್ನಲಾಗಿದೆ. ಚನ್ನಾಪುರ ಗ್ರಾಮದಿಂದ ರಾಜು ಎಂಬುವವರು ಕುರಿಗಳಿಗೆ ಆಹಾರ ಅರಸಿಕೊಂಡು (ಮೇಯಿಸಲು) ಅಂದಾಜು 250 ಕ್ಕೂ ಹೆಚ್ಚು ಕುರಿಗಳೊಂದಿಗೆ ಸೋಮನಹಳ್ಳಿ ಕೈಗಾರಿಕಾ ಪ್ರದೇಶದ ಕಡೆ ಬಂದಿದ್ದಾರೆ.

ಮಧ್ಯಾಹ್ನದ ನಂತರ ಮೇವು ತಿಂದ ಬಳಿಕ ಅಲ್ಲಿಯೇ ಇದ್ದ ಚರಂಡಿ ನೀರನ್ನು ಕುಡಿದಿವೆ. ಚರಂಡಿಯಲ್ಲಿ ಮಿಶ್ರಣಗೊಂಡಿದ್ದ ಕಲುಷಿತ ನೀರು ಕುಡಿದು ಕೆಲ ಹೊತ್ತಿನಲ್ಲೇ 12 ಕ್ಕೂ ಹೆಚ್ಚು ಕುರಿಗಳು ನರಳಾಟದಿಂದ ಸಾವನ್ನಪ್ಪಿವೆ ಎನ್ನಲಾಗಿದೆ. ಇನ್ನೂ ಹಲವಾರು ಕುರಿಗಳು ಅಸ್ವಸ್ಥಗೊಂಡಿದೆ. ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ವಿಷ ಮಿಶ್ರಿತ ನೀರನ್ನು ಕುಡಿದು ಹಲವಾರು ಬಾರಿ ಲಕ್ಷಾಂತರ ಬೆಲೆ ಬಾಳುವ ಕುರಿಗಳು ಮೃತಪಟ್ಟಿವೆ. ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಚರಂಡಿಗೆ ಯಾವ ಕಾರ್ಖಾನೆಯಿಂದ ವಿಷ ಮಿಶ್ರಿತ ನೀರು ಬರುತ್ತಿದೆ ಎಂಬುವುದನ್ನು ಪರಿಶೀಲಿಸಿ ಅಂತಹ ಕಾರ್ಖಾನೆಗಳಿಗೆ ಪರಿಸರ ಮಾಲಿನ್ಯ ಇಲಾಖೆಯ ಅಧಿಕಾರಿಗಳು ನೋಟಿಸ್ ನೀಡಿ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಒತ್ತಾಯ ಮಾಡಿದ್ದಾರೆ.

ಪಾಂಡವಪುರ ಪ್ರೀಮಿಯರ್ ಲೀಗ್ ಉದ್ಘಾಟನೆ



ಪಾಂಡವಪುರ: ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನಿಪ್ಪು ವಾರಿಯರ್ಸ್ ವತಿಯಿಂದ ನಡೆದ ಪಾಂಡವಪುರ ಪ್ರೀಮಿಯರ್ ಲೀಗ್ ಕ್ರೀಡಾಕೂಟಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಪಾಂಡವಪುರ ಪ್ರೀಮಿಯರ್ ಲೀಗ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಸಿ.ಎಸ್.ಪುಟ್ಟರಾಜು ಅವರು ಬ್ಯಾಟಿಂಗ್ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡಿ, ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನಿಪ್ಪು ವಾರಿಯರ್ಸ್ ವತಿಯಿಂದ ನಡೆಸುತ್ತಿರುವ ಪಾಂಡವಪುರ ಪ್ರೀಮಿಯರ್‌ಗೆ ಚಾಲನೆ ನೀಡಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಕ್ರೀಡಾಪಟುಗಳನ್ನು ಕರೆತಂದು ಕ್ರೀಡಾಕೂಟ ನಡೆಸುತ್ತಿದ್ದಾರೆ. ಪಟ್ಟಣದಲ್ಲಿ ಕಷ್ಟಪಟ್ಟು ಕ್ರೀಡಾಂಗಣ ನಿರ್ಮಾಣ ಮಾಡಿದಕ್ಕೂ ಸಾರ್ಥಕವಾಯಿತು ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಆರ್.ಸೋಮಶೇಖರ್, ತಿರ್ಲಾಪುರ ಜಯರಾಮು, ವಿವೇಕ್ ನಾರಾಯಣ ಗೌಡ, ಅಂಗಡಿ ಸೋಮೇಗೌಡ, ಎಂಜಿನಿಯರ್ ಸತೀಶ್, ಡ್ಯಾನ್ಸರ್ ಮುರುಳಿ, ಹೇಮಂತ್, ವರದರಾಜು, ಮನೋಜ್ ಸೇರಿದಂತೆ ಹಲವರು ಇದ್ದರು.

ಸಚಿವ ಎನ್.ಚೆಲುವರಾಯಸ್ವಾಮಿ ಭೇಟಿ



ಹುಲ್ಲಿನ ಬಣವೆಯ ಬೆಂಕಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಕೆ.ಆರ್.ಪೇಟೆ ತಾಲೂಕಿನ ಕತ್ತರಘಟ್ಟ ಗ್ರಾಮದ ದಲಿತ ಯುವಕ ಜಯಕುಮಾರ್ ನಿವಾಸಕ್ಕೆ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ 4,12,500 ರೂ. ಪರಿಹಾರ ವಿತರಿಸಿದರು.

ಇಡಿ ದಾಳಿ ಖಂಡಿಸಿ ದಲಿತ ಮುಖಂಡರ ಪ್ರತಿಭಟನೆ



ಭಾರತೀನಗರ, ಮೇ 24– ಗೃಹ ಸಚಿವ ಜಿ.ಪರಮೇಶ್ವರ್ ಅವರ ಕಚೇರಿಗಳ ಮೇಲೆ ಇಡಿ ದಾಳಿ ನಡೆಸಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆಯ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯ ಹಲಗೂರು ವೃತ್ತದಲ್ಲಿ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆಯ ಪದಾಧಿಕಾರಿಗಳು ವೇದಿಕೆಯ ರಾಜ್ಯಾಧ್ಯಕ್ಷ ಸುರೇಶ್‌ಕಂಠಿ ಅವರ ನೇತೃತ್ವದಲ್ಲಿ ಜಮಾಯಿಸಿ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟಿಸಿದರು.

ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ವೇದಿಕೆ ರಾಜ್ಯಾಧ್ಯಕ್ಷ ಸುರೇಶ್ ಕಂಠಿ, ದಲಿತ ಮುಖಂಡ ಕೆ.ಕಬ್ಬಾಳಯ್ಯ ಮಾತನಾಡಿದರು. ಇದೇ ವೇಳೆ ವೇದಿಕೆಯ ತಾಲೂಕು ಅಧ್ಯಕ್ಷ ಕರಡಕೆರೆ ಯೋಗೇಶ್, ಕಬ್ಬಾಳಯ್ಯ, ಮುಡೀನಹಳ್ಳಿ ತಿಮ್ಮಯ್ಯ, ಕೆಕೆಹಳ್ಳಿ ಕೆಂಪರಾಜು, ಅಪ್ಪು, ಮರಿಸ್ವಾಮಿ, ಅನೀಲ್, ಮಾಲಯ್ಯ, ರಾಮಣ್ಣ, ಚನ್ನಸ್ವಾಮಿ, ಭಾರತೀನಗರ ಹಿಂದುಳಿದ ವರ್ಗದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೀನ್ ಶಿವಲಿಂಗಯ್ಯ, ಸುನೀಲ್, ನಿರಂಜನ್, ಗುಡಿಗೆರೆ ಪ್ರಕಾಶ್, ಪುಟ್ಟಸ್ವಾಮಿ, ರುದ್ರಯ್ಯ, ಪಾಪಣ್ಣ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಒಂದನೇ ಪುಟದಿಂದ

ಮತ್ತೆ ವಕ್ಕರಿಸಿದ ಕೊರೊನಾ

ಮೈಸೂರಲ್ಲಿ 2 ಮತ್ತು ವಿಜಯಪುರದಲ್ಲಿ 1 ಪ್ರಕರಣ ಸೇರಿದೆ. ಕೊರೊನಾ ಸೋಂಕು ಹರಡದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಆರೋಗ್ಯ ಇಲಾಖೆ ಸಾರ್ವ ಜನಿಕರನ್ನು ಎಚ್ಚರಿಸಿದೆ. ಕಳೆದ 20 ದಿನಗಳಲ್ಲಿ ಕೋವಿಡ್ ಪ್ರಕರಣಗಳಲ್ಲಿ ಏಕಾಏಕಿ ಹೆಚ್ಚಳ ಕಂಡುಬಂದಿದ್ದು, ಮಕ್ಕಳು, ವೃದ್ಧರು ಹಾಗೂ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರು ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕು. ಈವರೆಗೆ ಕೋವಿಡ್ ಸಂಬಂಧಿತ ಸಾವುಗಳು ವರದಿಯಾಗಿಲ್ಲ. ಆದರೂ, ಸೋಂಕು ಮತ್ತಷ್ಟು ಹರಡುವುದನ್ನು ತಡೆಯಲು ಎಚ್ಚರಿಕೆ ಅಗತ್ಯ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಗರ್ಭಿಣಿಯರು, ಮಕ್ಕಳು, ಇತರೆ ಕಾಯಿಲೆಗಳಿಂದ ಬಳಲುತ್ತಿರುವವರು, ರೋಗನಿರೋಧಕ ಶಕ್ತಿ ಕಡಿಮೆ ಇರುವವರು ಜನದಟ್ಟಣೆ ಪ್ರದೇಶಗಳಲ್ಲಿ ಫೇಸ್ ಮಾಸ್ಕ್ ಧರಿಸಿ ಓಡಾಡುವಂತೆ ಸೂಚಿಸಲಾಗಿದೆ. ಸಾರ್ವಜನಿಕರು ಕೈಗಳ ನೈರ್ಮಲ್ಯ ಕಾಪಾಡಿಕೊಳ್ಳಲು ಮತ್ತು ನಿಯಮಿತವಾಗಿ ಹ್ಯಾಂಡ್ ಸ್ಯಾನಿಟೈಸರ್ ಬಳಸಲು ಸಲಹೆ ನೀಡಲಾಗಿದೆ. ತೀವ್ರ ಉಸಿರಾಟದ ತೊಂದರೆ ಲಕ್ಷಣ ಇರುವವರು ಸಕಾಲಿಕವಾಗಿ ಚಿಕಿತ್ಸೆ ಪಡೆದುಕೊಳ್ಳಬೇಕು, ಸಂಭಾವ್ಯ ಅಪಾಯ ತಡೆಗಟ್ಟಲು ಕೋವಿಡ್–19 ಪರೀಕ್ಷೆ ತಕ್ಷಣವೇ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆಯಲ್ಲಿ ಒಂಬತ್ತು ತಿಂಗಳ ಮಗುವಿಗೆ ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆ (ಆರ್‌ಎಟಿ) ನಡೆಸಿದಾಗ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ತಿಳಿಸಿದ್ದಾರೆ. ಮಗುವನ್ನು ಆರಂಭದಲ್ಲಿ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು ನಂತರ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು, ಮಗುವಿನ ಆರೋಗ್ಯ ಪ್ರಸ್ತುತ ಸ್ಥಿರವಾಗಿದ್ದು, ವೈದ್ಯಕೀಯ ಆರೈಕೆ ನೀಡಲಾಗುತ್ತಿದೆ ಎಂದರು.

ಬಿಜೆಪಿಗೆ ಅಧಿಕಾರ ಗದ್ದುಗೆ!

ಮತದಾರರು ಸಿದ್ದರಾಮಯ್ಯ ಅವರಿಗಾಗಿ ಮತ ಹಾಕಲಿದ್ದಾರೆ. ಮತ್ತೊಂದೆಡೆ ಡಿಸಿಎಂ ಡಿ.ಕೆ.ಶಿವಕುಮಾರ್ ಪರವಾಗಿ ಮತ ಹಾಕುವವರ ಸಂಖ್ಯೆ ಶೇ.10.7ರಷ್ಟು, ಬಿ.ಎಸ್.ಯಡಿಯೂರಪ್ಪ ಅವರಿಗಾಗಿ ಮತಹಾಕುವವರ ಸಂಖ್ಯೆ ಶೇ.5.5, ಬಸವರಾಜ ಬೊಮ್ಮಾಯಿಗೆ ಶೇ.3.6, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪರವಾಗಿ ಶೇ.5.2ರಷ್ಟು ಮತಗಳು ಆಯಾ ಪಕ್ಷಗಳಿಗೆ ಸಿಗುವ ಸಾಧ್ಯತೆಗಳಿವೆ. ಬಿಜೆಪಿಯ ಯಾವುದೇ ಅಭ್ಯರ್ಥಿಗೆ ಶೇ.16.9ರಷ್ಟು ಮತಗಳು ಸಿಗಲಿವೆ ಎಂದು ಸಮೀಕ್ಷೆ ಹೇಳಿದೆ.

ಜಾತಿಗಣತಿ ಪರವಾಗಿ ಇರುವವರು: ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ (ಜಾತಿ ಸಮೀಕ್ಷೆ) ಪರವಾಗಿ ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ.42.3ರಷ್ಟು (ಇವರಲ್ಲಿ ಶೇ.26.3ರಷ್ಟು ಪೂರ್ಣ, ಶೇ.16ರಷ್ಟು ಭಾಗಶಃ) ಜನರಿದ್ದಾರೆ. ಶೇ.35ರಷ್ಟು ಜನ ವರದಿಯನ್ನು ನಂಬುವುದಿಲ್ಲ ಎಂದಿದ್ದಾರೆ. ಶೇ.22.7ರಷ್ಟು ಜನರಿಗೆ ವರದಿ ಕುರಿತು ಮಾಹಿತಿಯೇ ಇಲ್ಲ ಎಂದೆನ್ನಲಾಗಿದೆ. ಶೇ.39.6ರಷ್ಟು ಜನರು ಕಾಂಗ್ರೆಸ್ ಅನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇವೆ ಎಂದಿದ್ದಾರೆ. ಶೇ.18.5ರಷ್ಟು ಜನರು ಬಿಜೆಪಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಗೃಹಲಕ್ಷ್ಮಿ ಅತ್ಯಂತ ಜನಪ್ರಿಯ: ಮನೆಯ ಯಜಮಾನಿಗೆ ಮಾಸಿಕ ರೂ. 2 ಸಾವಿರ ನೀಡುವ ಕಾಂಗ್ರೆಸ್ ಸರ್ಕಾರದ ಗೃಹಲಕ್ಷ್ಮಿ ಅತ್ಯಂತ ಜನಪ್ರಿಯ ಯೋಜನೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ.45.4ರಷ್ಟು ಮಂದಿ ಹೇಳಿದ್ದಾರೆ. ನಂತರದ ಸ್ಥಾನದಲ್ಲಿ ಶಕ್ತಿ (ಶೇ.19), ಅನ್ನಭಾಗ್ಯ (ಶೇ.17), ಗೃಹಜ್ಯೋತಿ (ಶೇ.13.5), ಯುವ ನಿಧಿ (ಶೇ.2) ಸ್ಥಾನ ಪಡೆದಿವೆ. ಶೇ.3ರಷ್ಟು ಜನರಿಗೆ ಗ್ಯಾರಂಟಿಗಳ ಮಾಹಿತಿ ಇಲ್ಲ ಎಂದು ವರದಿ ಹೇಳಿದೆ.

ಜಲಾಶಯಕ್ಕೆ ಹಾರಿ ಆತ್ಮಹತ್ಯೆ

ಒಂದು ಗಂಟೆ ಕಾಲ ಶೋಧ ಕಾರ್ಯಾಚರಣೆ ನಡೆಸಿ ಕೊನೆಗೂ ಮೂವರ ಮೃತ ದೇಹಗಳನ್ನು ನೀರಿನಿಂದ ಹೊರ ತೆಗೆದು ನಂತರ ಮರಣೋತ್ತರ ಪರೀಕ್ಷೆಗೆ ಎಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ವೇಳೆ ಹೆಬ್ಬಾಳ ಜಲಾಶಯದ ಬಳಿ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಸಾವಿರಾರು ಜನ ಸೇರಿದ್ದರು. ಮರಣೋತ್ತರ ಪರೀಕ್ಷೆ ಬಳಿಕ ಬೂದನೂರು ಗ್ರಾಮದ ಅವರ ಜಮೀನಿನಲ್ಲಿ ಸಂಜೆ ವೇಳೆಗೆ ಅಂತ್ಯಕ್ರಿಯೆ ನಡೆಯಿತು. ಈ ಸಂಬಂಧ ಹೆಚ್.ಡಿ ಕೋಟೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ. ಕೋಟೆ ಅಗ್ನಿಶಾಮಕ ಠಾಣಾಧಿಕಾರಿ ಸೋಮಣ್ಣ, ಹುಣಸೂರಿನ ಅಗ್ನಿಶಾಮಕ ದಳದ ಸಹಾಯಕ ಠಾಣಾಧಿಕಾರಿ ಕೆ.ಸಿ.ಸತೀಶ್, ರವಿ, ಪ್ರಸಾದ್, ರಂಜಿತ್, ದಿನೇಶ್, ಸಂಗಮೇಶ್ ರಾಹುಲ್, ಬಾಲಕೃಷ್ಣ, ವಿನಯ್ ಕುಮಾರ್, ಗಣೇಶ್, ಅಶೋಖ್, ವಿಶಾಲ್ ಮಂಜು, ಹೆಚ್.ಡಿ.ಕೋಟೆ ಸರ್ಕಲ್ ಇನ್ಸ್‌ಪೆಕ್ಟರ್, ಗಂಗಾಧರ್, ಎಸ್‌ಐ ಚಿಕ್ಕನಾಯಕ, ಸುರೇಶ್ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ ಈ ವೇಳೆ ಸ್ಥಳದಲ್ಲಿ ಹಾಜರಿದ್ದರು.

ಅನುಭವ ಮಂಟಪ ಮುಂದಿನ ವರ್ಷ ಲೋಕಾರ್ಪಣೆ: ಸಿಎಂ

ನುಡಿದಂತೆ ನಡೆದ ಬಸವಾದಿ ಶರಣರು ಜಾತಿ ರಹಿತ, ವರ್ಗರಹಿತ, ಅಸಮಾನತೆ ಮುಕ್ತ ಸಮಾಜ ನಿರ್ಮಿಸಲು ಬಹು ದೊಡ್ಡ ಕ್ರಾಂತಿಯನ್ನೆ ಮಾಡಿದರು ಎಂದರು.

ಜಾತಿ ರಹಿತ, ವರ್ಗ ರಹಿತ, ಮನುಷ್ಯತ್ವದಿಂದ ಕೂಡಿರುವ ಮಾನವೀಯ ನೆಲೆಗಟ್ಟಿನ ಮೌಲ್ಯಗಳನ್ನು ಅನುಭವ ಮಂಟಪ ಸಾರಿ ಹೇಳಲಾಯಿತು. ಶರಣರ ಅನುಭವದ ಮಾತುಗಳೇ ವಚನಗಳಾಗಿತ್ತು. ಮಾತು ಎಂದರೆ ವಚನ ಎಂದು ಅದರ ವ್ಯಾಖ್ಯಾನವನ್ನು ಸಿದ್ದರಾಮಯ್ಯ ವಿವರಿಸಿದರು.

ಕನ್ನಡ ಸಾಹಿತ್ಯ, ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ ದೊಡ್ಡ ಮೈಲಿಗಲ್ಲುಗಳಾಗಿವೆ. 12 ನೇ ಶತಮಾನದಲ್ಲೇ ವಚನ ಸಾಹಿತ್ಯವನ್ನು ಬಸವಾದಿ ಶರಣರು ವ್ಯಾಪಕವಾಗಿ ಪಸರಿಸುತ್ತಾ ಸಾಮಾಜಿಕ ಕ್ರಾಂತಿ ಮಾಡಿದರು ಎಂದರು. ಬಸವಣ್ಣನವರು ಯಾವುದೇ ಒಂದು ಜಾತಿ, ವರ್ಗಕ್ಕೆ ಸೀಮಿತರಾಗಿಲ್ಲ. ಸಕಲ ವ್ಯಕ್ತಿಗಳು ಪವಿತ್ರ ಎನ್ನುವ ಮಹಾನ್ ಮಾನವೀಯ ಸಂದೇಶವನ್ನು ಜಗತ್ತಿಗೆ ಸಾರಿದ ಬಸವಣ್ಣ ಕ್ರಾಂತಿ ಪುರುಷ ಮಾತ್ರವಲ್ಲದೆ ವಿಶ್ವ ವಿಖ್ಯಾತ ಆರ್ಥಿಕ ತಜ್ಞ ಕೂಡ ಆಗಿದ್ದಾರೆ. ಕಾಯಕ ಮತ್ತು ದಾಸೋಹದ ಶ್ರಮ ಸಂಸ್ಕೃತಿಯ ಮಹತ್ವವನ್ನು ಬಸವಣ್ಣ ಇಡೀ ವಿಶ್ವಕ್ಕೆ ಸಾರಿದರು ಎಂದು ಹೇಳಿದರು.

ಸೋಮಾರಿಗಳಾಗದೆ ಕಷ್ಟಪಟ್ಟು ದುಡಿಮೆ ಮಾಡಿ, ಎಲ್ಲರೂ ಸಮಾನವಾಗಿ ಹಂಚಿಕೊಳ್ಳುವ ಪರಿಕಲ್ಪನೆಯನ್ನು ಬಸವಣ್ಣ ಅನುಭವ ಮಂಟಪದಲ್ಲಿ ನೀಡಿದ್ದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಜಾತ್ಯಾತೀತ, ಧರ್ಮಾತೀತ ಪರಿಕಲ್ಪನೆ ಇತ್ತು. ಮೇಲು–ಕೀಳು, ಪುರುಷ–ಮಹಿಳೆ ಯಾವ ಭೇದ–ಭಾವ ಮತ್ತು ಕಟ್ಟು–ಪಾಡು ಇಲ್ಲದೆ ಪ್ರತಿಯೊಬ್ಬರನ್ನು ಸಮಾನ ದೃಷ್ಟಿಯಲ್ಲಿ ನೋಡಲಾಗುತ್ತಿತ್ತು ಎಂದು ಬಸವ ಧರ್ಮದ ತತ್ವಾದರ್ಶವನ್ನು ವಿವರಿಸಿದರು.

12ನೇ ಶತಮಾನದಿಂದ ಇಲ್ಲಿ ತನಕ ಬಸವಾದಿ ಶರಣರು ಸೇರಿದಂತೆ ಹಲವರು ಜಾತಿ ಮುಕ್ತ ವ್ಯವಸ್ಥೆಗೆ ಹಲವು ಸಂದೇಶ ನೀಡಿದರೂ ಜಾತಿ ವ್ಯವಸ್ಥೆ ಇನ್ನೂ ಬಲವಾಗಿ ಬೇರೂರಿರುವುದು ಬೇಸರದ ಸಂಗತಿ ಎಂದರು. ಮೈಸೂರಿನಲ್ಲಿ ಬಸವ ಭವನ ನಿರ್ಮಾಣ ಮಾಡಲು ಸರ್ಕಾರದಿಂದ ಅನುದಾನ ನೀಡುವುದಾಗಿ ಸಿದ್ದರಾಮಯ್ಯ ಭರವಸೆ ಕೂಡ ನೀಡಿದರು.

ಇದೇ ವೇಳೆ ಮಾತನಾಡಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, ಕ್ರಾಂತಿಕಾರಿ ಬಸವಣ್ಣನವರು ಈ ಜಗತ್ತು ಕಂಡ ಶ್ರೇಷ್ಠ ಸಂತರಲ್ಲಿ ಒಬ್ಬರಾಗಿದ್ದಾರೆ. ಬಸವಣ್ಣ ನೀಡಿದ ಸಂದೇಶ ಸರ್ವಕಾಲಿಕವಾಗಿದೆ. ಬಸವಣ್ಣನವರು ನೀಡಿದ ಸಂದೇಶ ಪಾಲಿಸಬೇಕು, ವಚನಗಳನ್ನು ಅನುಸರಿಸಬೇಕು. ಹೀಗಾದಾಗ ಮಾತ್ರ ಸಮ ಸಮಾಜ ಹಾಗೂ ಸುಖಿ ಸಮಾಜ ನಿರ್ಮಾಣ ಮಾಡಬಹುದು ಎಂದು ಹೇಳಿದರು.

ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳು ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಿತ್ತು.

ಪೌರಾಡಳಿತ ಸಚಿವ ರಹೀಂ ಖಾನ್, ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಕೆ.ಹರೀಶ್ ಗೌಡ, ರವಿಶಂಕರ್, ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಡಾ.ತಿಮ್ಮಯ್ಯ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಜೆಎಸ್‌ಎಸ್ ವಿದ್ಯಾಪೀಠದ ಬಳಿಯಿಂದ ಬಸವ ಜಯಂತಿಯ ವರ್ಣರಂಜಿತ ಮೆರವಣಿಗೆ ಆರಂಭವಾಯಿತು.

ವರ್ಣರಂಜಿತ ಮೆರವಣಿಗೆ, ಜಾನಪದ ಕಲಾತಂಡಗಳ ಮೆರಗು

ಮೈಸೂರಿನಲ್ಲಿ ಬಸವ ಜಯಂತಿಯ ವರ್ಣರಂಜಿತ ಮೆರವಣಿಗೆ ನಡೆಯಿತು. ನಗರದ ಗನ್‌ಹೌಸ್ ಬಳಿಯ ಜೆಎಸ್‌ಎಸ್ ವಿದ್ಯಾಪೀಠದಿಂದ ಆರಂಭವಾದ ಮೆರವಣಿಗೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿದರು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು. ನಂದಿಧ್ವಜ, ಪೂಜಾ ಕುಣಿತ, ತಮಟೆ, ನಗಾರಿ, ಅಲಂಕಾರಿಕ ಗೋವುಗಳು, ಮಂಗಳವಾದ್ಯ, ಮಹಿಳೆಯರ ಪೂರ್ಣಕುಂಭ, ಲಿಂಗಧೀರ ಕುಣಿತ, ಇಂಗ್ಲಿಷ್ ಬ್ಯಾಂಡ್, ಕಂಸಾಳೆ, ಬೆದರು ಬೊಂಬೆ, ಕೃತಕ ಅಂಬಾರಿ ಆನೆ, ಬಸವಣ್ಣನ ಮತ್ತು ಅಕ್ಕಮಹಾದೇವಿ ವೇಷದಾರಿಗಳು, ಸಾರೋಟಿನಲ್ಲಿ ಬಸವಣ್ಣನವರ ಪ್ರತಿಮೆಯು ಮೆರವಣಿಗೆ ಅತ್ಯಾಕರ್ಷಕವಾಗಿತ್ತು. ಬಸವೇಶ್ವರ ಪ್ರತಿಮೆಯಿಂದ ಹೊರಟ ಮೆರವಣಿಗೆ ಬಸವೇಶ್ವರ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಕೆ.ಆರ್.ಸರ್ಕಲ್, ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು. ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿತು.

ನಾನು 1ರಿಂದ 4ನೇ ಕ್ಲಾಸ್ ಓದದೆ ನೇರವಾಗಿ 5ನೇ ತರಗತಿಗೆ ಬಂದವ!

ನಾನು 1ರಿಂದ 4ನೇ ತರಗತಿ ತನಕ ಓದದೆ ನೇರವಾಗಿ 5 ನೇ ತರಗತಿಗೆ ದಾಖಲಾದೆ. ಅದೂ ರಾಜಪ್ಪ ಮೇಷ್ಟ್ರರ ಒತ್ತಾಯದಿಂದ ಶಾಲೆ ಸೇರಿ ಇವತ್ತು ಮುಖ್ಯಮಂತ್ರಿ ಆಗಿದ್ದೇನೆ ಎಂದು ಸಿದ್ದರಾಮಯ್ಯ, ತಮ್ಮ ಬಾಲ್ಯದ ದಿನಗಳನ್ನು ಮತ್ತೊಮ್ಮೆ ಮೆಲುಕು ಹಾಕಿದರು. ನನ್ನ ತಂದೆ, ತಾಯಿ ಇಬ್ಬರೂ ಶಿಕ್ಷಣ ವಂಚಿತರು. ನಮ್ಮ ತಂದೆ ನನ್ನನ್ನು ವೀರಮಕ್ಕಳ ಕುಣಿತ ಕಲಿಯಲು ಸೇರಿಸಿದ್ದರು. ಹಾಗೆಯೇ ಎಮ್ಮೆ ಮೇಯಿಸುತ್ತಿದ್ದೆ. ವೀರಮಕ್ಕಳ ಕುಣಿತ ಕಲಿಯುವ ವೇಳೆ ಕಾಗುಣಿತ ಸೇರಿದಂತೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು.

ಮೂಲತಃ ಹೊಳೆನರಸೀಪುರದವರಾದ ರಾಜಪ್ಪ ಮೇಷ್ಟ್ರು ನಮ್ಮ ಊರಿನ ಮನೆ ಮನೆಗೆ ಭೇಟಿ ನೀಡಿ ಶಾಲೆ ಬಿಟ್ಟು ಹೋಗಿದ್ದ ಮಕ್ಕಳನ್ನು ಕರೆತಂದು ಶಾಲೆಗೆ ಸೇರಿಸುವಂತೆ ಪೋಷಕರಿಗೆ ಒತ್ತಾಯ ಮಾಡುತ್ತಿದ್ದರು. ಅದರಂತೆ ನಮ್ಮ ಮನೆಗೆ ಬಂದು ನಮ್ಮ ತಂದೆಯನ್ನು ಒತ್ತಾಯಿಸಿ ಶಾಲೆಗೆ ಸೇರಿಸಿದರು. ಆಗ 1 ರಿಂದ 4ನೇ ತರಗತಿವರೆಗೆ ಓದದೆ 5ನೇ ತರಗತಿಗೆ ನೇರವಾಗಿ ದಾಖಲಾದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಒಂದು ವೇಳೆ ರಾಜಪ್ಪ ಮೇಷ್ಟ್ರು ಅಂದು ನಮ್ಮ ಮನೆಗೆ ಬರದಿದ್ದರೆ, ನಾನು ಶಾಲೆಗೆ ಸೇರುತ್ತಿರಲಿಲ್ಲ, ಶಿಕ್ಷಣ ಕಲಿಯುತ್ತಿರಲಿಲ್ಲ, ಲಾಯರ್ ಆಗುತ್ತಿರಲಿಲ್ಲ, ಶಾಸಕನಾಗುತ್ತಿರಲಿಲ್ಲ, ಸಚಿವನಾಗುತ್ತಿರಲಿಲ್ಲ ಹಾಗೂ ಎರಡು ಬಾರಿ ಮುಖ್ಯಮಂತ್ರಿ ಆಗುತ್ತಿರಲಿಲ್ಲ ಎಂದರು.

ಹಿಂದೆ ಬಹುಸಂಖ್ಯಾತ ಜನರು ಅಕ್ಷರ ವಂಚಿತರಾಗಿದ್ದರು. ಸಂಸ್ಕೃತ ಮೇಲ್ವರ್ಗದ ಸ್ವತ್ತಾಗಿತ್ತು. ಬೇರೆಯವರು ಸಂಸ್ಕೃತ ಕಲಿಯಲು ಮುಂದಾದರೆ ಕಾದ ಸೀಸವನ್ನು ಅವರ ಕಿವಿಯೊಳಗೆ ಬಿಡುತ್ತಿದ್ದರು ಎಂದರು. ಆದರೆ ತರುವಾಯ ಅಕ್ಷರ ಕಲಿಕೆ ಪ್ರತಿಯೊಬ್ಬರಿಗೂ ಸ್ವತಂತ್ರವಾಗಿ ಲಭಿಸಿತು. ಇದಕ್ಕೆ ಪ್ರಮುಖ ಕಾರಣವೆಂದರೆ ಅಂಬೇಡ್ಕರ್ ಕೊಟ್ಟ ಸಂವಿಧಾನ. ಈ ಹಿನ್ನೆಲೆಯಲ್ಲಿ ನಾವು ಸಂವಿಧಾನವನ್ನು ಸಂರಕ್ಷಿಸಬೇಕು. ಸಂವಿಧಾನ ಉಳಿದರೆ ನಾವು ಉಳಿಯುತ್ತೇವೆ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಬಲವಾದ ಕಾನೂನು ಇದ್ದರೂ ಜಾತಿ, ಧರ್ಮದ ಹೆಸರಿನಲ್ಲಿ ಸಮಾಜವನ್ನು ಈಗಲೂ ವಿಂಗಡಿಸುತ್ತಿದ್ದು, ಸಮುದಾಯದ ಸಾಮರಸ್ಯ ಹಾಳು ಮಾಡಲಾಗುತ್ತಿದೆ. ಆಧುನಿಕತೆಯಲ್ಲಿ ಬಹಳಷ್ಟು ಬದಲಾವಣೆಯಾಗಿ, ಕಾನೂನು ಬಿಗಿಯಾಗಿದ್ದರೂ ಮಹಿಳಾ ದೌರ್ಜನ್ಯ, ಲಿಂಗ ತಾರತಮ್ಯ, ಅಸ್ಪೃಶ್ಯತೆ ಆಚರಣೆಗಳು ಜೀವಂತವಾಗಿದ್ದು, ಮನುಕುಲವನ್ನು ಅಧೋಗತಿಗೆ ಕೊಂಡೊಯ್ಯಲಾಗುತ್ತಿದೆ. ಸಮ ಸಮಾಜ ನಿರ್ಮಾಣ ಮಾಡಲು ಬಸವಣ್ಣನವರ ತತ್ವಾದರ್ಶಗಳನ್ನು ಜನತೆಗೆ ಪರಿಣಾಮಕಾರಿಯಾಗಿ ತಿಳಿಸಬೇಕು. ಈ ಮೂಲಕ ಸುಖಿ ರಾಜ್ಯ ಸ್ಥಾಪನೆಗೆ ಮುಂದಾಗಬೇಕು. ಬುದ್ಧ, ಬಸವ, ಅಂಬೇಡ್ಕರ್, ಬಹು ದೊಡ್ಡ ಪ್ರಜಾಪ್ರಭುತ್ವವಾದಿಗಳಾಗಿದ್ದು, ವಿಶ್ವ ಮಾನ್ಯತೆ ಗಳಿಸಿದ್ದಾರೆ. ಇವರ ಸಮಾಜಮುಖಿ ಸಂದೇಶಗಳು, ಸ್ವಾವಲಂಬಿಯ ಪ್ರೇರಣೆಗಳು ಸಮಾಜದಲ್ಲಿ ಹಲವು ಬದಲಾವಣೆ ತಂದಿದೆ. ಇದು ಮತ್ತಷ್ಟು ಪರಿಣಾಮಕಾರಿಯಾಗಿ ಆಗಬೇಕಿದೆ.

–ಡಾ.ಹೆಚ್.ಸಿ.ಮಹದೇವಪ್ಪ, ಸಚಿವ

ನಿಗದಿತ ಅವಧಿಗಿಂತ ಮೊದಲೇ ಮಾನ್ಸೂನ್ ದೇಶ ಪ್ರವೇಶ

ನವದೆಹಲಿ: ನಿರೀಕ್ಷೆಯಂತೆಯೇ ಭಾರತಕ್ಕೆ ನಿಗದಿತ ಅವಧಿಗಿಂತ ಮುಂಚಿತವಾಗಿಯೇ ನೈಋತ್ಯ ಮಾನ್ಸೂನ್ ಮಾರುತಗಳು ಪ್ರವೇಶಿಸಿದ್ದು, ಶನಿವಾರ ಕೇರಳ ರಾಜ್ಯಕ್ಕೆ ಅಪ್ಪಳಿಸಿದೆ. 2009ರ ಬಳಿಕ ಇದೇ ಮೊದಲ ಬಾರಿಗೆ ಮಾನ್ಸೂನ್ ಮಾರುತಗಳು ನಿಗದಿತ ಅವಧಿಗಿಂತ ಮುಂಚಿತವಾಗಿ ಭಾರತ ಪ್ರವೇಶಿಸಿವೆ. ಈ ಹಿಂದೆ 2009ರ ಮೇ 23ರಂದು ದಕ್ಷಿಣ ರಾಜ್ಯ ಕೇರಳಕ್ಕೆ ಮಾನ್ಸೂನ್ ಮಾರುತಗಳು ಪ್ರವೇಶ ಮಾಡಿದ್ದವು. ಬಳಿಕ ಇದೇ ಮೊದಲ ಬಾರಿಗೆ ಬೇಗ ಮಾನ್ಸೂನ್ ಪ್ರವೇಶ ಮಾಡಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಸಾಮಾನ್ಯವಾಗಿ, ನೈಋತ್ಯ ಮಾನ್ಸೂನ್ ಜೂನ್ 1ರ ವೇಳೆಗೆ ಕೇರಳದ ಮೇಲೆ ಪ್ರಾರಂಭವಾಗುತ್ತದೆ ಮತ್ತು ಜುಲೈ 8ರ ವೇಳೆಗೆ ಇಡೀ ದೇಶವನ್ನು ಆವರಿಸುತ್ತದೆ. ಇದು ಸೆಪ್ಟೆಂಬರ್ 17ರ ಸುಮಾರಿಗೆ ವಾಯುವ್ಯ ಭಾರತದಿಂದ ಹಿಮ್ಮೆಟ್ಟಲು ಪ್ರಾರಂಭಿಸುತ್ತದೆ ಮತ್ತು ಅ.15ರ ವೇಳೆಗೆ ಸಂಪೂರ್ಣ ಹಿಮ್ಮೆಟ್ಟುತ್ತದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಹವಾಮಾನ ಶಾಸ್ತ್ರಜ್ಞರ ಪ್ರಕಾರ ಆರಂಭದ ದಿನಾಂಕ ಮತ್ತು ಋತುವಿನಲ್ಲಿ ದೇಶದಾದ್ಯಂತ ಒಟ್ಟು ಮಳೆಯ ನಡುವೆ ಯಾವುದೇ ನೇರ ಸಂಬಂಧವಿಲ್ಲ. ಕೇರಳದಲ್ಲಿ ಮಾನ್ಸೂನ್ ಮುಂಚಿತವಾಗಿ ಅಥವಾ ತಡವಾಗಿ ಆಗಮಿಸುತ್ತಿದೆ ಎಂದರೆ ಅದು ದೇಶದ ಇತರ ಭಾಗಗಳನ್ನು ಆವರಿಸುತ್ತದೆ ಎಂದರ್ಥವಲ್ಲ. ಇದು ದೊಡ್ಡ ಪ್ರಮಾಣದ ವ್ಯತ್ಯಾಸಗಳು ಮತ್ತು ಜಾಗತಿಕ, ಪ್ರಾದೇಶಿಕ ಮತ್ತು ಸ್ಥಳೀಯ ವೈಶಿಷ್ಟ್ಯಗಳಿಂದ ನಿರೂಪಿಸಲ್ಪಟ್ಟಿದೆ ಎಂದು ಐಎಂಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೀರ್ಘಾವಧಿ ಸರಾಸರಿಯ ಶೇ.90ಕ್ಕಿಂತ ಕಡಿಮೆ ಮಳೆಯನ್ನು 'ಕೊರತೆ' ಎಂದು ಪರಿಗಣಿಸಲಾಗುತ್ತದೆ. ಶೇ.90ರಿಂದ 95ರ ನಡುವೆ 'ಸಾಮಾನ್ಯಕ್ಕಿಂತ ಕಡಿಮೆ', ಶೇ.105ರಿಂದ 110ರ ನಡುವೆ 'ಸಾಮಾನ್ಯಕ್ಕಿಂತ ಹೆಚ್ಚು' ಮತ್ತು ಶೇ.110ಕ್ಕಿಂತ ಹೆಚ್ಚು ಮಳೆಯನ್ನು 'ಅಧಿಕ' ಮಳೆ ಎಂದು ಪರಿಗಣಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ

ಭಾನುವಾರ 25 ಮೇ 2025

ಟಿಪ್ಪರ್–ಗೂಡ್ಸ್ ಆಟೋ ಡಿಕ್ಕಿ

12 ಮಂದಿಗೆ ಗಾಯ, ಗುಜ್ಜೇಗೌಡನಪುರ ಬಳಿ ದುರ್ಘಟನೆ



ಮೈಸೂರು,ಮೇ24(ಆರ್‌ಕೆ)– ಟಿಪ್ಪರ್ ಮತ್ತು ಗೂಡ್ಸ್ ಆಟೋ ನಡುವೆ ಡಿಕ್ಕಿಯಾಗಿ 12 ಮಂದಿ ಗಾಯಗೊಂಡಿರುವ ಘಟನೆ ಹೆಚ್.ಡಿ.ಕೋಟೆ ರಸ್ತೆಯ ಗುಜ್ಜೇಗೌಡನ ಪುರ ಬಳಿ ಶನಿವಾರ ಬೆಳಗ್ಗೆ ಸಂಭವಿಸಿದೆ.

ಗಾಯಗೊಂಡಿರುವವರನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆ ಪೈಕಿ ಮೂವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮೈಸೂರಿನಿಂದ ಹೆಚ್.ಡಿ.ಕೋಟೆ ಕಡೆಗೆ ಹೋಗುತ್ತಿದ್ದ ಟಿಪ್ಪರ್, ಎದುರಿನಿಂದ ಬರುತ್ತಿದ್ದ ಗೂಡ್ಸ್ ಆಟೋಗೆ ಗುಜ್ಜೇಗೌಡನಪುರ ಗೇಟ್ ಬಳಿ ತಿರುವಿನಲ್ಲಿ ಇಂದು ಬೆಳಗ್ಗೆ 9.30 ಗಂಟೆಗೆ ಡಿಕ್ಕಿ ಹೊಡೆದಿದೆ.

ಟಿಪ್ಪರ್ ಡಿಕ್ಕಿ ಹೊಡೆದ ರಭಸಕ್ಕೆ ಗೂಡ್ಸ್ ಆಟೋ ಸಂಪೂರ್ಣ ಜಖಂಗೊಂಡು ಅದರಲ್ಲಿದ್ದ 12 ಮಂದಿ ಗಾಯಗೊಂಡರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಜಯಪುರ ಠಾಣೆ ಪೊಲೀಸರು, ಮಹಜರು ನಡೆಸಿ ಸ್ಥಳೀಯ ಗ್ರಾಮಸ್ಥರ ನೆರವಿನೊಂದಿಗೆ ಆಂಬುಲೆನ್ಸ್‌ನಲ್ಲಿ ಗಾಯಾಳುಗಳನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಿದರು.

ಪ್ರಕರಣ ದಾಖಲಿಸಿಕೊಂಡಿರುವ ಜಯಪುರ ಠಾಣೆ ಪೊಲೀಸರು, ಆಸ್ಪತ್ರೆಯಲ್ಲಿ ಗಾಯಾಳುಗಳ ಹೇಳಿಕೆ ಪಡೆದು ತನಿಖೆ ನಡೆಸುತ್ತಿದ್ದಾರೆ. ಸ್ಥಳಕ್ಕೆ ಡಿವೈಎಸ್‌ಪಿ ಕರೀಂ ರಾವತರ್ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರಲ್ಲಿ ವ್ಹೀಲ್‌ಚೇರ್ ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆ

ಕ್ರೀಡೆ ವಿಶೇಷಚೇತನರ ದೈಹಿಕ ಸಾಮರ್ಥ್ಯ ಹೆಚ್ಚಿಸುತ್ತೆ: ಜಿಟಿಡಿ



ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಶನಿವಾರ ಆಯೋಜಿಸಿದ್ದ ಕರ್ನಾಟಕ ವ್ಹೀಲ್‌ಚೇರ್ ಕ್ರಿಕೆಟ್ ಚಾಂಪಿಯನ್ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಪಾಲ್ಗೊಂಡಿದರು.

ಮೈಸೂರು, ಮೇ 24(ಜಿಎ)– ಕ್ರೀಡೆಯಲ್ಲಿ ಸೋಲು–ಗೆಲುವು ಸಹಜವಾದರೂ ಸ್ಪರ್ಧೆ ಮಾಡುವುದು ಮುಖ್ಯ. ಸಾಮಾನ್ಯರಂತೆ ವಿಶೇಷಚೇತನರು ಕ್ರೀಡೆಯಲ್ಲಿ ಸಾಧನೆ ಮಾಡಿ ಬಹುಮಾನ ಗೆಲ್ಲುತ್ತಿರುವುದರಿಂದ ಆತ್ಮಸ್ಥೈರ್ಯ ಹೆಚ್ಚಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಆಯೋಜಿಸಿದ್ದ ಕರ್ನಾಟಕ ವೀಲ್‌ಚೇರ್ ಕ್ರಿಕೆಟ್ ಚಾಂಪಿಯನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೊದಲು ವಿಶೇಷಚೇತನರು ಓದು ಸೇರಿದಂತೆ ಇನ್ನಿತರ ಆಟೋಟಗಳಲ್ಲಿ ಹಿಂಜರಿಯುತ್ತಿದ್ದರು. ಆದರೆ, ಬದಲಾದ ಕಾಲದಲ್ಲಿ ತಮ್ಮ ದೈಹಿಕ ಸಾಮರ್ಥ್ಯವನ್ನು ತೋರಿ ಭಾಗಿಯಾಗುತ್ತಿದ್ದಾರೆ ಎಂದರು.

ಯುವಕರು ಮತ್ತು ವಿದ್ಯಾರ್ಥಿಗಳು ಕ್ರಿಕೆಟ್, ಕಬ್ಬಡಿ ಮತ್ತಿತರ ಕ್ರೀಡೆಗಳಲ್ಲಿ ಭಾಗವಹಿಸುತ್ತಾರೆ ಆದರೆ, ಕ್ರಿಕೆಟ್ ಪ್ರಮುಖ ಮತ್ತು ದೈಹಿಕವಾಗಿ ಆಡುವ ಕ್ರೀಡೆ. ಇದರಲ್ಲಿ ಹೆಚ್ಚು ಗಾಯಗಳಾಗುವ ಸಂಭವವೇ ಹೆಚ್ಚು ಸಾಹಸ ಕ್ರೀಡೆಯಲ್ಲಿ ನಾವು ಯಾರಿಗೂ ಕಡಿಮೆಯಿಲ್ಲ ಎಂದು ಆಟವಾಡಿ ತೋರಿಸುತ್ತಿದ್ದೀರಿ. ವೀಕಲಚೇತನರಲ್ಲಿ ಹೆಚ್ಚು ನಮ್ಮ ಕೈಯ್ಯಲ್ಲಿ ಯಾವುದೇ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂದು ಸುಮ್ಮನಿರುವ ಸಂಖ್ಯೆ ಹೆಚ್ಚಿತ್ತು. ಈಗ ಇದರಲ್ಲಿ ನಾವು ಯಾರಿಗೂ ಕಡಿಮೆಯಿಲ್ಲ ಎಂದು ಕ್ರೀಡೆಯಲ್ಲಿ ಭಾಗವಹಿಸುತ್ತಿರುವುದು ಮಾದರಿಯಾಗಿದೆ. ಕ್ರೀಡೆ ಮೂಲಕ ಯಾವುದೇ ಕ್ಷೇತ್ರದಲ್ಲೂ ಸಾಧನೆಯನ್ನು ಮಾಡುತ್ತೇವೆ ಎಂಬ ಭರವಸೆಯನ್ನು ನೀಡಿದ್ದೀರಿ ಎಂದರು.

ಮುಂದಿನ ಕ್ರೀಡೆಯ ಎಲ್ಲಾ ಜವಾಬ್ದಾರಿಯನ್ನು ತೆಗೆದುಕೊಳುತ್ತೇನೆ. ನೆರವು ಮತ್ತು ಪ್ರೊತ್ಸಾಹವನ್ನು ನೀಡುತ್ತೇನೆ. ಕ್ರೀಡೆಯಲ್ಲಿ ಸಾಧನೆ ಮಾಡುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲೂ ಭಾಗವಹಿಸಿ ಕರ್ನಾಟಕಕ್ಕೆ ಉತ್ತಮ ಹೆಸರನ್ನು ತಂದು ಕೊಟ್ಟಿದ್ದೀರಿ ಎಂದು ತಿಳಿಸಿದರು.

ಕ್ರಿಕೆಟ್ ಸ್ಪರ್ಧೆಯನ್ನು ಏರ್ಪಡಿಸುವ ಜತೆಗೆ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಬಹುಮಾನವನ್ನು ಗಳಿಸಬೇಕು. ಮೈಸೂರಿನಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಭಾಗವಹಿಸಿ ಕ್ರೀಡೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣ ಮಾಡಿರುವುದು ಸಂತೋಷವಾಗಿದೆ ಎಂದರು.

ವಿಶೇಷಚೇತನರು ಶಾಪವಲ್ಲ.ದೇವರು ಕೊಟ್ಟ ಮಕ್ಕಳೆಂದು ಭಾವಿಸಬೇಕು. ಅವರಿಗೆ ವೇದಿಕೆ ಕೊಟ್ಟು ಅವಕಾಶ ನೀಡಿದರೆ ಇತರರಂತೆ ತಮ್ಮ ಪ್ರತಿಭೆ, ಸಾಮರ್ಥ್ಯವನ್ನು ಪ್ರದರ್ಶಿಸಬಲ್ಲರು ಎಂದು ತಿಳಿಸಿದರು. ಕ್ರೀಡೆಯಲ್ಲಿ ಸೋಲು ಗೆಲುವು ಸಹಜವಾದರೂ ಸಮಾನವಾಗಿ ಸ್ವೀಕರಿಸಬೇಕು. ಸೋತರೂ ಮತ್ತೆ ಗೆಲ್ಲುತ್ತೇವೆ ಎಂಬ ಭರವಸೆ ಇಟ್ಟುಕೊಂಡು ಆಟವಾಡಬೇಕು ಎಂದು ಸಲಹೆ ನೀಡಿದರು.

ನಾಗರಹೊಳೆ ಅರಣ್ಯದಲ್ಲಿ ಹುಲಿ ಕಳೇಬರ ಪತ್ತೆ



ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮುದ್ದನಹಳ್ಳಿ ಮೀಸಲು ಅರಣ್ಯ ಪ್ರದೇಶದ ಹಾರಂಗಿ ನಾಲೆಯ ಸೇತುವೆ ಕೆಳಗೆ ಗಂಡು ಹುಲಿ ಮೃತದೇಹ ಪತ್ತೆಯಾಗಿದೆ.

ಮೈಸೂರು, ಮೇ 24(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹುಣಸೂರು ವನ್ಯಜೀವಿ ವಲಯ ವ್ಯಾಪ್ತಿಯ ಮುದ್ದನಹಳ್ಳಿ ಮೀಸಲು ಅರಣ್ಯ ಪ್ರದೇಶದ ಹಾರಂಗಿ ನಾಲೆಯ ಸೇತುವೆ ಕೆಳಗೆ ಗಂಡು ಹುಲಿಯೊಂದರ ಕಳೇಬರ ಪತ್ತೆಯಾಗಿದೆ.

ಆನೆಚೌಕೂರು ಶಾಖೆಯ, ಶೆಟ್ಟಿಹಳ್ಳಿ–ಲಕ್ಕಪಟ್ಟಣ ಅರಣ್ಯದಲ್ಲಿ ಗಸ್ತು ತಿರುಗುತ್ತಿದ್ದ ಅರಣ್ಯ ಸಿಬ್ಬಂದಿಗೆ ಹುಲಿ ಕಳೇಬರ ಕಂಡು ಬಂದಿದೆ. 3–5 ವರ್ಷದ ಗಂಡು ಹುಲಿ ಮೃತಪಟ್ಟಿರುವುದಾಗಿ ದೃಢಪಟ್ಟಿದೆ. ಒಂದು ಅಥವಾ ಎರಡು ದಿನದ ಹಿಂದಷ್ಟೇ ಹುಲಿ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದ್ದು, ಸಾವಿಗೆ ನಿಖರ ಕಾರಣ ಪತ್ತೆಯಾಗಿಲ್ಲ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಪಿ.ಎ.ಸೀಮಾ ಮಾರ್ಗದರ್ಶನದಲ್ಲಿ ಪಶು ವೈದ್ಯಾಧಿಕಾರಿ ಡಾ.ರಮೇಶ್ ಹುಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದರು. ಬಳಿಕ ನಿಯಮಾನುಸಾರ ಮೃತದೇಹವನ್ನು ಸುಡಲಾಯಿತು. ಈ ಸಂದರ್ಭದಲ್ಲಿ ಎಸಿಎಫ್ ಎನ್.ಲಕ್ಷ್ಮಿಕಾಂತ್, ಎನ್‌ಟಿಸಿಎ ನಾಮನಿರ್ದೇಶಿತ ಸದಸ್ಯ ವಿನೋದ್ ಕೃಷ್ಣ, ಆರ್‌ಎಫ್‌ಓ ಕೆ.ಇ. ಸುಬ್ರಮಣ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

'ಆಪರೇಷನ್ ಸಿಂಧೂರ' ಯಶಸ್ವಿ ಹಿನ್ನೆಲೆ

ಚಾಮರಾಜ ಕ್ಷೇತ್ರದಲ್ಲಿ ತಿರಂಗ ಯಾತ್ರೆ; ಬೈಕ್ ರ್‍ಯಾಲಿ



'ಆಪರೇಷನ್ ಸಿಂಧೂರ' ಯಶಸ್ವಿ ಹಿನ್ನೆಲೆಯಲ್ಲಿ ಭಾರತೀಯ ಸೈನಿಕರ ಅಭಿನಂದಿಸಿ ಬಿಜೆಪಿ–ಜೆಡಿಎಸ್‌ನಿಂದ ಮೈಸೂರಿನ ವಿವಿ ಮೊಹಲ್ಲಾದಲ್ಲಿ ಬೈಕ್ ರ್‍ಯಾಲಿ ನಡೆಸಲಾಯಿತು.

ಮೈಸೂರು, ಮೇ 24(ಆರ್‌ಕೆ)– ಪಾಕಿಸ್ತಾನ ಭಯೋತ್ಪಾದಕರ ವಿರುದ್ಧ 'ಆಪರೇಷನ್ ಸಿಂಧೂರ' ಯಶಸ್ವಿಗೊಳಿಸಿದ ಭಾರತೀಯ ಸೈನಿಕರಿಗೆ ಬೆಂಬಲ ಹಾಗೂ ಅಭಿನಂದಿಸಿ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಮೈಸೂರಿನ ವಿವಿ ಮೊಹಲ್ಲಾದಲ್ಲಿ ತಿರಂಗ ಯಾತ್ರೆ ಬೈಕ್ ರ್‍ಯಾಲಿ ನಡೆಸಿದರು.

ಮಾಜಿ ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಮುಖಂಡ ಡಾ.ಶುಶ್ರುತ್‌ಗೌಡರ ನೇತೃತ್ವದಲ್ಲಿ ನಡೆದ ಬೈಕ್ ರ್‍ಯಾಲಿಯಲ್ಲಿ ರಾಷ್ಟ್ರಧ್ವಜ ಹಿಡಿದು ನೂರಾರು ಮಂದಿ ಪಾಲ್ಗೊಂಡಿದ್ದರು.

ವಿವಿ ಪುರಂ ಪೊಲೀಸ್ ಠಾಣೆಯಿಂದ ಆರಂಭವಾದ ಬೈಕ್ ರ್‍ಯಾಲಿಯು ಟೆಂಪಲ್ ರಸ್ತೆ ಮಾತೃ ಮಂಡಳಿ ಸರ್ಕಲ್, ಕಾಳಿದಾಸ ರಸ್ತೆ, ಪಂಚವಟಿ ಸರ್ಕಲ್, ಗೋಕುಲಂ ಮೇನ್ ರೋಡ್ ಮೂಲಕ ಪೊಲೀಸ್ ಠಾಣೆ ಬಳಿ ಅಂತ್ಯಗೊಂಡಿತು.

ಬಿಜೆಪಿ–ಜೆಡಿಎಸ್ ಮುಖಂಡರಾದ ಎಸ್‌ಬಿಎಂ ಮಂಜು, ಪ್ರಶಾಂತ್‌ಗೌಡ, ಶ್ರೀರಾಂ, ಪ್ರೇಮಾ ಶಂಕರೇಗೌಡ, ಕೆ.ಟಿ. ಚೆಲುವೇಗೌಡ, ದಿನೇಶ್‌ಗೌಡ, ಪುನೀತ್, ಯೋಗೀಶ್, ಕೃಷ್ಣಪ್ಪ, ಮನು, ಶಿವರಾಮು, ನಿಖಿಲ್, ಹನುಮಂತು ಸೇರಿದಂತೆ ಎರಡು ಪಕ್ಷದ ಮುಖಂಡರು, ಮಾಜಿ ಸೈನಿಕರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಬುದ್ಧ, ಬಸವ, ಅಂಬೇಡ್ಕರ್ ಜಯಂತಿ

ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜದ 6ನೇ ವಾರ್ಷಿಕೋತ್ಸವ



ಮೈಸೂರಿನ ಜೆ.ಪಿ.ನಗರದ ಡಾ.ಪುಟ್ಟರಾಜ ಗವಾಯಿ ಅವರ ಕ್ರೀಡಾಂಗಣದಲ್ಲಿ ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜ ಬುದ್ಧ, ಬಸವ, ಅಂಬೇಡ್ಕರ್ ಅವರ ಜಯಂತ್ಯುತ್ಸವದ 6ನೇ ವಾರ್ಷಿಕೋತ್ಸವ ಆಯೋಜಿಸಲಾಗಿತ್ತು.


ಮೈಸೂರು, ಮೇ 24– ಮೈಸೂರಿನ 'ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜ' ಸಂಘಟನೆ ವತಿಯಿಂದ 'ಬುದ್ಧ, ಬಸವ ಅಂಬೇಡ್ಕರ್‌ರವರ ಜಯಂತಿ' ಹಾಗೂ ಸಂಘದ ಆರನೇ ವಾರ್ಷಿಕೋತ್ಸವವನ್ನು ಆಯೋಜಿಸಲಾಗಿತ್ತು.

ಜೆ.ಪಿ.ನಗರದ ಪುಟ್ಟರಾಜ ಗವಾಯಿಗಳ ಕ್ರೀಡಾಂಗಣದ ಯೋಗ ಮಂದಿರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಉದ್ಘಾಟಿಸಿ, ಮೂವರು ಮಹನೀಯರ ಜಯಂತ್ಯುತ್ಸವದೊಂದಿಗೆ ಸಂಘಟನೆಯ ವಾರ್ಷಿಕೋತ್ಸವ ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ಪ್ರಶಂಸಿಸಿದರು.

ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜದ ಗೌರವಾಧ್ಯಕ್ಷೆ ಸೀತಾಲಕ್ಷ್ಮೀ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾಪಕ ಅಧ್ಯಕ್ಷೆ ಲೀಲಾವತಿ ಯಾಲಕ್ಕಯ್ಯ, ಸಮಾಜ ಸೇವಕ ಅಹಿಂದ ಜವರಪ್ಪ, ನಗರ ಪಾಲಿಕೆ ಮಾಜಿ ಸದಸ್ಯೆ ಶಾರದಮ್ಮ, ನಿವೃತ್ತ ಪೊಲೀಸ್ ಅಧಿಕಾರಿ ಕೆ.ಪುರುಷೋತ್ತಮ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಹಿಂದೂಸ್ಥಾನ್ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಪರಮೇಶ ಕೆ. ಉತ್ತನಹಳ್ಳಿ, ಶಾಂತಕುಮಾರಿ, ಕೋಮಲ, ವಿಮಲ, ಪೂಜಾ ಕಿರಣ್, ಹೇಮ ಸುನೀಲ್, ಸುಶೀಲಮ್ಮ ಮತ್ತಿತರರು ಭಾಗವಹಿಸಿದ್ದರು. ಮೈಸೂರಿನ ರಮಾಬಾಯಿ ಅಂಬೇಡ್ಕರ್ ಮಹಿಳಾ ಸಮಾಜದ ವತಿಯಿಂದ ಬುದ್ಧ, ಬಸವ, ಅಂಬೇಡ್ಕರ್‌ರವರ ಜಯಂತಿ ಆಚರಿಸಲಾಯಿತು.

ಭಾರತದಲ್ಲಿ ತಯಾರಿಸಿದರೆ ಅಮೆರಿಕಾದಲ್ಲಿ ಮಾರಾಟಕ್ಕೆ ಸುಂಕ ಕಟ್ಟಬೇಕು!

ಆಪಲ್ ಕಂಪೆನಿಗೆ ಡೊನಾಲ್ಡ್ ಟ್ರಂಪ್ ಎಚ್ಚರಿಕೆ



ವಾಷಿಂಗ್ಟನ್, ಮೇ 24–ಆಪಲ್ ಕಂಪೆನಿ ತನ್ನ ಘಟಕವನ್ನು ಭಾರತದಲ್ಲಿ ತೆರೆಯಬಹುದು ಎಂದು ಹೇಳಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕವಿಲ್ಲದೆ ಅಮೆರಿಕದಲ್ಲಿ ತನ್ನ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಿಲ್ಲ ಎಂಬ ಷರತ್ತು ವಿಧಿಸಿದ್ದಾರೆ.

ಅಮೆರಿಕದ ಪರಮಾಣು ಶಕ್ತಿಯನ್ನು ಹೆಚ್ಚಿಸಲು ಶ್ವೇತ ಭವನದಲ್ಲಿ ಡೊನಾಲ್ಡ್ ಟ್ರಂಪ್ ಅವರು ಬಹು ಕಾರ್ಯನಿರ್ವಾಹಕ ಆದೇಶಗಳಿಗೆ ಸಹಿ ಹಾಕಿದ ಸಂದರ್ಭದಲ್ಲಿ ಅವರ ಹೇಳಿಕೆಗಳು ಬಂದಿವೆ.

ಆದರೆ ಟಿಮ್ ಕುಕ್ ಅವರು ಭಾರತಕ್ಕೆ ಹೋಗುವುದಿಲ್ಲ ಎಂದು ನಾನು ಅಂದುಕೊಳ್ಳುತ್ತೇನೆ. ಅವರು ಭಾರತದಲ್ಲಿ ಘಟಕ ಸ್ಥಾಪಿಸುವುದಾಗಿ ಹೇಳಿದರು. ನೀವು ಭಾರತಕ್ಕೆ ಹೋಗುವುದಾದರೆ ಸರಿ, ಆದರೆ ನೀವು ಸುಂಕವಿಲ್ಲದೆ ಇಲ್ಲಿ ಮಾರಾಟ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದೇನೆ ಎಂದರು.

ನಾವು ಐಫೋನ್ ಬಗ್ಗೆ ಮಾತನಾಡುತ್ತಿದ್ದೇವೆ. ಅವರು ಅದನ್ನು ಅಮೆರಿಕದಲ್ಲಿ ಮಾರಾಟ ಮಾಡಲು ಬಯಸಿದರೆ ಇಲ್ಲಿಯೇ ನಿರ್ಮಾಣ ಮಾಡಲಿ ಎಂದು ಹೇಳಿದರು.

ನಿನ್ನೆ ಸೋಷಿಯಲ್ ಮೀಡಿಯಾ ಪೋಸ್ಟ್‌ನಲ್ಲಿ ಟ್ರಂಪ್, ಅಮೆರಿಕದಲ್ಲಿ ಮಾರಾಟವಾಗುವ ಆಪಲ್ ಐಫೋನ್ ಭಾರತ ಅಥವಾ ಬೇರೆಲ್ಲಿಯೂ ಅಲ್ಲ, ಅಮೆರಿಕದಲ್ಲಿ ತಯಾರಿಸಬೇಕೆಂದು ನಿರೀಕ್ಷಿಸುವುದಾಗಿ ಹೇಳಿದ್ದರು. ಅದು ಪಾಲಿಸದಿದ್ದರೆ ತಂತ್ರಜ್ಞಾನ ಕಂಪನಿಯ ಉತ್ಪನ್ನಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸುವುದಾಗಿ ಬೆದರಿಕೆ ಹಾಕಿದ್ದರು.

ಗೃಹ ರಕ್ಷಕರ ಬೇಡಿಕೆ ಈಡೇರಿಸಲು ಸಿಎಂಗೆ ಮನವಿ

ಮೈಸೂರು, ಮೇ 24(ಆರ್‌ಕೆ)– ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಗೃಹ ರಕ್ಷಕರ (ಹೋಂ ಗಾರ್ಡ್ಸ್) ನಾನಾ ಬೇಡಿಕೆಗಳನ್ನು ಈಡೇರಿಸುವಂತೆ (ಲೇಬರ್ ರೈಟ್ಸ್ ಫೋರಂ) ಗೃಹ ರಕ್ಷಕ ಪೋಷಕರ ಹಕ್ಕು ಸಂರಕ್ಷಣಾ ಸಮಿತಿ ಜಿಲ್ಲಾಧ್ಯಕ್ಷ ಕಾಳೇಗೌಡ, ಕಲಾಮಂದಿರದಲ್ಲಿ ನಡೆದ ಬಸವ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಒತ್ತಾಯಿಸಿದರು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ದುಡಿಯುತ್ತಿರುವ ಗೃಹ ರಕ್ಷರಿಗೆ ಸಮಾನ ವೇತನ ಜಾರಿಗೊಳಿಸಬೇಕು. ಅವರ ಭದ್ರತೆಗೆ, ಆರೋಗ್ಯ ಸೌಲಭ್ಯ, ಪಿಂಚಣಿ ಜೊತೆಗೆ ಪ್ರಾಣಹಾನಿಯಾದರೆ ಕುಟುಂಬದ ವಾರಸುದಾರರಿಗೆ ಪಿಂಚಣಿ ಬರುವ ಹಾಗೆ ಕ್ರಮ ಕೈಗೊಳ್ಳಬೇಕು. ಗೃಹ ರಕ್ಷಕರಿಗೆ ಉಚಿತ ಸಾರಿಗೆ ಸೌಲಭ್ಯ ಒದಗಿಸಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಮಂಡಿಸಿದ್ದಾರೆ.

ಜೆಎಸ್‌ಎಸ್ ಕಾನೂನು ಕಾಲೇಜಲ್ಲಿ ವಾರಾಂತ್ಯ ಅಭಿನಯ ತರಬೇತಿ

ಮೈಸೂರು, ಮೇ24(ಜಿಎ)–ರಂಗಾಂತರಂಗ ಮೈಸೂರು ವತಿಯಿಂದ ಕುವೆಂಪುನಗರ ಬಡಾವಣೆಯಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನ ಆವರಣದಲ್ಲಿ ವಾರಾಂತ್ಯದ ಅಭಿನಯ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಈ ವಿಷಯ ತಿಳಿಸಿ, ಜೂನ್‌ನಿಂದ ಫೆಬ್ರವರಿವರೆಗೆ ಪ್ರತಿ ಶುಕ್ರವಾರ ಸಂಜೆ 5.40ರಿಂದ 7ರವರೆಗೆ, ಶನಿವಾರ ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ಮತ್ತು ಭಾನುವಾರ ಬೆಳಗ್ಗೆ 9.30ರಿಂದ ಮಧ್ಯಾಹ್ನ 1ರವರೆಗೆ ರಂಗ ತರಬೇತಿ ನಡೆಯಲಿದೆ. ರಂಗಭೂಮಿಯಲ್ಲಿ ಅನುಭವ ಇರುವ ರಂಗ ನಿರ್ದೇಶಕರಿಂದ ಅಭಿನಯ ತರಬೇತಿ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ರಂಗಾಂತರಂಗ ಮೈಸೂರು ಸಂಸ್ಥೆಯ ಸಂಸ್ಥಾಪಕ ಕೀರ್ತಿರಾಜ್, ರಂಗ ನಿರ್ದೇಶಕರಾದ ಲೋಕನಾಥ್ ಸೋಗಂ, ಅರುಣ್ ರಂಗಾಯಣ, ಶ್ರೀಕಾಂತ್ ಉಪಸ್ಥಿತರಿದ್ದರು.

ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ

ಕಾಂಗರೂ ಕೇರ್ ಆಸ್ಪತ್ರೆಯಿಂದ ಪೊಲೀಸರಿಗೆ ಜಾಕೆಟ್ ಕೊಡುಗೆ



ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ಕಾಂಗರೂ ಕೇರ್ ಆಸ್ಪತ್ರೆ ವತಿಯಿಂದ ಮೈಸೂರು ಪೊಲೀಸ್ ಸಿಬ್ಬಂದಿಗೆ ಸುರಕ್ಷತಾ ಜಾಕೆಟ್‌ಗಳನ್ನು ಸಂಸದ ಯದುವೀರ್ ಒಡೆಯರ್ ವಿತರಿಸಿದರು.

ಮೈಸೂರು, ಮೇ 24 –ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಯಲ್ಲಿ ಮುಂಚೂಣಿಯಲ್ಲಿರುವ ಕಾಂಗರೂ ಕೇರ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯು ಮೈಸೂರಿನ ಪೊಲೀಸ್ ಸಿಬ್ಬಂದಿಗೆ ಸುರಕ್ಷತಾ ಜಾಕೆಟ್‌ಗಳನ್ನು ಕೊಡುಗೆಯಾಗಿ ನೀಡುವ ಮೂಲಕ ವಿಶ್ವ ತಾಯಂದಿರ ದಿನದಂದು ಗೌರವ ಸಲ್ಲಿಸಿತು.

ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪೊಲೀಸ್ ಸಿಬ್ಬಂದಿಗೆ ಜಾಕೇಟ್‌ಗಳನ್ನು ನೀಡಿ, ಅವರನ್ನು ಗೌರವಿಸಿದರು. ಬಳಿಕ ಮಾತನಾಡಿದ ಅವರು, ನಮ್ಮ ರಸ್ತೆ ಸುರಕ್ಷತಾ ವೀರರಿಗೆ ಜಾಕೆಟ್ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಿರುವುದು ಒಳ್ಳೆಯ ವಿಚಾರ. ಕಾಂಗರೂ ಆಸ್ಪತ್ರೆಯ ಎರಡನೆಯ ಕಾರ್ಯಕ್ರಮಕ್ಕೆ ನಾನು ಆಗಮಿಸಿದ್ದು, ಇದು ಸಾಮಾಜಿಕ ಕಳಕಳಿಯ ಕೆಲಸಗಳನ್ನು ಮಾಡುತ್ತಿದೆ. ಸಂಚಾರಿ ಪೊಲೀಸರು ಕಾಯಕದ ಜೊತೆಗೆ ಜನರ ಸೇವೆಯನ್ನು ಮಾಡುತ್ತಾರೆ. ಹೀಗೆ ಸೇವೆ ಮಾಡುವವರನ್ನು ಸದಾ ಪ್ರೇರೇಪಿಸಬೇಕು. ಎಲ್ಲರೂ ಈ ರೀತಿಯ ವಿಚಾರಗಳಿಗೆ ಕೈ ಜೋಡಿಸಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಆಸ್ಪತ್ರೆಯ ಸಂಸ್ಥಾಪಕ ನಿರ್ದೇಶಕ ಮತ್ತು ಸಿಇಒ ಡಾ.ಶೇಖರ್ ಸುಬ್ಬಯ್ಯ ಮಾತನಾಡಿ, ಪೊಲೀಸರು ನಮಗೆ ಸ್ಥಳೀಯವಾಗಿ ಕಣ್ಣಿಗೆ ಕಾಣುವ ಸೂಪರ್ ಹೀರೋಗಳು. ಹೀಗಾಗಿ ಅಂತಹ ನಾಯಕತ್ವ ಗುಣವನ್ನು ಹೊಂದಿರುವವರನ್ನು ಕಾಂಗರೂ ಕೇರ್ ಆಸ್ಪತ್ರೆ ವತಿಯಿಂದ ಗುರುತಿಸಿ, ಸನ್ಮಾನಿಸಲು ನಾವು ಹೆಮ್ಮೆಯಾಗುತ್ತಿದೆ ಎಂದರು.

ನಾವು ನೀಡುತ್ತಿರುವ ಈ ಜಾಕೆಟ್‌ಗಳು ಕೇವಲ ರಕ್ಷಣಾತ್ಮಕ ಸಾಧನಗಳಲ್ಲ. ಅದಕ್ಕಿಂತ ಹೆಚ್ಚಿನದಾಗಿ ನಮ್ಮ ಪೊಲೀಸ್ ಅಧಿಕಾರಿಗಳ ನಿಸ್ವಾರ್ಥ ಸೇವೆಗೆ ನಾವು ಸಲ್ಲಿಸುತ್ತಿರುವ ಆಳವಾದ ಕೃತಜ್ಞತೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದರು.

ಈ ಉಪಕ್ರಮದೊಂದಿಗೆ, ಕಾಂಗರೂ ಕೇರ್ ಆರೋಗ್ಯ ಸೇವೆ ಒದಗಿಸುವವರಾಗಿ ಮಾತ್ರವಲ್ಲದೆ ಸಹಾನುಭೂತಿಯ ಸಮುದಾಯ ಪಾಲುದಾರರಾಗಿಯೂ ತನ್ನ ಪಾತ್ರವನ್ನು ಬಲಪಡಿಸುತ್ತಿದೆ. ಆರೈಕೆ ಆಸ್ಪತ್ರೆಯ ನಾಲ್ಕು ಗೋಡೆಗಳ ಒಳಗೆ ಮಾತ್ರ ಸೀಮಿತವಾಗದೆ, ಅದನ್ನು ಮೀರಿ ವಿಸ್ತರಿಸುತ್ತದೆ ಎಂದರು. ವಿವಿಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ, ಜಯಲಕ್ಷ್ಮಿಪುರಂ ಠಾಣೆ ಇನ್ಸ್‌ಪೆಕ್ಟರ್ ಕುಮಾರ್, ಚಿತ್ರನಟ ದರ್ಶನ್ ತಾಯಿ ಮೀನಾ ತೂಗುದೀಪ್ ಇನ್ನಿತರರಿದ್ದರು.

ಪಂಡಿತ್ ಹಡಪದ ಪ್ರಶಸ್ತಿಗೆ ಆಯ್ಕೆ



ಗುತ್ತರಗಿ

ಮೈಸೂರು, ಮೇ 24– ಮೈಸೂರಿನ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ 2025ನೇ ಸಾಲಿನ ಪ್ರತಿಷ್ಠಿತ ಪಂಡಿತ್ ಕೆ. ಎಸ್. ಹಡಪದ ಪ್ರಶಸ್ತಿಗೆ ಗದುಗಿನ ಹಿರಿಯ ತಬಲಾ ಕಲಾವಿದ ಪಂಡಿತ್ ಶರಣಕುಮಾರ ಗುತ್ತರಗಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು 10 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ. ಸಂಗೀತ ಸಭಾದ ಗೌರವಾಧ್ಯಕ್ಷ ಮಾ.ವಿ. ರಾಮಪ್ರಸಾದ್, ಮಲ್ಲಿಕಾರ್ಜುನ್ ಚಿಕ್ಕಮಠ, ಶಂಕರ ಹಲಗತ್ತಿ, ಪ್ರಕಾಶ್ ಬಾಳಿಕಾಯಿ, ಡಾ. ಎ.ಎಲ್. ದೇಸಾಯಿ, ಗಿರೀಶ್ ಶಿಲ್ಪಿ, ರಾಜೇಶ್ ಒಳಗೊಂಡ ಸಮಿತಿಯು ಕಲಾವಿದರನ್ನು ಆಯ್ಕೆ ಮಾಡಿದೆ. ಜೂ.1ರಂದು ಕುವೆಂಪುನಗರದ ಗಾನಭಾರತಿ ರಮಾಗೋವಿಂದ ಕಲಾ ವೇದಿಕೆಯಲ್ಲಿ ನಡೆಯುವ ಸಂಗೀತ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಭಾ ಅಧ್ಯಕ್ಷ ಭೀಮಾಶಂಕರ್ ಬಿದನೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ಪಾಕ್ ಐಎಸ್‌ಐಗೆ ಭಾರತದ ರಹಸ್ಯ ಮಾಹಿತಿ ರವಾನೆ; ವ್ಯಕ್ತಿ ಬಂಧನ



ಗುಜರಾತ್: ಗುಜರಾತ್‌ನ ಕಚ್ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಒಬ್ಬ ಗುತ್ತಿಗೆ ಆರೋಗ್ಯ ಕಾರ್ಯಕರ್ತನನ್ನು ಬೇಹುಗಾರಿಕೆ ಆರೋಪದ ಮೇಲೆ ಗುಜರಾತ್ ಭಯೋತ್ಪಾದನೆ ನಿಗ್ರಹ ದಳ ಬಂಧಿಸಿದೆ. ಆರೋಪಿ ಸಹ ದೇವ್‌ಸಿಂಗ್ ಗೋಹಿಲ್ (28) ಎಂಬಾತ ಬಿಎಸ್‌ಎಫ್ ಮತ್ತು ಭಾರತೀಯ ನೌಕಾಪಡೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಯನ್ನು ಪಾಕಿಸ್ತಾನಿ ಗೂಢಚಾರ ಏಜೆಂಟ್‌ಗೆ ವಾಟ್ಸಾಪ್ ಮೂಲಕ ಹಂಚಿಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ. ಗೋಹಿಲ್ ಕಚ್ ಪ್ರದೇಶದಲ್ಲಿ ನಿರ್ಮಾಣದಲ್ಲಿರುವ ಮತ್ತು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಬಿಎಸ್‌ಎಫ್ ಮತ್ತು ನೌಕಾಪಡೆಯ ಚಿತ್ರಗಳನ್ನು ಹಂಚಿಕೊಂಡಿದ್ದಾನೆ ಎಂದು ಹೇಳಲಾಗಿದೆ. ಈ ಕೃತ್ಯಕ್ಕಾಗಿ ಆತನಿಗೆ ರೂ.40,000 ನಗದು ಪಾವತಿಯಾಗಿದೆ ಎಂದು ಎಟಿಎಸ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಸಿದ್ಧಾರ್ಥ ಕೊರುಕೊಂಡ ವಿವರಿಸಿದ್ದಾರೆ. ಜನವರಿ 2025ರಲ್ಲಿ ಗೋಹಿಲ್ ತನ್ನ ಆಧಾರ್ ಕಾರ್ಡ್ ಬಳಸಿ 1 ಸಿಮ್ ಕಾರ್ಡ್ ಖರೀದಿಸಿದ್ದು, ಒಟಿಪಿ ಅನ್ನು ಪಾಕಿಸ್ತಾನಿ ಏಜೆಂಟ್‌ಗೆ ಹಂಚಿಕೊಂಡಿದ್ದಾನೆ. ಇದರಿಂದ ಆ ಸಿಮ್ ಕಾರ್ಡ್‌ನ ವಾಟ್ಸಾಪ್ ಖಾತೆಯನ್ನು ಪಾಕಿಸ್ತಾನದಿಂದ ನಿರ್ವಹಿಸಲಾಗುತ್ತಿತ್ತು.

ತರಕಾರಿ ವ್ಯಾಪಾರಿ ಮೇಲೆ ಒಳಚರಂಡಿ ತ್ಯಾಜ್ಯ ಹಾಕಿ ಜೀವಂತ ಸಮಾಧಿ ಮಾಡಿದ


ಬರೇಲಿ: ಮರದಡಿ ಮಲಗಿದ್ದ ತರಕಾರಿ ವ್ಯಾಪಾರಿ ಅಲ್ಲಿಯೇ ಜೀವಂತ ಸಮಾಧಿಯಾದ ಧಾರುಣ ಘಟನೆ ಉತ್ತರಪ್ರದೇಶದ ಬರೇಲಿಯ ಬರಾದರಿ ಪ್ರದೇಶದಲ್ಲಿ ಘಟನೆ ನಡೆದಿದೆ. ಮೃತನನ್ನು ಶಾಂತಿ ಪುರದ ನಿವಾಸಿ ಸುನಿಲ್‌ಕುಮಾರ್ ಪ್ರಜಾಪತಿ (45) ಎಂದು ಗುರುತಿಸಲಾಗಿದೆ. ಈತ ಶುಕ್ರವಾರ ಕುಡಿದ ಅಮಲಿನಲ್ಲಿ ಮರದಡಿಯಲ್ಲಿ ಮಲಗಿದ್ದ. ಇದೇ ವೇಳೆ ಆ ಸ್ಥಳದಲ್ಲಿ ಬರೇಲಿ ಕಾರ್ಪೋರೇಷನ್ ಸಿಬ್ಬಂದಿ ಒಳಚರಂಡಿ ಸ್ವಚ್ಛಗೊಳಿಸುತ್ತಿದ್ದು, ಟ್ರಾಕ್ಟರ್ ಮೂಲಕ ಒಳಚರಂಡಿ ತ್ಯಾಜ್ಯ ತೆಗೆದು ಸುನಿಲ್‌ಕುಮಾರ್ ಪ್ರಜಾಪತಿ ಮೇಲೆ ಸುರಿದಿದೆ. ಈ ವೇಳೆ ಕುಡಿದ ಅಮಲಿನಲ್ಲಿ ಗಾಢ ನಿದ್ರೆಯಲ್ಲಿದ್ದ ಪ್ರಜಾಪತಿ ನಿದ್ರೆಯಿಂದ ಏಳಲಾಗದೇ ಅಲ್ಲಿಯೇ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಪ್ರಜಾಪತಿ ಮಗ ತನ್ನ ತಂದೆ ಅವಶೇಷಗಳ ಅಡಿಯಲ್ಲಿ ಹೂತು ಹೋಗಿರುವುದನ್ನು ತಿಳಿದು ಮಾಹಿತಿ ನೀಡಿದ್ದಾನೆ. ಕೂಡಲೇ ಸ್ಥಳೀಯರ ಸಹಾಯದಿಂದ ಅವರನ್ನು ಹೊರತೆಗೆದು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ವೈದ್ಯರು ಅವರನ್ನು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು ಆರೋಪಿ ಪೌರಕಾರ್ಮಿಕರ ವಿರುದ್ಧ ಬರಾದರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಎಸ್‌ಎಸ್‌ಪಿ ಅನುರಾಗ್ ಆರ್ಯ ತಿಳಿಸಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ದಾಳಿ: ಸುರಂಗದಲ್ಲಿ ಜನರಿಗೆ ಆಶ್ರಯ



ರಷ್ಯಾ: ಉಕ್ರೇನ್‌ನ ರಾಜಧಾನಿ ಕೈವ್ ಮೇಲೆ ಇಂದು ಮುಂಜಾನೆ ರಷ್ಯಾ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ. ನಗರದಾದ್ಯಂತ ಸ್ಫೋಟಗಳು ಮತ್ತು ಗುಂಡಿನ ಸದ್ದು ಕೇಳಿ ಬಂತು. ಪ್ರಾಣ ಉಳಿಸಿಕೊಳ್ಳಲು, ಅನೇಕ ಕೈವ್ ನಿವಾಸಿಗಳು ಸುರಂಗಮಾರ್ಗ ನಿಲ್ದಾಣಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಕಳೆದ ವಾರ ಇಸ್ತಾಂಬುಲ್‌ನಲ್ಲಿ ನಡೆದ ಸಭೆಯಲ್ಲಿ ಎರಡೂ ರಾಷ್ಟ್ರದವರು ಒಪ್ಪಂದ ಮಾಡಿಕೊಂಡು ನೂರಾರು ಸೈನಿಕರು ಮತ್ತು ನಾಗರಿಕರನ್ನು ವಿನಿಮಯ ಪ್ರಾರಂಭಿಸಿದ ಕೆಲವೇ ಗಂಟೆಗಳ ನಂತರ ರಷ್ಯಾ ದಾಳಿ ನಡೆಸಿದೆ. ದಾಳಿ ಮುಂದುವರಿದಂತೆ ಕೈವ್‌ನ ಒಬೊಲಾನ್ ಜಿಲ್ಲೆಯ ಶಾಪಿಂಗ್ ಮಾಲ್, ವಸತಿ ಕಟ್ಟಡದ ಮೇಲೆ ಡ್ರೋನ್ ಅವಶೇಷಗಳು ಬಿದ್ದವು. ಮೇ 20, ಮೇ 23ರ ನಡುವೆ ಯುದ್ಧ ಭೂಮಿಯಿಂದ ದೂರದಲ್ಲಿ 788 ಉಕ್ರೇನಿಯನ್ ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ. ರಷ್ಯಾ 175 ಶಹೆದ್, ಡೆಕಾಯ್ ಡ್ರೋನ್‌ಗಳನ್ನು ಹಾಗೂ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಹಾರಿಸಿದೆ.

ಜಾರ್ಖಂಡ್‌ನಲ್ಲಿ ಗುಂಡಿನ ಚಕಮಕಿ: ಇಬ್ಬರು ಮಾವೋವಾದಿಗಳ ಹತ್ಯೆ



ಲತೇಹಾರ್ (ಜಾರ್ಖಂಡ್): ಜಾರ್ಖಂಡ್‌ನ ಲತೇಹಾರ್ ಜಿಲ್ಲೆಯಲ್ಲಿ ಶನಿವಾರ ಬೆಳಗ್ಗೆ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಜಾರ್ಖಂಡ್ ಜನ ಮುಕ್ತಿ ಪರಿಷತ್ ಮುಖ್ಯಸ್ಥ ಪಪ್ಪು ಲೋಹ್ರಾ ಸೇರಿದಂತೆ ಇಬ್ಬರು ಮಾವೋವಾದಿಗಳು ಮೃತಪಟ್ಟಿದ್ದಾರೆ. ಕೇಂದ್ರ ಮೀಸಲು ಪೊಲೀಸ್ ಪಡೆ ಮತ್ತು ಜಾರ್ಖಂಡ್ ಪೊಲೀಸರು ಜಂಟಿಯಾಗಿ ಲತೇಹಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಕಾಡಿನಲ್ಲಿ ನಡೆಸಿದ ಮಾವೋವಾದಿ ವಿರೋಧಿ ಕಾರ್ಯಾಚರಣೆಯಲ್ಲಿ ಮಾವೋವಾದಿ ವಿಭಜನೆ ಗುಂಪಿನ ಜೆಜೆಎಂಪಿ ಮುಖ್ಯಸ್ಥ ಲೋಹ್ರಾ ಮತ್ತು ಅವರ ಸಹಚರರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಮಾವೋವಾದಿಗಳು ಮೃತಪಟ್ಟಿದ್ದಾರೆ ಎಂದು ಪಲಮು ಡಿಐಜಿ ವೈಎಸ್ ರಮೇಶ್ ತಿಳಿಸಿದ್ದಾರೆ. ಪಪ್ಪು ಲೋಹ್ರಾ ಮತ್ತು ಇನ್ನೂ ಗುರುತು ಪತ್ತೆಯಾಗದ ಇನ್ನೊಬ್ಬ ವ್ಯಕ್ತಿಯ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ. ಗಾಯಗೊಂಡಿದ್ದ ಗುಂಪಿನ ಒಬ್ಬ ಮಾವೋವಾದಿಯನ್ನು ಬಂಧಿಸಲಾಗಿದ್ದು, ಐಎನ್‌ಎಸ್‌ಎಎಸ್ ರೈಫಲ್‌ನ್ನು ವಶಪಡಿಸಿಕೊಳ್ಳಲಾಗಿದೆ.

ಏಕಾಏಕಿ ಜನರ ಮೇಲೆ ದಾಳಿ ಮಾಡಿದ ಮಹಿಳೆ: 17 ಮಂದಿಗೆ ಚಾಕು ಇರಿತ



ಹ್ಯಾಂಬರ್ಗ್: 39 ವರ್ಷದ ಮಹಿಳೆಯೊಬ್ಬರು ಚಾಕುವಿನಿಂದ ಹಲವಾರು ಜನರ ಮೇಲೆ ದಾಳಿ ಮಾಡಿರುವ ಘಟನೆ ಶುಕ್ರವಾರ ಸಂಜೆ ಜರ್ಮನಿಯ ಹ್ಯಾಂಬರ್ಗ್ ಸೆಂಟ್ರಲ್ ರೈಲು ನಿಲ್ದಾಣದಲ್ಲಿ ನಡೆದಿದೆ.

ಜರ್ಮನಿಯ ಹ್ಯಾಂಬರ್ಗ್ ಸೆಂಟ್ರಲ್ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ ಸಂಖ್ಯೆ 13 ಮತ್ತು 14ರಲ್ಲಿ ಈ ಘಟನೆ ನಡೆದಿದ್ದು, ಈ ದಾಳಿಯಲ್ಲಿ 17 ಜನರು ಗಾಯಗೊಂಡಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ, 6 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ, 7 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ತಿಳಿದು ಬಂದಿದೆ. ಸದ್ಯ ಆರೋಪಿ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ. ಘಟನೆಯ ಹಿಂದೆ ಯಾವುದೇ ರಾಜಕೀಯ ಉದ್ದೇಶವಿಲ್ಲ ಎಂದು ಪೊಲೀಸ್ ವಕ್ತಾರ ಫ್ಲೋರಿಯನ್ ಎಬೆನ್ಸೆತ್ ಹೇಳಿದ್ದಾರೆ. ಪ್ರಸ್ತುತ ನಾವು ಈ ವಿಷಯವನ್ನು ತನಿಖೆ ಮಾಡುತ್ತಿದ್ದೇವೆ. ಘಟನೆ ನಡೆದ ಸಮಯದಲ್ಲಿ ಮಹಿಳೆ ಒಬ್ಬಂಟಿಯಾಗಿದ್ದಳು. ತನಿಖೆಯ ಸಮಯದಲ್ಲಿ ಮಹಿಳೆಯ ವಿರುದ್ಧ ಯಾವುದೇ ಕ್ರಿಮಿನಲ್ ದಾಖಲೆಗಳಿಲ್ಲ ಎಂದು ತಿಳಿದುಬಂದಿದೆ. ಇಡೀ ಘಟನೆಯನ್ನು ವೀಡಿಯೊ ದೃಶ್ಯಗಳ ಮೂಲಕ ವಿಶ್ಲೇಷಿಸಲಾಗುತ್ತಿದೆ.

ಹುಲಿ ದಾಳಿ: ರೈತ ಸಂಘದಿಂದ ಪ್ರತಿಭಟನೆ


ಹೈಸೊಡ್ಲೂರು ಗ್ರಾಮದ ಕಲ್ಲುಮೊಟ್ಟೆ ಎಂಬಲ್ಲಿ ಹುಲಿ ದಾಳಿ ಪರಿಹಾರಕ್ಕೆ ಆಗ್ರಹಿಸಿ ರೈತಸಂಘದವರು ಪ್ರತಿಭಟನೆ ನಡೆಸಿದರು.

ಪೊನ್ನಂಪೇಟೆ, ಮೇ 24– ಮೇಯಲು ಬಿಟ್ಟಿದ್ದ ಹಸು ಹುಲಿ ದಾಳಿಗೆ ಬಲಿಯಾಗಿರುವ ಮಾಡಿ ಕೊಂದಿರುವ ಘಟನೆ ನಿನ್ನೆ ಸಂಜೆ 4 ಗಂಟೆ ಸಮಯದಲ್ಲಿ ಸಂಭವಿಸಿದೆ. ತಾಲೂಕಿನ ಹುದಿಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೈಸೊಡ್ಲೂರು ಗ್ರಾಮದ ಕಲ್ಲುಮೊಟ್ಟೆ ಎಂಬಲ್ಲಿ ಸಂಭವಿಸಿದೆ. ಹೊಟ್ಟೆಂಗಡ ರತೀಶ್ ಎಂಬುವರಿಗೆ ಸೇರಿದ ಹಸು ಹುಲಿ ದಾಳಿಗೆ ಬಲಿಯಾಗಿದೆ.

ರಾಜ್ಯ ರೈತ ಸಂಘದ ಮುಖಂಡರು, ಘಟನಾ ಭೇಟಿ ನೀಡಿ ಅರಣ್ಯ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಬಂದ ರಾಜ್ಯ ವನ್ಯಜೀವಿ ಸಂರಕ್ಷಣಾ ಸಮಿತಿ ಸದಸ್ಯ ಮೇರಿ ಯಂಡ ಸಂಕೇತ್ ಪೂವಯ್ಯರನ್ನು ತೀವ್ರ ತರಾಟೆಗೆ ತೆಗೆದು ಕೊಂಡು ಹಸುವಿನ ಮಾಲೀಕರಿಗೆ ಕೂಡಲೇ ಸರಕಾರದಿಂದ ಪರಿಹಾರ ಕೊಡಿಸುವಂತೆಯೂ ಹುಲಿಯ ಚಲನ–ವಲನಗಳ ಪತ್ತೆಗೆ ಸಿಸಿ ಕ್ಯಾಮರಾ ಅಳವಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಬೇಕು. ಇನ್ನು 5 ದಿನದೊಳಗೆ ಹುಲಿಯನ್ನು ಸೆರೆ ಹಿಡಿಯದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಎಸಿಎಫ್ ಗೋಪಾಲ್ ಮಾತನಾಡಿ, ಕ್ಯಾಮರಾ ಅಳವಡಿಸಿ ಹುಲಿಯ ಚಲನವಲನ ಪತ್ತೆ ಹಚ್ಚಿ ಸೆರೆ ಹಿಡಿಯುವ ಕಾರ್ಯಾಚರಣೆಯನ್ನು ತಕ್ಷಣವೇ ನಡೆಸಲಾಗುವುದೆಂದು ಭರವಸೆ ನೀಡಿದರು.

ವಿರಾಜಪೇಟೆ ತಾಲೂಕು ರೈತ ಸಂಘದ ಅಧ್ಯಕ್ಷ ಬಾಚಿಮಾಡ ಭವಿಕುಮಾರ್, ಹುದಿಕೇರಿ ಹೋಬಳಿ ರೈತ ಸಂಘದ ಅಧ್ಯಕ್ಷ ಬಲ್ಯಮೀದೇರೀರ ಪ್ರಕಾಶ್, ಪೊನ್ನಂಪೇಟೆ ತಾಲೂಕು ಕಾಂಗ್ರೆಸ್ ವಲಯ ಅಧ್ಯಕ್ಷ ಮೀದೇರೀರ ನವೀನ್, ಚುಂಗುಲಂಡ ಸೂರಜ್, ಮಾದೀರ ಅಜಿತ್, ಮಂಡುಂಗಡ ಯೋಗೇಶ್, ವೀಟು ಹೊಟ್ಟೆಂಗಡ ಕುಟುಂಬಸ್ಥರು ಹಾಗೂ ಗ್ರಾಮಸ್ಥರು, ಅರಣ್ಯಾಧಿಕಾರಿಗಳಾದ ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಬಿ.ಎಂ. ಶಂಕರ್, ಉಪವಲಯ ಅರಣ್ಯಾಧಿಕಾರಿ ದಿವಾಕರ್, ನಾಗೇಶ್, ಪೊನ್ನಂಪೇಟೆ, ವಿರಾಜಪೇಟೆ, ತಿತಿಮತಿ, ಆರ್ ಆರ್‌ಟಿ ಸಿಬ್ಬಂದಿಗಳು ಹಾಗೂ ಆನೆ ಕಾರ್ಯ ಪಡೆಯ ಸಿಬ್ಬಂದಿಗಳು ಇದ್ದರು.

ಭಾರೀ ಮಳೆಗೆ ಧರೆಗುರುಳಿದ ವಿದ್ಯುತ್ ಕಂಬಗಳು; ಕಗ್ಗತ್ತಲಲ್ಲಿ ಗ್ರಾಮಗಳು


ಕಕ್ಕಬೆಯು ನಾಲಾಡಿ ಗ್ರಾಮದ ಕೋಡಿಮನಿಯಂಡ ರಸ್ತೆಯಲ್ಲಿ ಮರ ಒಂದು ವಿದ್ಯುತ್ ತಂತಿಗಳ ಮೇಲೆ ಉರುಳಿ ಬಿದ್ದ ಪರಿಣಾಮ ಮೂರು ಲೈಟ್ ಕಂಬಗಳು ಮುರಿದು ಬಿದ್ದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ.

ನಾಪೋಕ್ಲು, ಮೇ 24–(ದುಗ್ಗಳ) ಹೋಬಳಿ ವ್ಯಾಪ್ತಿಯಲ್ಲಿ ಶನಿವಾರ ಬಿರುಸಿನ ಮಳೆಯಾಗಿ ಅಲ್ಲಲ್ಲಿ ಮರದ ರೆಂಬೆಗಳು ಮುರಿದು ಬಿದ್ದ ಪರಿಣಾಮ ಹೋಬಳಿ ವ್ಯಾಪ್ತಿಯ ಹಲವೆಡೆ ವಿದ್ಯುತ್ ಕಡಿತ ಉಂಟಾಗಿದೆ.

ಸಮೀಪದ ಕಕ್ಕಬೆಯು ನಾಲಾಡಿ ಗ್ರಾಮದ ಕೋಡಿಮನಿಯಂಡ ರಸ್ತೆಯಲ್ಲಿ ಮರ ವಿದ್ಯುತ್ ತಂತಿಗಳ ಮೇಲೆ ಬಿದ್ದ ಪರಿಣಾಮ ಮೂರು ಕಂಬಗಳು ಮುರಿದು ಬಿದ್ದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ.

ಕಕ್ಕಬ್ಬೆ ಪ್ರೌಢಶಾಲೆಯ ಮುಖ್ಯದ್ವಾರದ ಬಳಿ ಹೈಟೆನ್ಶನ್ ತಂತಿಗಳ ಮೇಲೆ ಗಾಳಿ ಮಳೆಗೆ ಮರ ಮುರಿದು ಬಿದ್ದು ವಿದ್ಯುತ್ ಸಂಪರ್ಕ ಕಡಿತಗೊಂಡು ಅಪಾಯ ಮಟ್ಟದಲ್ಲಿದ್ದು ಆತಂಕಕ್ಕೆ ಕಾರಣವಾಗಿದೆ.

ಶ್ರೀ ಕಾಳಿಕಾಂಬ ಅಮನೂರು ಉತ್ಸವ ಸಂಪನ್ನ


ಪಾಲೂರು ಗ್ರಾಮ ದೇವತೆ ಶ್ರೀ ಕಾಳಿಕಾಂಬ ಅಮನೂರು ತಾಯಿಯ ವಾರ್ಷಿಕೋತ್ಸವ.

ನಾಪೋಕ್ಲು: ಸಮೀಪದ ಪಾಲೂರು ಗ್ರಾಮದ ಗ್ರಾಮ ದೇವತೆಯಾದ ಶ್ರೀ ಕಾಳಿಕಾಂಬ ಅಮನೂರು ತಾಯಿಯ ವಾರ್ಷಿಕೋತ್ಸವ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ವಾರ್ಷಿಕೋತ್ಸವದ ಅಂಗವಾಗಿ ಬೆಳಿಗ್ಗೆ ದೇವರ ಜಳಕ ಕೈಗೊಂಡರು. ಬಳಿಕ ವಾದ್ಯ ಗೋಷ್ಠಿಯೊಂದಿಗೆ ದೇವರ ಅಲಂಕೃತ ಮೂರ್ತಿಯೊಂದಿಗೆ ತಿರುವಳಕಾರರು ಭಕ್ತರು ಮೆರವಣಿಗೆ ತೆರಳಿ ದೇವಾಲಯದಲ್ಲಿ ಮಹಾಪೂಜೆ ಇನ್ನಿತರ ಸೇವೆಗಳು ಜರುಗಿ ಪ್ರಸಾದ ವಿತರಣೆ ಮಾಡಲಾಯಿತು. ಭಕ್ತಾದಿಗಳು ತಮ್ಮ ಇಷ್ಟಾರ್ಥ ಸಿದ್ದಿಗೆ ವಿವಿಧ ಹರಕೆ, ಕಾಣಿಕೆ ಒಪ್ಪಿಸಿ ಶ್ರದ್ಧಾಭಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಉತ್ಸವದಲ್ಲಿ ನೆರೆದಿದ್ದ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಚೆರುವಾಳಂಡ ರಮೇಶ್, ಕಾರ್ಯದರ್ಶಿ ಎಡಿಕೇರಿ ಪ್ರವೀಣ್(ಪವಿ), ನಿರ್ದೇಶಕ ಸದಸ್ಯರು ಹಾಗೂ ತಕ್ಕ ಮುಖ್ಯಸ್ಥರು ಊರ ಮತ್ತು ಪರವೂರಿನ ಕಾಳಿಕಾಂಬ ಭಕ್ತಾದಿಗಳು ಪಾಲ್ಗೊಂಡು ಪುನೀತ ಭಾವ ಹೊಂದಿದರು.

ಮರ ಬಿದ್ದು ಮಹಿಳೆ ದುರ್ಮರಣ

ಕೊಡಗು ಜಿಲ್ಲೆಯಲ್ಲಿ ಮಳೆಗೆ ಮೊದಲ ಬಲಿ

ಮಡಿಕೇರಿ: ಮನೆಯ ಮೇಲೆ ಮರ ಬಿದ್ದ ಪರಿಣಾಮ ಕಾರ್ಮಿಕ ಮಹಿಳೆಯೊಬ್ಬರು ಅಸು ನೀಗಿರುವ ಘಟನೆಯೊಂದು ಆರ್ಜಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಲೈನ್ ಮನೆಯಲ್ಲಿ ವಾಸವಿದ್ದ ಕಾರ್ಮಿಕ ಮಹಿಳೆ ಪಾತ್ರೆ ತೊಳೆಯುತಿದ್ದಾಗ ಮನೆಯ ಮೇಲೆ ಮರ ಬಿದ್ದ ಪರಿಣಾಮ ಅದರಡಿಗೆ ಸಿಲಿಕಿದ ಮಹಿಳೆ ಉಸಿರು ಚೆಲ್ಲಿದ್ದಾರೆ.

ಮೇ 27, ಮಾದಕ ವಸ್ತು ವಿರೋಧಿ ಜಾಗೃತಿ ಶಿಬಿರ


ಗೋಣಿಕೊಪ್ಪಲಿನಲ್ಲಿ ನಡೆಯಲಿರುವ ವೃತ್ತಿ ಜೀವನ ಮಾರ್ಗದರ್ಶನ ಶಿಬಿರದ ಬಗ್ಗೆ ಯುನೈಟೆಡ್ ಜಮಾಅತ್ತಿನ ಅಧ್ಯಕ್ಷ ಎಂ.ಎ. ಸಮೀರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಪೊನ್ನಂಪೇಟೆ: ಯುನೈಟೆಡ್ ಜಮಾಅತ್ (ಯುಜೆಜಿ) ವತಿಯಿಂದ 6ನೇ ತರಗತಿಯ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗಾಗಿ ಮಾದಕ ವಸ್ತು ವಿರೋಧಿ ಜಾಗೃತಿ ಮತ್ತು ವೃತ್ತಿ ಜೀವನ ಮಾರ್ಗದರ್ಶನ ಶಿಬಿರವನ್ನು ಮೇ 27ರಂದು ಗೋಣಿಕೊಪ್ಪಲಿನಲ್ಲಿ ಆಯೋಜಿಸಲಾಗಿದೆ.

'ನಮ್ಮ ನಡೆ ಮಾದಕ ವಸ್ತು ಮುಕ್ತ ಸಮಾಜ ಮತ್ತು ಅರಿವಿನ ಕಡೆ' ಎಂಬ ಧ್ಯೇಯವಾಕ್ಯದೊಂದಿಗೆ ಹಮ್ಮಿಕೊಳ್ಳಲಾಗಿರುವ ಈ ಕಾರ್ಯಕ್ರಮವು ಗೋಣಿಕೊಪ್ಪಲಿನ ಜ್ಯೂಸ್ ಫ್ಯಾಕ್ಟರಿ ರಸ್ತೆಯಲ್ಲಿರುವ ಕೊಡಗು ಇಂಟರ್ನ್ಯಾಷನಲ್ ಕಮ್ಯುನಿಟಿ (ಹಳೆಯ ರಾಧ ಟೂರಿಸ್ಟ್ ಹೋಂ) ಸಭಾಂಗಣದಲ್ಲಿ ಜರುಗಲಿದೆ ಎಂದು ಗೋಣಿಕೊಪ್ಪಲು ಯುನೈಟೆಡ್ ಜಮಾಅತ್ತಿನ ಅಧ್ಯಕ್ಷ ಎಂ.ಎ. ಸಮೀರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 10 ಗಂಟೆಗೆ ಜಮಾಅತ್ತಿನ ಅಧ್ಯಕ್ಷರ ನೇತೃತ್ವದಲ್ಲಿ ನಡೆಯುವ ಈ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಗ್ರಾಪಂ ಅಧ್ಯಕ ಕುಲ್ಲಚಂಡ ಪ್ರಮೋದ್ ಗಣಪತಿ ಭಾಗವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಉಮೀದ್ ರಿಹೆಬ್ ಸೆಂಟರ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಮೊಹಮ್ಮದ್ ರಫಿ ಉದ್ದೀನ್ ರಶೀದ್ ಹಾಗೂ ಪುಣೆಯ ಅನೀಸ್ ಡಿಫೆನ್ಸ್ ಅಕಾಡೆಮಿಯ ಸ್ಥಾಪಕ ನಿರ್ದೇಶಕ ಅನೀಶ್ ಕುಟ್ಟಿ ಆಗಮಿಸಲಿದ್ದಾರೆ. ವಿದ್ಯಾರ್ಥಿಗಳ ನೋಂದಣಿ ಕಾರ್ಯ ಅಂದು ಬೆಳಗ್ಗೆ 9 ಗಂಟೆಯಿಂದಲೇ ಆರಂಭಗೊಳ್ಳಲಿದೆ ಎಂದು ಹೇಳಿದರು.

ಜಮಾಅತ್ತಿನ ಕಾರ್ಯದರ್ಶಿ ಅಬ್ದುಲ್ ಸಮದ್ ಟಿ.ಕೆ. ಮಾತನಾಡಿ, ಕೊಡಗು ಜಿಲ್ಲೆ ಪೂರ್ಣವಾಗಿ ಮಾದಕ ವ್ಯಸನದಿಂದ ಮುಕ್ತವಾಗಬೇಕು. ಇಲ್ಲದಿದ್ದಲ್ಲಿ ಭವಿಷ್ಯದಲ್ಲಿ ಇದು ಸಮಾಜದ ಮೇಲೆ ಬಹುದೊಡ್ಡ ಪರಿಣಾಮ ಬೀರಲಿದೆ. ಯುವಕರು ಮಾದಕ ವಸ್ತುಗಳ ಬಳಕೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಳೆದುಕೊಳ್ಳುತ್ತಾರೆ. ಈ ಏರುಪೇರಿನಿಂದ ಯೌವ್ವನದಲ್ಲೇ ಸಂಕಷ್ಟ ಅನುಭವಿಸುತ್ತಾರೆ. ಜಿಲ್ಲೆಯ ನಾಗರೀಕರು ಮಾದಕ ವ್ಯಸನ ಮುಕ್ತ ಕೊಡಗು ನಿರ್ಮಿಸಲು ಪಣತೊಡಬೇಕಿದೆ. ಅದಕ್ಕಾಗಿ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಗೋಣಿಕೊಪ್ಪಲು ಯುನೈಟೆಡ್ ಜಮಾಅತ್ತಿನ ಗೌರವಾಧ್ಯಕ್ಷರಾದ ಕೆ.ಎಂ. ಅಬ್ದುಲ್ ರಹಿಮಾನ್ (ಬಾಪು), ಸಂಚಾಲಕರಾದ ತನ್ವೀರ್ ಅಹಮದ್, ಕಾರ್ಯಕಾರಿ ಸಮಿತಿ ಸದಸ್ಯ ಅಬ್ದುಲ್ ನಾಸರ್, ನಜೀರ್ ಮೌಲವಿ ಮೊದಲಾದವರು ಉಪಸ್ಥಿತರಿದ್ದರು.

ತಾಲೂಕು ವಕೀಲರ ಸಂಘದಿಂದ ನ್ಯಾಯಾಧೀಶರಿಗೆ ಬೀಳ್ಕೊಡುಗೆ


ನಂಜನಗೂಡಿಗೆ ವರ್ಗಾವಣೆಗೊಂಡ ನ್ಯಾಯಾಧೀಶೆ ಸರಿತ ಕುಮಾರಿ ಅವರಿಗೆ ವಕೀಲರ ಸಂಘದಿಂದ ಆತ್ಮೀಯವಾಗಿ ಬೀಳ್ಕೊಡುಗೆ ನೀಡಲಾಯಿತು.

ಕುಶಾಲನಗರ: ಕಳೆದ 3 ವರ್ಷಗಳಿಂದ ಸೇವೆ ಸಲ್ಲಿಸಿ ಇದೀಗ ವರ್ಗಾವಣೆಗೊಂಡಿರುವ ನ್ಯಾಯಾಧೀಶರಿಗೆ ತಾಲೂಕು ವಕೀಲರ ಸಂಘದ ವತಿಯಿಂದ ಬೀಳ್ಕೊಡಲಾಯಿತು. ನ್ಯಾಯಾಧೀಶೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ನಂಜನಗೂಡಿಗೆ ವರ್ಗಾವಣೆಗೊಂಡಿರುವ ಸರಿತ ಕುಮಾರಿಯವರಿಗೆ ವಕೀಲರ ಸಂಘದಿಂದ ಹಾರ್ದಿಕವಾಗಿ ಬೀಳ್ಕೊಡುಗೆ ನೀಡಲಾಯಿತು.

ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರೀಯ ಮಟ್ಟ ಚೆಸ್‌ನಲ್ಲಿ ಪ್ರಶಸ್ತಿ ಪಡೆದ ವಕೀಲ ಸಂಘದ ಸದಸ್ಯ ಕೆ.ಪಿ.ಶರತ್‌ರವರ ಮಗ ಕೆ. ಎಸ್ ಚಿನ್ಮತ್ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದ ಕೂಡಿಗೆ ಬಿ. ಮೋಹನ್ ರವರ ಪುತ್ರಿ ಸಮೃದ್ಧಿ ಆಚಾರ್ ಹಾಗೂ ದ್ವಿತೀಯ ಪಿ.ಯು.ಸಿಯಲ್ಲಿ ಶೇ.91 ಅಂಕ ಪಡೆದಿರುವ ಜಿ.ಎಲ್.ಸವಿತ ಅವರ ಮಗಳು ಯಶಸ್ವಿನಿ ಅವರಗಳನ್ನು ಸನ್ಮಾನಿಸಿ ಗೌರವಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸರಿತ ಕುಮಾರಿ, ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ಬಗ್ಗೆ ತಮಗೆ ತೃಪ್ತಿ ತಂದಿದೆ ನ್ಯಾಯಾಲಯದ ಸಿಬ್ಬಂದಿಗಳಿಗೆ, ನ್ಯಾಯದಾನದಲ್ಲಿ ಸಹಕರಿಸಿದ ವಕೀಲ ಮಿತ್ರರಿಗೆ ಧನ್ಯವಾದಗಳನ್ನು ಹೇಳಿದರು.

ನ್ಯಾಯಾಧೀಶರಿಗೆ ನೆನಪಿನ ಕಾಣಿಕೆ ನೀಡಿ ಉಜ್ವಲ ಭವಿಷ್ಯ ಹಾರೈಸಿ ಹರಿದ್ರಾ, ಸಿಂಧೂರ, ಸಕಲ ಗೌರವದೊಂದಿಗೆ ವಕೀಲರ ಸಂಘದಿಂದ ಬೀಳ್ಕೊಡಲಾಯಿತು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಆರ್.ಕೆ.ನಾಗೇಂದ್ರ ಬಾಬು ಅಧ್ಯಕ್ಷತೆ ವಹಿಸಿದ್ದರು. ವಕೀಲರ ಸಂಘದ ಉಪಾಧ್ಯಕ್ಷ ಕೆ.ಎಸ್.ವೆಂಕಟರಮಣ ರಾವ್, ಕಾರ್ಯದರ್ಶಿ ಕೆ.ಬಿ.ಮೋಹನ್, ವಕೀಲ ಸಂಘದ ಸದಸ್ಯರು, ನ್ಯಾಯಾಲಯದ ಸಿಬ್ಬಂದಿಗಳು, ಆರಕ್ಷಕರು ಭಾಗವಹಿಸಿದ್ದರು.

ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಕರೆ



ಪಟ್ಟಣದ ಶ್ರೀ ರಾಘವೇಂದ್ರ ಮಠದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಬೃಹತ್ ಶಿಬಿರವನ್ನು ಏರ್ಪಡಿಸಲಾಗಿತ್ತು.

ಗುಂಡ್ಲುಪೇಟೆ, ಮೇ 24 (ಸೋಮ್.ಜಿ)– ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸಬೇಕೆಂದು ಶ್ರೀ ರಾಘವೇಂದ್ರ ಸ್ವಾಮಿ ಮಠದ ಆಡಳಿತ ಮಂಡಲಿ ಮುಖ್ಯಸ್ಥೆ ರಾಜೇಶ್ವರಿ ಚಂದ್ರಶೇಖರ್ ಹೇಳಿದರು.

ಪಟ್ಟಣದ ಶ್ರೀ ರಾಘವೇಂದ್ರಸ್ವಾಮಿ ಮಠ ಟ್ರಸ್ಟ್ ಮತ್ತು ಮೈಸೂರಿನ ಕಾಮಾಕ್ಷಿ ಆಸ್ಪತ್ರೆ ಅವರ ಸಹಯೋಗದಲ್ಲಿ ರಾಯರ ಮಠದ ಆವರಣದಲ್ಲಿ ಏರ್ಪಡಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ದೇಶಿಸಿ ಮಾತನಾಡಿ, ತಾಲೂಕಿನ ಹಾಗೂ ಪಟ್ಟಣದ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಈ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಕಾಮಾಕ್ಷಿ ಆಸ್ಪತ್ರೆಯ ತಜ್ಞ ವೈದ್ಯರು ಉಚಿತವಾಗಿ ಮೂಳೆ–ಕೀಲು, ನರರೋಗ ಸೇರಿದಂತೆ ಸಾಮಾನ್ಯ ಕಾಯಿಲೆಗಳಿಗೆ ಸೂಕ್ತ ಸಲಹೆ ಹಾಗೂ ಚಿಕಿತ್ಸೆಯನ್ನು ನೀಡಿದ್ದಾರೆ. ನಾನಾ ಗ್ರಾಮಗಳ 300ಕ್ಕೂ ಹೆಚ್ಚಿನ ರೋಗಿಗಳಿಗೆ ಸಾಮಾನ್ಯ ರೋಗಗಳು, ಮೂಳೆ, ಕೀಲು, ನರ ರೋಗಗಳು, ಮಕ್ಕಳು, ದಂತ ಚಿಕಿತ್ಸೆ ಸೇರಿದಂತೆ ಆರೋಗ್ಯ ತಪಾಸಣೆ ನಡೆಸಿ ಉಚಿತ ಔಷಧಿಗಳನ್ನು ವಿತರಣೆ ಮಾಡಲಾಯಿತು. ಹೆಚ್ಚಿನ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆ ಅಗತ್ಯವಿರುವ ರೋಗಿಗಳಿಗೆ ನಮ್ಮ ಆಸ್ಪತ್ರೆಯಲ್ಲಿ ರಿಯಾಯಿತಿ ದರದಲ್ಲಿ ಸೂಕ್ತ ಚಿಕಿತ್ಸೆ ನೀಡಲಾಗುವುದು ಎಂದು ವೈದ್ಯ ಡಾ.ವಿಕ್ರಂ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ರಮೇಶ್‌ಮೇಸ್ತ್ರಿ, ಕಾಮಾಕ್ಷಿ ಆಸ್ಪತ್ರೆಯ ಟ್ರಸ್ಟಿ ಎಂ.ಮಹೇಶ್ ಶಣ್ಯೆ ಮತ್ತು ಡಾ. ಕೆ.ಆರ್. ಕಾಮತ್, ಮ್ಯಾನೇಜರ್ ಚಿರಾಗ್.ಆರ್, ಡಾ.ಚೈತ್ರಾ, ಡಾ.ಹೇಮಲತಾ, ಡಾ.ವಿಕ್ರಂ, ಡಾ.ಯಾದವ್ ಕುಮಾರ್ ಮತ್ತು ಶ್ರೀ ರಾಘವೇಂದ್ರ ಬೃಂದಾವನ ಆಡಳಿತ ಮಂಡಲಿಯ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

ಮೇ 27, ಕೊಳ್ಳೇಗಾಲದಲ್ಲಿ ಬಸವ ಜಯಂತಿ



ಕೊಳ್ಳೇಗಾಲ, ಮೇ 24– ಪಟ್ಟಣದ ಕೊಂಗವೀರೇಗೌಡರ ವಿದ್ಯಾರ್ಥಿನಿಲಯದಲ್ಲಿ ಜಾಗತಿಕ ಲಿಂಗಾಯಿತ ಮಹಾಸಭೆ ಹಾಗೂ ವಿವಿಧ ಬಸವಪರ ಸಂಘಟನೆಗಳ ವತಿಯಿಂದ 27ರಂದು ಜಗಜ್ಯೋತಿ ಬಸವೇಶ್ವರರ 892ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಗುವುದು ಎಂದು ಜಾಗತಿಕ ಲಿಂಗಾಯಿತ ಮಹಾಸಭೆ ತಾಲೂಕು ಅಧ್ಯಕ್ಷ ಬಿಂಧು ಲೋಕೇಶ್ ತಿಳಿಸಿದರು.

ಬೆಳಗ್ಗೆ 10–30ಕ್ಕೆ ಕೊಂಗವಿರೇಗೌಡರ ವಿದ್ಯಾರ್ಥಿನಿಲಯದಲ್ಲಿ ಬಸವ ಜಯಂತಿ ಜರುಗಲಿದ್ದು ದೇವನೂರು ಮಠಾಧ್ಯಕ್ಷ ಪೂಜ್ಯ ಮಹಾಂತ ಸ್ವಾಮೀಜಿ, ಸಾಲೂರು ಮಠಾಧ್ಯಕ್ಷ ಡಾ. ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು ಸಮಾರಂಭವನ್ನು ವಿರಕ್ತ ಮಠಾಧ್ಯಕ್ಷ ಮುಡಿಗುಂಡ ಶ್ರೀಕಂಠ ಸ್ವಾಮೀಜಿ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಡಾ. ಶರಚ್ಚಂದ್ರ ಸ್ವಾಮೀಜಿ, ಮುಮ್ಮಡಿ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಬಾಲಪ್ಪಡಕರೆ ಸ್ವಾಮೀಜಿ, ಇಮ್ಮಡಿ ಬಸವಸ್ವಾಮೀಜಿ, ಶಿವಪ್ಪಸ್ವಾಮೀಜಿ, ಗುಂಡೇಗಾಲ ಮಠದ ಮಲ್ಲಿಕಾರ್ಜುನಸ್ವಾಮೀಜಿ, ಇಮ್ಮಡಿ ಗುರುಲಿಂಗಸ್ವಾಮೀಜಿ, ಪ್ರಸನ್ನ ಮಲ್ಲಿಕಾರ್ಜುನ ಸ್ವಾಮೀಜಿ, ಶಿವಪ್ರಭು ಸ್ವಾಮೀಜಿ, ಮಾಜಿ ಶಾಸಕಿ ಪರಿಮಳ ನಾಗಪ್ಪ, ಹನೂರು ಕ್ಷೇತ್ರದ ಬಿಜೆಪಿ ನಾಯಕ ನಿಶಾಂತ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ತಾಪಂ ಇಓ ಗುರುಶಾಂತಪ್ಪ, ಗ್ರಾಮಾಂತರ ಠಾಣೆ ಪಿಎಸ್ಐ ಸುಪ್ರೀತ್, ಚಾಮರಾಜನಗರ ಜಾಗತಿಕ ಲಿಂಗಾಯಿತ ಮಹಾಸಭೆಯ ಜಿಲ್ಲಾಧ್ಯಕ್ಷ ಗುರುಸ್ವಾಮಿ ಇನ್ನಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಬೆಳಗ್ಗೆ 9 ಗಂಟೆಗೆ ರಾಜೇಶ್ ಹಂಪಾಪುರ ಕಲಾವಿದರ ತಂಡದ ವತಿಯಿಂದ ಭಜನಾ ಕಾರ್ಯಕ್ರಮ ಅಯೋಜಿಸಲಾಗಿದ್ದು ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸುವಂತೆ ಲೋಕೇಶ್ ಮನವಿ ಮಾಡಿದ್ದಾರೆ.

2.8 ಕೋಟಿ ವೆಚ್ಚದಲ್ಲಿ ಬೂದು ನೀರು ನಿರ್ವಹಣಾ ಕಾಮಗಾರಿ: ಶಾಸಕ ಕೃಷ್ಣಮೂರ್ತಿ


ಬೂದು ನೀರು ನಿರ್ವಹಣಾ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಕೊಳ್ಳೇಗಾಲ, ಮೇ 24–ಬೂದು ನೀರು ನಿರ್ವಹಣಾ ಕಾಮಗಾರಿಗೆ ಕುಣಗಳ್ಳಿ ಗ್ರಾಮ ಪಂಚಾಯ್ತಿ ಆಯ್ಕೆಯಾಗಿದ್ದು 2.8 ಕೋಟಿ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು 28 ಚರಂಡಿ ಕಾಮಗಾರಿಗಳನ್ನು ಸಹ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಶಾಸಕ ಎ. ಆರ್.ಕೃಷ್ಣಮೂರ್ತಿ ಹೇಳಿದರು.

ಕುಣಗಳ್ಳಿಯಲ್ಲಿ ಬೂದು ನೀರು ನಿರ್ವಹಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಈ ಕಾಮಗಾರಿಯಿಂದಾಗಿ ಗ್ರಾಮದಿಂದ ಚರಂಡಿ ಮಾರ್ಗವಾಗಿ ತೆರಳುವ ನೀರು ಒಂದೆಡೆ ನಿಂತು ಬೂದು ಬಣ್ಣಕ್ಕೆ ತಿರುಗುತ್ತದೆ. ನಿರುಪಯುಕ್ತ ನೀರನ್ನು ಸೋಪ್ ಫಿಟ್ ಮಾಡಿ ಶೇಖರಿಸಿ ತಿಳಿಯಾದ ನೀರನ್ನು ಮುಂದಕ್ಕೆ ಬಿಟ್ಟು ವೆಟ್ ಲ್ಯಾಂಡ್ ನಿರ್ಮಿಸಿ ಶುದ್ದ ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಕೆ ಮಾಡಿಕೊಂಡು, ಉಳಿದ ನೀರನ್ನು ಹಳ್ಳಗಳಿಗೆ ಹರಿಯಲು ಬಿಡುವುದು ಈ ಯೋಜನೆ ಉದ್ದೇಶ, ಕಾಮಗಾರಿಯನ್ನು ಗುಣಮಟ್ಟದಿಂದ ಅಧಿಕಾರಿಗಳು ನಿಂತು ಮಾಡಿಸಬೇಕು ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಗಳಮ್ಮ, ಉಪಾಧ್ಯಕ್ಷ ಪ್ರಭುಸ್ವಾಮಿ, ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ ಇನ್ನಿತರಿದ್ದರು.

ಸರ್ಕಾರಿ ನೌಕರರಿಗೆ ಉಪ ಜಾತಿ ನಮೂದಿಸಲು ಕಾಲಾವಕಾಶ ಕೊಡಿ : ವೆಂಕಟರಮಣಸ್ವಾಮಿ


ಒಳ ಮೀಸಲಾತಿ ಗಣತಿ ಸಮೀಕ್ಷೆಯಲ್ಲಿ ಹೊಲಯ ಎಂದು ನಮೂದಿಸುವಂತೆ ಜಾಗೃತಿ ಮೂಡಿಸಲು ಅಯೋಜಿಸಿರುವ ಆಟೋ ಪ್ರಚಾರಕ್ಕೆ ಚಾಲನೆ ನೀಡಲಾಯಿತು.

ಚಾಮರಾಜನಗರ: ಒಳ ಮೀಸಲಾತಿ ಜಾತಿಗಣತಿ ಸಮೀಕ್ಷೆಯಲ್ಲಿ ರಾಜ್ಯದಲ್ಲಿ ಸಮುದಾಯದ 2 ಲಕ್ಷ ಸರ್ಕಾರಿ ನೌಕರರು ಆದಿ ಕರ್ನಾಟಕ ಎಂದು ಬರೆಸಿದ್ದಾರೆ. ಅವರು ಮೂಲ ಜಾತಿ ಬರೆಸಲು ಅವಕಾಶ ಮಾಡಿಕೊಡಬೇಕು ಎಂದು ನ್ಯಾಯಮೂರ್ತಿ ಹೆಚ್.ಎಸ್. ನಾಗಮೋಹನ್ ದಾಸ್ ಅವರಲ್ಲಿ ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಮನವಿ ಮಾಡಿದರು.

ನಗರದ ಅಂಬೇಡ್ಕರ್ ಬಡಾವಣೆಯಲ್ಲಿ ತಾಲೂಕಿನ ಹಳ್ಳಿಗಳ ಬಲಗೈ ಸಮುದಾಯದ ಬೀದಿಗಳಲ್ಲಿ ಒಳ ಮೀಸಲಾತಿ ಗಣತಿ ಸಮೀಕ್ಷೆಯಲ್ಲಿ ಹೊಲಯ ಎಂದು ನಮೂದಿಸುವಂತೆ ಜಾಗೃತಿ ಮೂಡಿಸಲು ಅಯೋಜಿಸಿರುವ ಆಟೋ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿ, ಒಳ ಮೀಸಲಾತಿ ಜಾತಿ ಗಣತಿ ಸಮೀಕ್ಷೆಗೆ ಮೇ 17 ಕೊನೆಯಾಗಿದ್ದು, ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿ ಮೇ. 25ರವರೆಗೆ ಸಮೀಕ್ಷೆಗೆ ಕಾಲಾವಕಾಶ ಕೊಟ್ಟು ಮೇ. 29 ರವರೆಗೆ ಕಾಲಾವಕಾಶ ವಿಸ್ತರಿಸಿದೆ. ಕಾಲಾವಕಾಶ ವಿಸ್ತರಿಸಿದ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್‌ದಾಸ್ ಅವರಿಗೆ ಸಮುದಾಯದ ಪರವಾಗಿ ಈ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಶೇ.90 ರಷ್ಟು, ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದಲ್ಲಿ 90 ರಷ್ಟು, ಚಾಮರಾಜನಗರ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ತಲಾ ಶೇ.80 ರಷ್ಟು ಸಮೀಕ್ಷೆಯಾಗಿದ್ದು, ಜಿಲ್ಲೆಯಲ್ಲಿ ಹೊಲಯ ಸಮುದಾಯ ಶೇ 100ರಷ್ಟು ಆಗಬೇಕು ಹಾಗಾಗಿ ಸಮುದಾಯದವರು ಸಮೀಕ್ಷೆಯಲ್ಲಿ ಹೊಲಯ ಎಂದು ಬರೆಸಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ, ಮುಖಂಡರಾದ ರೂಪೇಶ್, ಬಸವಣ್ಣ, ಮಹದೇವಸ್ವಾಮಿ, ರಂಗಸ್ವಾಮಿ ಕಾಗಲವಾಡಿ, ರಾಜಣ್ಣ, ಮಹಾದೇವಸ್ವಾಮಿ, ಇತರರು ಹಾಜರಿದ್ದರು.

ಅಕ್ರಮ ಅಕ್ಕಿ ಸಾಗಣೆ; ಆರೋಪಿ ಬಂಧನ

ಕೊಳ್ಳೇಗಾಲ: ತಾಲೂಕಿನ ಸರಗೂರು ಗ್ರಾಮದ ಮುಖ್ಯ ರಸ್ತೆಯಲ್ಲಿ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಯನ್ನು ಗ್ರಾಮಾಂತರ ಪೊಲೀಸರು ಬಂಧಿಸಿ ಸಾವಿರದ ಇನ್ನೂರು ಕೆಜಿ ಅಕ್ಕಿ ವಶಕ್ಕೆ ಪಡೆದಿದ್ದಾರೆ.

ನರಸೀಪುರ ತಾಲೂಕಿನ ಪೂರಿಗಾಲಿ ಸಮೀಪದ ಸರಗೂರು ಗ್ರಾಮದ ಅಜ್ಗಾರ್ ಅಲಿ ಎಂಬುವನೇ ಬಂಧಿತ ಅರೋಪಿ. ಈತ ನಾಗರೀಕರಿಂದ ಅಕ್ರಮವಾಗಿ ಕಡಿಮೆ ಬೆಲೆಗೆ ಅಕ್ಕಿ ಖರೀದಿಸಿ ಹೆಚ್ಚು ಬೆಲೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದ. ಖಚಿತ ಮಾಹಿತಿ ಹಿನ್ನೆಲೆ ಆಹಾರ ಇಲಾಖೆ ಹಾಗೂ ಗ್ರಾಮಾಂತರ ಪೊಲೀಸರು ಜಂಟಿ ಕಾರ್ಯಚರಣೆ ನಡೆಸಿ ಆರೋಪಿ ಬಂಧಿಸಿ, ಅಕ್ಕಿ ಸಾಗಾಣಿಕೆಗೆ ಬಳಸಿದ್ದ ಗೂಡ್ಸ್ ವಾಹನ ಜಪ್ತಿ ಮಾಡಿದ್ದಾರೆ. ಈವೇಳೆ ಪಿಎಸ್ಐ ಸುಪ್ರೀತ್, ಆಹಾರ ಇಲಾಖೆಯ ಪ್ರಸಾದ್ ಇನ್ನಿತರರು ಪಾಲ್ಗೊಂಡಿದ್ದರು.

ಸಿಇಟಿಯಲ್ಲಿ ಮಾನಸ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ


ಯತೀನ್ ಗೌಡ ಅಮೃತ ಜೀವನ್

ಕೊಳ್ಳೇಗಾಲ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೃತ್ತಿಪರ ಕೋರ್ಸುಗಳಿಗಾಗಿ ನಡೆಸಿದ (ಸಿಇಟಿ) ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕೊಳ್ಳೇಗಾಲ ಪಟ್ಟಣದ ನಿಸರ್ಗ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಇಂಜಿನಿಯರಿಂಗ್ ವಿಭಾಗದಲ್ಲಿ ಯತೀನ್‌ಗೌಡ(1534), ಜೀವನ್ (5710), ಅಮೃತ (5858), ಕೀರ್ತನ (7372), ಪ್ರಿಯ (7445), ಭಾಸ್ಕರ್(9237), ನವೀನ್‌ಕುಮಾರ್ (9242), ಮಹಾದೇವ ಪ್ರಭು(10477), ತನುಜಾ(15670), ಯಶಸ್ವಿನಿ (15714), ಜಾಹ್ನವಿ(15968) ನೇ ರ್‍ಯಾಂಕ್ ಗಳಿಸಿ ಸಾಧನೆಗೈದಿದ್ದಾರೆ

ಬಿಎಸ್ಸಿ ಕೃಷಿ ವಿಭಾಗದಲ್ಲಿ ಅಮೃತ 3238, ಜೀವನ್ 4427, ಪ್ರಿಯಾ 5054, ಕೀರ್ತನ 5192, ನವೀನ್‌ಕುಮಾರ್ 5274, ಮಹಾದೇವಪ್ರಭು 6401, ತನುಜಾ 8277ನೇ ರ್‍ಯಾಂಕ್ ಗಳಿಸಿದ್ದು ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆ ಅಧ್ಯಕ್ಷ ಎಸ್.ನಾಗರಾಜು, ಕಾರ್ಯದರ್ಶಿ ಡಾ.ಎಸ್.ದತ್ತೇಶ್‌ಕುಮಾರ್, ವಿಶೇಷಾಧಿಕಾರಿ ಡಾ. ಆರ್.ನಾಗಭೂಷಣ್ ಇನ್ನಿತರರು ಅಭಿನಂದಿಸಿದ್ದಾರೆ.

ವ್ಯಕ್ತಿ ನಾಪತ್ತೆ



ಚಾಮರಾಜನಗರ: ಚಂದಕವಾಡಿ ಗ್ರಾಮದ ನಿವಾಸಿ ಮಹದೇವ ಪ್ರಸಾದ್ ಎಂಬವರು ಕಾಣೆಯಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ. 30 ವರ್ಷದವರಾದ ಇವರು 5.8 ಅಡಿ ಎತ್ತರ, ಗೋಧಿ ಮೈಬಣ್ಣ, ಕೋಲು ಮುಖ, ಸದೃಢ ಮೈಕಟ್ಟು ಹೊಂದಿದ್ದು, ಎಡಗೈನಲ್ಲಿ ಟ್ಯಾಟು ಇರುತ್ತದೆ. ಇವರ ಸುಳಿವು ದೊರೆತಲ್ಲಿ ದೂ.ಸಂ 08226–222243, 08226–222052, 222383, ಮೊ.ಸಂ 9480804648 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಐಸ್‌ಕ್ರೀಂ ಘಟಕದಿಂದ ತೊಂದರೆ ಇಲ್ಲ




ಚಾಮರಾಜನಗರ, ಮೇ 24– ಹಾಲು ಒಕ್ಕೂಟದಲ್ಲಿ ನಂದಿನಿ ಐಸ್‌ಕ್ರೀಂ ತಯಾರಿಕಾ ಘಟಕ ಆರಂಭವಾದರೆ ಚಾಮುಲ್‌ಗೆ ಹೆಚ್ಚಿನ ಲಾಭ ಬರಲಿದ್ದು, ಪರೋಕ್ಷವಾಗಿ ರೈತರಿಗೂ ಅನುಕೂಲವಾಗುತ್ತದೆ. ರೈತರಿಗೆ ನೀಡುವ ಹಾಲಿನ ದರ ಇಳಿಕೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ ಹೇಳಿದರು.

ಐಸ್‌ಕ್ರೀಂ ತಯಾರಿಕಾ ಘಟಕ ನಿರ್ಮಾಣಕ್ಕೆ ಕೆಲವರು ವಿರೋಧ ಮಾಡುತ್ತಿದ್ದಾರೆ. ಹಿಂದಿನ ಅಧ್ಯಕ್ಷರ ಅವಧಿಯಲ್ಲಿಯೇ ಐಸ್‌ಕ್ರಿಂ ಘಟಕಕ್ಕೆ ಅನುಮೋದನೆಯಾಗಿತ್ತು. ಈಗ ಅಧಿಕಾರ ಕಳೆದುಕೊಂಡ ಬಳಿಕ ಒಕ್ಕೂಟದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ತಪ್ಪು ಮಾಹಿತಿಯಿಂದ ರೈತ ಸಂಘದವರು ಇದೇ 27 ರಂದು ಪ್ರತಿಭಟನೆ ಮಾಡಲು ಮುಂದಾಗಿದ್ದಾರೆ. ಈಗಲೂ ಸಹ ನಾವು ರೈತ ಮುಖಂಡರನ್ನು ಒಕ್ಕೂಟಕ್ಕೆ ಆಹ್ವಾನಿಸಿ ವಾಸ್ತವಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ಸಿದ್ಧರಿದ್ದೇವೆ. ಐಸ್ ಕ್ರೀಂ ಘಟಕ ನಿರ್ಮಾಣದಿಂದ ಯಾರಿಗೂ ಅನ್ಯಾಯವಾಗುವುದಿಲ್ಲ. ರೈತರು, ಹಾಲು ಉತ್ಪಾದಕರ ಹಿತ ಕಾಯಲು ಬದ್ಧರಾಗಿದ್ದೇವೆ. ಕೇರಳ, ತಮಿಳುನಾಡು ಮತ್ತು ಮೈಸೂರಿನಲ್ಲಿ ನಂದಿನಿ ಐಸ್‌ಕ್ರೀಂಗೆ ಭಾರಿ ಬೇಡಿಕೆ ಇದೆ. ಈಗಾಗಲೇ 7750 ಲೀ. ಐಸ್‌ಕ್ರೀಂ ಮಾಡಲು ಬೇಡಿಕೆ ಬಂದಿದೆ. ಇದರಿಂದ ಬಂದ ಲಾಭವನ್ನು ರೈತರಿಗೆ ಹಂಚಲಾಗುವುದು. ಘಟಕ ನಿರ್ಮಾಣದಿಂದ ಜಿಲ್ಲೆಯ ರೈತರ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದರು.

ತಿಂಗಳ ಬಾಕಿಯನ್ನೂ ಉಳಿಸಿಕೊಳ್ಳದೆ ಆಯಾ ತಿಂಗಳೇ ಹಾಲು ಉತ್ಪಾದಕರಿಗೆ ಹಣ ಬಟವಾಡೆ ಮಾಡುತ್ತಿರುವುದು ನಮ್ಮ ಒಕ್ಕೂಟ ಮಾತ್ರ. ಅಲ್ಲದೆ ರಾಜ್ಯದಲ್ಲಿಯೇ ಪ್ರಥಮವಾಗಿ ನಮ್ಮ ಚಾಮುಲ್‌ನಿಂದ ನಿವೃತ್ತರಾದವರಿಗೆ 5 ಲಕ್ಷ ರೂ. ನೀಡಲಾಗುತ್ತಿದೆ ಕಳೆದ ಚಾಮುಲ್ ನಿರ್ದೇಶಕ ಎಚ್.ಎಸ್. ಬಸವರಾಜು, ಎಂಪಿ.ಸುನೀಲ್, ಶೀಲಾ ಪುಟ್ಟರಂಗಶೆಟ್ಟಿ, ಸದಾಶಿವಮೂರ್ತಿ, ಮಹದೇವಸ್ವಾಮಿ, ಶಾಹುಲ್ ಅಹಮ್ಮದ್, ಕಮರವಾಡಿ ರೇವಣ್ಣ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಗಣಪತಿ ಸಚ್ಚಿದಾನಂದ ಶ್ರೀಗಳ 83ನೇ ಜನ್ಮದಿನ ಸಂಭ್ರಮ



ಮೈಸೂರಿನ ಶ್ರೀ ಅವಧೂತ ದತ್ತ ಪೀಠವು ವಿಶ್ವಪ್ರಸಿದ್ಧ ಆಧ್ಯಾತ್ಮಿಕ ನೆಲೆ. ಇಲ್ಲಿನ ಹಿರಿಯ ಪೀಠಾಧಿಪತಿ ಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಧಾರ್ಮಿಕ ಸೇವೆ ಜೊತೆಗೆ ಆರೋಗ್ಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸೇವೆ ಮೂಲಕ ಪೂಜ್ಯರಾಗಿದ್ದಾರೆ. ಆಳವಾದ ಆಧ್ಯಾತ್ಮಿಕ ಬೋಧನೆ, ಕಲಾ ಪೋಷಣೆ, ಸಂಗೀತ ಚಿಕಿತ್ಸೆ, ಮಾನವೀಯ ಸೇವೆಯಲ್ಲಿ ಶ್ರೀಗಳು ಐದು ದಶಕಕ್ಕೂ ಅಧಿಕ ಕಾಲದಿಂದ ನಿರತರಾಗಿದ್ದಾರೆ. ಮೈಸೂರಿನಲ್ಲಿ ಮಾತ್ರವಲ್ಲದೆ ದೇಶದ-ವಿದೇಶಗಳಲ್ಲಿ ಶ್ರೀಗಳು ಆಶೀರ್ವಚನ ಹಾಗೂ ಧಾರ್ಮಿಕ ಕೈಂಕರ್ಯಗಳ ಮೂಲಕ ಅಪಾರ ಭಕ್ತ ಸಮೂಹವನ್ನು ಆಧ್ಯಾತ್ಮ ಲೋಕಕ್ಕೆ ಸೆಳೆದಿದ್ದಾರೆ.

ಪ್ರಾಚೀನ ಸಂಪ್ರದಾಯ-ಆಚರಣೆಗಳ ಸಂರಕ್ಷಣೆ ಮತ್ತು ಪ್ರಚಾರಕ್ಕೆ ಸಮರ್ಪಿತವಾಗಿರುವ ಶ್ರೀ ಅವಧೂತ ದತ್ತ ಪೀಠದಲ್ಲಿ ವರ್ಷವಿಡೀ ವಿವಿಧ ಜನಪರ ಸೇವಾ ಕಾರ್ಯಗಳು ನಡೆಯುತ್ತಿರುತ್ತವೆ. ಇಲ್ಲಿ ಪುಟ್ಟ ಮಕ್ಕಳಿಂದ ಹಿರಿಯರವರೆಗೂ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗೆ ಪೂರಕವಾದ ಉಪನ್ಯಾಸ, ಸ್ಪರ್ಧೆಗಳು ಹಾಗೂ ತರಬೇತಿಗಳ ಆಯೋಜಿಸಲಾಗುತ್ತದೆ. ದೇಶ-ವಿದೇಶದ ಅನೇಕ ವಿದ್ವಾಂಸರನ್ನು ಆಶ್ರಮಕ್ಕೆ ಆಹ್ವಾನಿಸಿ, ಮೌಲ್ಯಯುತ ಉಪನ್ಯಾಸಗಳನ್ನು ಕಲ್ಪಿಸಲಾಗುತ್ತದೆ. ಅಂತಾರಾಷ್ಟ್ರೀಯ ಖ್ಯಾತಿಯ ಸಂಗೀತ ಸಾಧಕರು ಶ್ರೀಮಠದಲ್ಲಿ ಕಾರ್ಯಕ್ರಮ ಪ್ರಸ್ತುತಪಡಿಸುತ್ತಾರೆ. ಜೊತೆಗೆ ನಾನಾ ಬಿರುದು-ಬಾವಲಿಗಳಿಂದ ಮಠದಿಂದ ಪುರಸ್ಕೃತರಾಗಿದ್ದಾರೆ. ಹಾಗೆಯೇ ದೇಶ-ವಿದೇಶಗಳ ಲಕ್ಷಾಂತರ ಭಕ್ತರು ಮಠಕ್ಕೆ ನಿತ್ಯವೂ ಭೇಟಿ ನೀಡುತ್ತಾರೆ. ಈ ಮೂಲಕ ಮೈಸೂರಿನ ಪ್ರವಾಸೋದ್ಯಮಕ್ಕೆ ಮೇರು ಕೊಡುಗೆ ನೀಡುತ್ತಾ ಬಂದಿದೆ.

ಮೈಸೂರಿನ ಶ್ರೀ ಅವಧೂತ ದತ್ತಪೀಠದಲ್ಲಿ ದೇವಾಲಯಗಳು, ಅತ್ಯಾಕರ್ಷಕ ನಾದ ಮಂಟಪ, 'ಶುಕವನ' ಪಕ್ಷಿಗಳ ಪುನರ್ವಸತಿ ಕೇಂದ್ರ, ಬೋನ್ಸಾಯ್ ಗಾರ್ಡನ್, ವಿಶ್ವಂ ಮ್ಯೂಸಿಯಂ, ದತ್ತ ಕ್ರಿಯಾ ಅಂತಾರಾಷ್ಟ್ರೀಯ ಯೋಗ ಕೇಂದ್ರ ಸೇರಿದಂತೆ ಹತ್ತಾರು ವೈವಿಧ್ಯಮಯ ಕೇಂದ್ರಗಳಿವೆ. ಎಸ್‌ಜಿಸಿ ಆಸ್ಪತ್ರೆ ಮೂಲಕ ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನೂ ನೀಡಲಾಗುತ್ತಿದೆ. ದೇಶ-ವಿದೇಶಗಳಲ್ಲಿ ನೂರಕ್ಕೂ ಹೆಚ್ಚು ಶಾಖಾ ಮಠಗಳನ್ನು ಹೊಂದಿರುವ ಶ್ರೀ ಅವಧೂತ ದತ್ತ ಪೀಠ ಗಣನೀಯ ಸೇವೆ ನೀಡುತ್ತಿದೆ. ಹಿರಿಯ ಶ್ರೀಗಳ ಮಾರ್ಗದರ್ಶನದಲ್ಲಿ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದತ್ತ ಪೀಠದ ಸೇವೆ ಹಾಗೂ ಔನತ್ಯಕ್ಕೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ.

ಈ ಮಠದ ಅಂಗಣದಲ್ಲಿ ದತ್ತಾತ್ರೇಯ ದೇವಾಲಯ, ರಾಜರಾಜೇಶ್ವರಿ ದೇವಾಲಯ, ದತ್ತ ವೆಂಕಟರಮಣ ಸ್ವಾಮಿ ದೇವಾಲಯ ಹಾಗೂ ಕಾರ್ಯಸಿದ್ಧಿ ಹನುಮಾನ್ ಬೃಹತ್ ಮೂರ್ತಿ ಇದ್ದು ನಿತ್ಯ ಪೂಜಾ ಕೈಂಕರ್ಯಗಳು ಜರುಗುತ್ತವೆ. ಇದೀಗ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ, ನಾದಮಂಟಪದ 27ನೇ ವಾರ್ಷಿಕೋತ್ಸವ ಹಾಗೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನ ಸಂಭ್ರಮದ ಸುಸಂದರ್ಭ. ಇದರ ಪ್ರಯುಕ್ತ ಮೇ 25 ರಿಂದ ಜೂನ್ 1 ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ರಾಜ್ಯದ ವಿವಿಧೆಡೆಯಿಂದ, ವಿವಿಧ ರಾಜ್ಯ ಹಾಗೂ ರಾಷ್ಟ್ರಗಳಿಂದ ಸಾವಿರಾರು ಭಕ್ತರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಮೇ 25 ಭಾನುವಾರದಂದು ಬೆಳಗ್ಗೆ ಗಣಪತಿ ಹೋಮ, ಸಂಜೆ ಶೇಷ ವಾಹನ ಉತ್ಸವ ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ ನೆರವೇರಲಿದೆ. 26ನೇ ಬ್ರಹ್ಮೋತ್ಸವ ಮತ್ತು ಶ್ರೀಗಳ 83ನೆ ಜನುಮ ದಿನ ಉತ್ಸವಕ್ಕೆ ಚಾಲನೆ ದೊರೆಯಲಿದೆ.

ಮೇ 26 ರಂದು ಶ್ರೀಗಳ 83ನೇ ಜನ್ಮ ದಿನಾಚರಣೆ ಪ್ರಯುಕ್ತ ಬೆಳಗ್ಗೆ 8 ಗಂಟೆಗೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ರುದ್ರ ಹೋಮ, ಆಯುಷ್ಯ ಹೋಮ, ರುದ್ರಾಭಿಷೇಕ ಹಾಗೂ ನಾದ ಮಂಟಪ ದಲ್ಲಿ ಶ್ರೀ ಚಕ್ರ ಪೂಜೆ, 9ಕ್ಕೆ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಪ್ರತ್ಯಕ್ಷ ಪಾದ ಪೂಜೆಯನ್ನು ಅವಧೂತ ದತ್ತಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ನೆರವೇರಿಸುವರು.

10 ಗಂಟೆಗೆ ವಿಷ್ಣುಭಟ್ಟ ಲಕ್ಷ್ಮೀನಾರಾಯಣ ಘನಪಾಠಿ ಅವರಿಗೆ ವೇದ ನಿಧಿ, ಜಿಎಸ್‌ವಿ ದತ್ತಾತ್ರೇಯ ಮೂರ್ತಿ ಅವರಿಗೆ ಶಾಸ್ತ್ರ ನಿಧಿ, ಪಂ.ವಿನಾಯಕ ತೊರವಿ ಹಾಗೂ ವಿದ್ವಾನ್ ಶಶಾಂಕ್ ಸುಬ್ರಮಣ್ಯಂ ಅವರಿಗೆ ನಾದ ನಿಧಿ, ವಿದುಷಿ ಟಿ.ಎಸ್.ಶ್ರೀಲಕ್ಷ್ಮಿ ಅವರಿಗೆ ನಾಟ್ಯ ನಿಧಿ, ಕೃಷ್ಣ ಮೂರ್ತಿ ಅವರಿಗೆ ಆಸ್ಥಾನ ಶಿಲ್ಪಿ ಸೇರಿದಂತೆ ಚೈತನ್ಯ ಅರ್ಚನ ದತ್ತ ಪೀಠದ ಬಿರುದುಗಳನ್ನು ಪ್ರದಾನ ಮಾಡಲಾಗುತ್ತದೆ.

ಅಲ್ಲದೆ, ಜಯಲಕ್ಷ್ಮಿ ಪುರಸ್ಕಾರವನ್ನು ಶ್ರೀಮತಿ ಗಂಗಾವರಂ ವೇದಾವತಿ ಮತ್ತು ಶ್ರೀಮತಿ ಗೀತಾ ಪುಂಜಾಲ ಅವರಿಗೆ, ದತ್ತ ಪೀಠ ಬಂಧು ಬಿರುದನ್ನು ಕಮಲ್ ಕಪೂರ್, ಕಂಟೇಟಿ ಶ್ರೀನಿವಾಸ್ ಹಾಗೂ ಎಸ್ ನಾಗರಾಜ ಅವರಿಗೆ, ಸಸ್ಯ ಬಂಧು ಬಿರುದನ್ನು ಶ್ರೀಮತಿ ಸುಚಿತಾ ರೆಡ್ಡಿ ಅವರಿಗೆ ಪ್ರದಾನ ಮಾಡಲಾಗುತ್ತದೆ.

ಮಧ್ಯಾಹ್ನ 3 ಗಂಟೆಗೆ ವಿದುಷಿ ಗೋಪಿಕಾ ಪೂರ್ಣಿಮಾ ಮತ್ತು ವಿದ್ವಾನ್ ಮಲ್ಲಿಕಾರ್ಜುನ್ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ. ಸಂಜೆ 5ಕ್ಕೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಸಿಂಹ ವಾಹನ ಉತ್ಸವ, 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅವರು ನಾದಮಂಟಪದ 27ನೇ ವಾರ್ಷಿಕೋತ್ಸವ ಉದ್ಘಾಟಿಸಲಿದ್ದಾರೆ. ಸಂಜೆ 7 ಗಂಟೆಗೆ ದತ್ತ ಪೀಠ ಆಸ್ಥಾನ ವಿದುಷಿಗಳು -ಸರ್ವಪಲ್ಲಿ ಸಿಸ್ಟರ್ಸ್ ವಿದುಷಿ ಡಾ.ಶ್ರೀಯ, ಡಾ.ರಾಜಲಕ್ಷ್ಮಿ ಅವರಿಂದ ಕರ್ನಾಟಕ ಗಾಯನ ಗೋಷ್ಠಿ ನಡೆಯಲಿದೆ.

ಮೇ 27 ರಂದು ಬೆಳಗ್ಗೆ 8ಕ್ಕೆ ಶ್ರೀ ಚಕ್ರ ಪೂಜಾ, ನಂತರ ಪದ್ಮಾವತಿ ಅಭಿಷೇಕ, ಲಕ್ಷ್ಮೀ ಹೋಮ ಶ್ರೀ ದತ್ತ ವೆಂಕಟೇಶ್ವರ ದೇವಾಲಯದಲ್ಲಿ, ಮಧ್ಯಾಹ್ನ 3ಕ್ಕೆ ಕಲ್ಪನಾ ಸುಮಂತ್ ರಾಘವೇಂದ್ರ ಅವರಿಂದ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ, ಸಂಜೆ 5ಕ್ಕೆ ಹನುಮದ್ ವಾಹನ ಉತ್ಸವ, ಸಂಜೆ 7ಕ್ಕೆ ವಿದ್ವಾನ್ ಕುನ್ನಕುಡಿ ಬಾಲಮರಳಿ ಕೃಷ್ಣ ಅವರಿಂದ ಕರ್ನಾಟಕ ಸಂಗೀತ ಜರುಗಲಿದೆ.

ಮೇ 28 ರಂದು ಬೆಳಗ್ಗೆ 8ಕ್ಕೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಶ್ರೀ ಚಕ್ರ ಪೂಜೆ, 9ಕ್ಕೆ ಸಾಲಿಗ್ರಾಮ ಪೂಜೆ, ಮಧ್ಯಾಹ್ನ 3ಕ್ಕೆ ಜುಗಲ್‌ಬಂದಿ ಸಂಗೀತ ಕಾರ್ಯಕ್ರಮ(ವಯೋಲಿನ್- ವಿದ್ವಾನ್ ಪಿರಿ ತ್ಯಾಗರಾಜು, ಕೊಳಲು ವಾದನ-ಪ್ರಮೋದ್ ಉಮಾಪತಿ), ಸಂಜೆ 5ಕ್ಕೆ ಗರುಡ ವಾಹನ ಉತ್ಸವ, ಸಂಜೆ 7ಕ್ಕೆ ವಿದ್ವಾನ್ ಶ್ರೀರಾಮ ಜೊನ್ನಲಗಡ್ಡ ಮತ್ತು ಬಳಗದಿಂದ ಕರ್ನಾಟಕ ಗಾಯನ ಗೋಷ್ಠಿ ನಡೆಯಲಿದೆ.

ಮೇ 29 ರಂದು ಬೆಳಗ್ಗೆ 8ಕ್ಕೆ ಶ್ರೀಚಕ್ರ ಪೂಜೆ, 9 ಗಂಟೆಗೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಧನ್ವಂತರಿ ಪೂಜೆ, ಧನ್ವಂತರಿ ಹೋಮ, ಮಧ್ಯಾಹ್ನ 3ಕ್ಕೆ ವಿದ್ವಾನ್ ವಿಕಾಸ್ ಮೈತ್ರೇಯ ಅವರಿಂದ ಕರ್ನಾಟಕ ಸಂಗೀತ, ಸಂಜೆ 5ಕ್ಕೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಡೋಲೋತ್ಸವ, ಸಂಜೆ 7ಕ್ಕೆ ಸತ್ಯನಾರಾಯಣ ರಾಜು ಅವರಿಂದ ರಾಮ ಕಥಾ ವಿಷಯಾಧಾರಿತ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ.

ಮೇ 30 ರಂದು ಬೆಳಗ್ಗೆ 9ಕ್ಕೆ, ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ಬ್ರಹ್ಮೋತ್ಸವ ಮಹಾ ಅಭಿಷೇಕ, ಮಧ್ಯಾಹ್ನ 3ಕ್ಕೆ ವಿದುಷಿ ಡಾ.ರಮಾಪ್ರಭಾ ಯರ್ರಮಿಲ್ಲಿ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ಸಂಜೆ 7ಕ್ಕೆ ಸಪ್ತರ್ಷಿ ಸರೋವರದಲ್ಲಿ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಗೆ ತೆಪ್ಪೋತ್ಸವ ನೆರವೇರಲಿದೆ.

ಮೇ 31 ಬೆಳಗ್ಗೆ 7ಕ್ಕೆ ಶ್ರೀ ದತ್ತ ಹ್ಯೂಮನ್ ಸರ್ವಿಸಸ್ ಸ್ವಯಂಸೇವಕರ ಮೆರವಣಿಗೆ, 8ಕ್ಕೆ ಶ್ರೀ ಚಕ್ರಪೂಜೆ, 9 ಗಂಟೆಗೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ಶಾಂತಿ ಕಲ್ಯಾಣ ಮಹೋತ್ಸವ, ಬೆಳಿಗ್ಗೆ 10 ಗಂಟೆಗೆ ಚಾರ್ಟಿಗಳ ವಿತರಣೆ, ಸಂಜೆ 5ಕ್ಕೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ರುದ್ರಾಕ್ಷ ರಥ ಉತ್ಸವ, ಸಂಜೆ 7ಕ್ಕೆ ವಿದ್ವಾನ್ ರವೀಂದ್ರ ಗುರುರಾಜ್ ಕಟೋಟಿ ಅವರಿಂದ ವಿಶೇಷ ಹಾರ್ಮೋನಿಯಂ ಕಾರ್ಯಕ್ರಮ ಇರಲಿದೆ.

ಜೂನ್ 1 ಬೆಳಿಗ್ಗೆ 7ಕ್ಕೆ ದತ್ತಾತ್ರೇಯ, ಮೃತ್ಯುಂಜಯ ಮತ್ತು ಆಯುಷ್ಯ ಹೋಮ, ಶ್ರೀಚಕ್ರ ಪೂಜೆ, 8 ಗಂಟೆಗೆ ಶ್ರೀ ಚಕ್ರ ಪೂಜಾ, 9ಕ್ಕೆ ಔದುಂಬರ ಸಿಂಹಾಸನ ಆದಿರೋಹನಂ ಸಮರ್ಪಣ, ಸಂಜೆ 7 ಕ್ಕೆ ಆಶ್ರಮ ಭಜನಾ ಮಂಡಳಿಯಿಂದ ದತ್ತ ಪ್ರಭು ಸ್ಮರಣ ಭಜನೆಗಳು ನಡೆಯಲಿದೆ.




ಮೇ 26ರಂದು ಬಿರುದು ಪ್ರದಾನ

ವಿಷ್ಣುಭಟ್ಟ ಲಕ್ಷ್ಮೀನಾರಾಯಣ ಘನಪಾಠಿ ಅವರಿಗೆ ವೇದ ನಿಧಿ, ಜಿಎಸ್‌ವಿ ದತ್ತಾತ್ರೇಯ ಮೂರ್ತಿ ಅವರಿಗೆ ಶಾಸ್ತ್ರ ನಿಧಿ, ಪಂ.ವಿನಾಯಕ ತೊರವಿ ಹಾಗೂ ವಿದ್ವಾನ್ ಶಶಾಂಕ್ ಸುಬ್ರಮಣ್ಯಂ ಅವರಿಗೆ ನಾದ ನಿಧಿ, ವಿದುಷಿ ಟಿ.ಎಸ್.ಶ್ರೀಲಕ್ಷ್ಮಿ ಅವರಿಗೆ ನಾಟ್ಯ ನಿಧಿ, ಕೃಷ್ಣ ಮೂರ್ತಿ ಅವರಿಗೆ ಆಸ್ಥಾನ ಶಿಲ್ಪಿ ಸೇರಿದಂತೆ ಚೈತನ್ಯ ಅರ್ಚನ ದತ್ತ ಪೀಠದ ಬಿರುದುಗಳನ್ನು ಪ್ರದಾನ ಮಾಡಲಾಗುತ್ತದೆ.

ಅಲ್ಲದೆ, ಜಯಲಕ್ಷ್ಮಿ ಪುರಸ್ಕಾರವನ್ನು ಶ್ರೀಮತಿ ಗಂಗಾವರಂ ವೇದಾವತಿ ಮತ್ತು ಶ್ರೀಮತಿ ಗೀತಾ ಪುಂಜಾಲ ಅವರಿಗೆ, ದತ್ತ ಪೀಠ ಬಂಧು ಬಿರುದನ್ನು ಕಮಲ್ ಕಪೂರ್, ಕಂಟೇಟಿ ಶ್ರೀನಿವಾಸ್ ಹಾಗೂ ಎಸ್ ನಾಗರಾಜ ಅವರಿಗೆ, ಸಸ್ಯ ಬಂಧು ಬಿರುದನ್ನು ಶ್ರೀಮತಿ ಸುಚಿತಾ ರೆಡ್ಡಿ ಅವರಿಗೆ ಪ್ರದಾನ ಮಾಡಲಾಗುತ್ತದೆ.

ವಾರಭವಿಷ್ಯ



25.05.2025 ರಿಂದ 31.05.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ಕಟಕ, ಬುಧ - ವೃಷಭ, ಗುರು-ಮಿಥುನ, ಶುಕ್ರ-ಮೀನ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆದಿಗೆ ಶುಭ ಸುದ್ದಿ ಬಂದು ಮನಸ್ಸಿಗೆ ಸಮಾಧಾನ. ವ್ಯಾಪಾರ, ವ್ಯವಹಾರಗಳು ಲಾಭವನ್ನು ತಂದು ಕೊಡುವುದು. ಯಶಸ್ಸು, ಪ್ರಶಂಸೆಗಳು ಅರಸಿಕೊಂಡು ಬರಲಿವೆ. ಮನೋಕಾರಕ ಚಂದ್ರಗ್ರಹದ ಶುಭ ಸಂಚಾರದಿಂದ ನಿಮ್ಮ ಮನೋಸ್ಥೈರ್ಯವು ವೃದ್ಧಿಸಲಿದೆ. ಅಪರಿಚಿತ ವ್ಯಕ್ತಿಗಳಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಎಚ್ಚರಿಕೆ ಇರಲಿ.

ಶ್ರೀ ಸುಬ್ರಮಣ್ಯ ಆರಾಧನೆ. ಶುಭ ಸಂಖ್ಯೆ-3

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಈ ವಾರದಲ್ಲಿ ಶ್ರದ್ಧಾ ಪೂರ್ವಕವಾಗಿ ಮಾಡಿದ ಕೆಲಸಗಳಲ್ಲಿ ಯಶಸ್ಸು, ಇದಕ್ಕೆ ನಿಮ್ಮ ರಾಶಿಯಲ್ಲೇ ಉಂಟಾಗುವ ಉಚ್ಚ ಚಂದ್ರನ ಸಂಚಾರ ಪೂರಕವಾಗಿದೆ. ಸ್ಥಗಿತಗೊಂಡಿದ್ದ ಕೆಲಸಗಳಿಗೆ ಮರುಚಾಲನೆ ದೊರೆಯುವುದು. ಹಳೆಯ ಮಹಿಳಾ ಗೆಳತಿಯರ ಮಿಲನ ಮನಸ್ಸಿಗೆ ಮುದ ನೀಡಲಿದೆ. ನೂತನ ವಾಹನ ಖರೀದಿಯ ಯೋಗವಿದೆ. ವಾರಾಂತ್ಯಕ್ಕೆ ಸಾಲ ಮಾಡಬೇಕಾದ ಸಂದರ್ಭ ಉಂಟಾದೀತು.

ಶ್ರೀ ಚಾಮುಂಡೇಶ್ವರಿ ಪ್ರಾರ್ಥನೆ. ಶುಭ ಸಂಖ್ಯೆ-2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ವಾರದಲ್ಲಿ ಯಾವುದೇ ವಿಚಾರದಲ್ಲಿ ಆತುರದ ತೀರ್ಮಾನಗಳು ಬೇಡ. ವೈಯಕ್ತಿಕ ವಿಷಯಗಳಲ್ಲಿ ವಿಘ್ನಗಳು ಉಂಟಾದರೂ ಗುರಿ ಮುಟ್ಟುವಿರಿ. ಕೋರ್ಟು, ಕಚೇರಿಗಳಿಗೆ ಅಲೆದಾಟ ಹೆಚ್ಚಾಗುವುದು. ನ್ಯಾಯವಾದಿಗಳಿಗೆ ಹೊಸ ಕಕ್ಷಿಗಾರರು ದೊರಕುವರು. ಸರ್ಕಾರಿ ನೌಕರರು ಅಕ್ರಮ ಎಸಗಿ ಕಾನೂನಿನ ಕುಣಿಕೆಗೆ ಸಿಲುಕುವರು. ವಾರದ ಕಡೆಗೆ ಒಂದಷ್ಟು ಧನಲಾಭ, ಸೌಖ್ಯ.

ಶ್ರೀ ರಾಮಮಂತ್ರ ಜಪಿಸಿ. ಶುಭ ಸಂಖ್ಯೆ-5

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಅಂದುಕೊಂಡಿದ್ದೆಲ್ಲಾ ಆಗುವುದಿಲ್ಲ. ಹೊಂದಿಕೊಂಡು ಹೋಗುವುದು ಜಾಣತನ. ಖಾಸಗಿ ಕಂಪನಿ ಉದ್ಯೋಗಿಗಳಿಗೆ ಬೋನಸ್ ಇತ್ಯಾದಿ ಧನಲಾಭ. ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ವಾರಮಧ್ಯೆ ಹೊಸ ಮಿತ್ರರ ಪರಿಚಯವಾಗುವುದು. ಶ್ರೀಮತಿಯ ಆಸೆ ಈಡೇರಿಕೆಗೆ ಹಣ ವ್ಯಯ. ಅಷ್ಟಮ ಸ್ಥಿತ ರಾಹುವಿನಿಂದ ರಾಸಾಯನಿಕ ವಸ್ತು ಹಾಗೂ ಅಗ್ನಿ ಅವಘಡಗಳಿಂದ ಜಾಗೃತರಾಗಿರಿ.

ಶ್ರೀ ದುರ್ಗಾ ಸ್ತುತಿ. ಶುಭ ಸಂಖ್ಯೆ-6

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಆದಿಗೆ ಪರೋಪಕಾರ ಬುದ್ಧಿಯಿಂದ ಗೌರವ-ವಾಕ್ಚಾತುರ್ಯದಿಂದ ಎದುರಾಳಿಯ ಮನಸ್ಸನ್ನು ಗೆಲ್ಲುವಿರಿ. ಹೊಸ ಯೋಜನೆಗಳಿಗೆ ಕೈ ಹಾಕಲು ಗ್ರಹಾನುಕೂಲವಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಹತ್ತಿ, ಜವಳಿ, ಬೇಳೆ ಕಾಳು ವ್ಯಾಪಾರಗಳು ಭರಾಟೆಯಿಂದ ನಡೆದು, ಹೆಚ್ಚಿನ ಧನ ಲಾಭವಾಗುವುದು. ಸಹೋದರ ವರ್ಗದಲ್ಲಿ ವಿರಸಗಳು ಉಂಟಾಗದಂತೆ ನಡೆದುಕೊಳ್ಳಿ.

ಶ್ರೀ ರಾಜರಾಜೇಶ್ವರಿ ಅಷ್ಟಕಪಠಿಸಿ. ಶುಭ ಸಂಖ್ಯೆ-1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಆದಿಗೆ ಸರ್ವಜನ ಪ್ರಿಯತೆಯನ್ನು ಗಳಿಸುವಿರಿ. ಎದುರಾಳಿಗಳನ್ನು ಸಮರ್ಥವಾಗಿ ಎದುರಿಸಲು ನಿಮ್ಮ ಆತ್ಮವಿಶ್ವಾಸ ಉನ್ನತ ಮಟ್ಟದ್ದಾಗಿರುತ್ತದೆ. ಆಸ್ತಿ ವಿಚಾರಗಳು ಗಣ್ಯ ವ್ಯಕ್ತಿಗಳ ಮಧ್ಯಸ್ಥಿಕೆಯಿಂದ ಅನುಕೂಲವಾಗುವುದು. ಬ್ಯಾಂಕ್ ಸಾಲ ಪ್ರಯತ್ನದಲ್ಲೂ ಸಫಲತೆಯನ್ನು ಹೊಂದುವಿರಿ. ಮನೆಯಲ್ಲಿ ಶುಭ ಕಾರ್ಯಕ್ಕೆ ನಾಂದಿ. ವಾರದ ಕಡೆಗೆ ಕೆಲವು ಒತ್ತಡಭರಿತ ಘಟನೆಗಳು ಎದುರಾಗುವುದು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-9

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ವಾರ ಎದುರಾಗುವ ಸಂಕಟಗಳನ್ನು ಮೀರಿ ನಿಲ್ಲುವಿರಿ. ಗ್ರಹಾನುಕೂಲವಿದೆ. ಕಬ್ಬಿಣ ಕಾದಾಗ ತಟ್ಟಿಕೊ ಎಂಬಂತೆ ಕಾರ್ಯತತ್ಪರರಾಗಿ, ದೈನಂದಿನ ಕೆಲಸಗಳು ನೀವಂದುಕೊಂಡಂತೆ ಸಾಗುವುದು. ಸರ್ಕಾರಿ ನೌಕರರಿಗೆ ವರ್ಗಾವಣೆಯೊಂದಿಗೆ ವಾಸ್ತವ್ಯ ಬದಲಾವಣೆ. ಎಲೆಕ್ಟ್ರಿಕಲ್ ಪದಾರ್ಥ ವ್ಯಾಪಾರಿಗಳಿಗೆ ಭರಪೂರ ವ್ಯಾಪಾರ ಹಾಗೂ ಧನಲಾಭವಾಗುವುದು. ವಾರಾಂತ್ಯಕ್ಕೆ ಪಿಕ್‌ನಿಕ್ ಮೂಡ್.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-7

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ವಾರದಾರಂಭಕ್ಕೆ ಆರೋಗ್ಯ ಮರುಕಳಿಸುವುದು, ಮಾನಸಿಕ ಸ್ವಾಸ್ಥ್ಯ ಪ್ರಿಯ ವಾರ್ತೆ ಬರುವುದು. ನಿಮ್ಮ ಹರಕೆಗಳನ್ನು ಪೂರೈಸುವ ಸಮಯ ಬಂದಿದೆ. ವಾರದ ಉತ್ತರಾರ್ಧಕ್ಕೆ ನೋವು-ನಲಿವುಗಳನ್ನು ಸಮಚಿತ್ತರಾಗಿ ಸ್ವೀಕರಿಸಿ. ಸ್ತ್ರೀಯರ ಸಹವಾಸ ಅಪಖ್ಯಾತಿಗೆ ಹೇತುವಾಗುವುದು, ಸಮಾಜದಲ್ಲಿ ನಿಮ್ಮ ಪ್ರತಿಷ್ಠೆಗೆ ಧಕ್ಕೆ ಉಂಟಾಗಬಹುದು. ವೃತ್ತಿಪರ ವ್ಯವಹಾರಗಳಲ್ಲಿ ಹೊಸ ಸಮಸ್ಯೆಗಳು ಉದ್ಭವಿಸುತ್ತವೆ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-1

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸದ್ಯದ ಘಟನೆಗಳು ನಿಮಗೆ ಅನುಕೂಲಕರವಾಗಿದೆ. ಎನ್‌ಕ್ಯಾಶ್ ಮಾಡಿಕೊಳ್ಳಲು ಹಿಂದೆ ಬೀಳದಿರಿ. ಮಕ್ಕಳ ಸಾಧನೆಯಿಂದ ಹರ್ಷಚಿತ್ತರಾಗಿರುವಿರಿ. ಐಹಿಕ ಸುಖ ಭೋಗಗಳು ನಿಮ್ಮ ಪಾಲಿಗಿದೆ. ಮನೆಯಲ್ಲಿ ಶುಭ ಕಾರ್ಯಕ್ಕೆ ನಾಂದಿ. ಪ್ರೇಮ ಪ್ರಸಂಗಗಳಲ್ಲಿ ಸಂತಸ ದೊರೆಯುವುದು. ಆಧ್ಯಾತ್ಮ ಅಧ್ಯಯನದ ಬಗ್ಗೆ ಒಲವು ತೋರುವಿರಿ. ವಾರದ ಕಡೆಗೆ ಸಣ್ಣ ಪುಟ್ಟ ಆರೋಗ್ಯ ಸಮಸ್ಯೆ ಕಾಡಬಹುದು.

ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ-4

ಮಕರ (ಬೊ.ಜ.ಜಿ.ಶಿ.ಖು.ಶೆ.ಶೊ.ಗ.ಗಿ.)

ಕೈ ಕೆಸರಾದರೆ ಬಾಯಿ ಮೊಸರು, ಯಾವುದೂ ತನ್ನಂತೆ ತಾನೇ ಕೈಗೂಡುವುದಿಲ್ಲ. ಕೃಷಿ ಮಾಡುವುದರಿಂದ ದುರ್ಭಿಕ್ಷವಿಲ್ಲ. ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲು ನಿಮ್ಮ ರಾಶ್ಯಾಧಿಪತಿ ಶನಿದೇವನ ಕೃಪೆಯಿದೆ. ನೂತನ ಉದ್ಯೋಗ, ಗುಡಿ ಕೈಗಾರಿಕೆ ಆರಂಭಿಸಬಹುದು. ಅಧಿಕಾರಿಗಳ ಭೇಟಿಯಿಂದ ನಿಮ್ಮ ಕೆಲಸ ಹಗುರವಾಗುವುದು. ರಾಜಕಾರಣಿಗಳಿಗೆ ಅಪವಾದ ಹಾಗೂ ಜನ ವಿರೋಧ ಉಂಟಾಗುವುದು.

ಶ್ರೀ ಶನೇಶ್ವರ ಮೂಲಮಂತ್ರ ಜಪಿಸಿ. ಶುಭ ಸಂಖ್ಯೆ-5

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆದಿಗೆ ಬಂಧು ಮಿತ್ರರ ಸಹಾಯದಿಂದ ಕೌಟುಂಬಿಕ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಬಹು ನಿರೀಕ್ಷಿತ ಫಲ ಮಧುರವೇ. ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನಕ್ಕೆ ಪಾತ್ರರಾಗುವಿರಿ. ವಿವಾಹಾಕಾಂಕ್ಷಿಗಳಿಗೆ ನಿಶ್ಚಿತಾರ್ಥ ಇತ್ಯಾದಿ ನಡೆಯುವುದು. ನಿಮ್ಮ ರಾಶಿಸ್ಥಿತ ರಾಹುವಿನಿಂದ ದುಡುಕಿನ ಪರಿಣಾಮ ಅನಾವಶ್ಯಕ ತಪ್ಪು ಘಟನೆಗಳು ನಡೆದು ಹೋಗುವುದು. ಆತುರ ಪಡದೆ ವಾಹನ ಚಲಿಸಿ.

ಶ್ರೀ ವಿಷ್ಣುನಾಮ ಸ್ಮರಣೆ, ಶುಭ ಸಂಖ್ಯೆ-8

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ಗುರುವಿಲ್ಲದೆ ಗುರಿ ಮುಟ್ಟಲಾಗದು, ಸರಿಯಾದ ಮಾರ್ಗ ತೋರಲು ಗುರು ಬೇಕು. ಅಷ್ಟಿಷ್ಟು ಧನ ಸಂಚಯವಾಗುವುದು. ಎದುರಾಗುವ ಸಮಸ್ಯೆಗಳಿಗೆ ಸ್ವಂತ ಬುದ್ಧಿಯಿಂದ ಪರಿಹಾರವನ್ನು ಕಂಡುಕೊಳ್ಳುವಿರಿ. ಆಸ್ತಿ ವಿಲೇವಾರಿ ವಿಷಯದಲ್ಲಿ ಕಾನೂನು ತಜ್ಞರ ಸಲಹೆ ಪಡೆಯಿರಿ. ಅನಿವಾರ್ಯವಲ್ಲದ ಕೆಲಸಗಳಿಗೆ ಕೈ ಹಾಕದಿರಿ. ವಾರದ ಕಡೆಗೆ ಆಕಸ್ಮಿಕ ಧನಾಗಮ. ಕುಟುಂಬದ ಹಿತೈಷಿಗಳಿಂದ ಯತ್ನ ಕಾರ್ಯಗಳಲ್ಲಿ ಯಶಸ್ಸು

ಶ್ರೀ ರಾಮನಾಮ ಜಪ. ಶುಭ ಸಂಖ್ಯೆ-6


ಮಕ್ಕಳ ಚಿತ್ರಕಥೆ

ಕಣ್ಣಲ್ಲಿ ನೀರೂರಿಸಿದ ಪುಟ್ಟ ಬಾಲಕಿ ನೀಡಿದ ಉತ್ತರ!


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಂದು ಸರ್ಕಾರಿ ಶಾಲೆಗೆ ಭೇಟಿ ನೀಡಿದ ಹಿರಿಯ ಸಮಾಜ ಸೇವಕರೊಬ್ಬರು ಆ ಶಾಲಾ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವಾಗ "ನೀವು ಜೀವನದಲ್ಲಿ ಏನಾಗಬೇಕೆಂದಿದ್ದೀರಿ..?" ಎಂದು ಪ್ರಶ್ನಿಸಿದರು.




ಒಬ್ಬ ವಿದ್ಯಾರ್ಥಿ ಹೇಳಿದ, "ನಾನು ಭಾರೀ ಸಾಹುಕಾರನಾಗಬೇಕೆಂದಿದ್ದೇನೆ. ಏಕೆಂದರೆ ನಾವು ತುಂಬ ಬಡವರು. ನಮ್ಮ ಬಳಿ ದುಡ್ಡಿಲ್ಲ. ಪೆನ್ಸಿಲ್ ಬೇಕೆಂದರೂ ಕೊಳ್ಳಲು ದುಡ್ಡಿಲ್ಲ. ದುಡ್ಡಿದ್ದರೆ ನಾವು ಬೇಕಾದ್ದನ್ನೆಲ್ಲಾ ಕೊಂಡುಕೊಳ್ಳಬಹುದು" ಎಂದ.




ಇಬ್ಬರು ಹುಡುಗಿಯರು "ನಾವು ಕಲ್ಪನಾ ಚಾವ್ಲಾ, ಸುನೀತಾ ವಿಲಿಯಮ್ಸ್ ಥರ ಆಗಬೇಕು. ಖಗೋಳ ಸುತ್ತಬಹುದು" ಎಂದರು. ಹಾಗೆಯೇ ಇನ್ನುಳಿದ ವಿದ್ಯಾರ್ಥಿಗಳು "ಇಂಜನಿಯರ್, ಡಾಕ್ಟರ್, ಪೈಲಟ್, ಉದ್ಯಮಿ ಆಗಬೇಕು". ಹೀಗೆ ಹತ್ತಾರು ಉತ್ತರಗಳು ಬಂದವು.



ಆದರೆ, ತರಗತಿಯ ಒಬ್ಬ ಹುಡುಗಿ "ಚೆನ್ನಾಗಿ ಓದಿದ ಮೇಲೆ ಕ್ಯಾನ್ಸರ್‌ಗೆ ಔಷಧಿ ಕಂಡುಹಿಡಿಯಬೇಕೆಂದಿದ್ದೇನೆ' ಎಂದಾಗ ಎಲ್ಲರಿಗೂ ಆಶ್ಚರ್ಯ. ಆ ಚಿಕ್ಕ ಹುಡುಗಿಗೆ ಕ್ಯಾನ್ಸರ್ ಬಗ್ಗೆ ಹೇಗೆ ಗೊತ್ತು? ಆಕೆಯೇ ಮುಂದುವರೆದು"ನಾನು, ನಮ್ಮ ಅಪ್ಪ-ಅಮ್ಮನಿಗೆ ಒಬ್ಬಳೇ ಮಗಳು. ಒಂದು ವರ್ಷದ ಹಿಂದೆ ನಮ್ಮಪ್ಪ ಕ್ಯಾನ್ಸರ್ ಬಂದು ತೀರಿಕೊಂಡರು".



ಆ ಪುಟ್ಟ ಹುಡುಗಿ ತನ್ನ ಮಾತನ್ನು ಮುಂದುವರೆಸುತ್ತಾ, "ನನ್ನ ತಾಯಿ ಅಲ್ಲಿ-ಇಲ್ಲಿ ಮನೆ, ಹೊಲದಲ್ಲಿ ಕೆಲಸ ಮಾಡಿ ನನ್ನನ್ನು ಸಾಕುತಿದ್ದರು. ಅವರ ಪರಿಶ್ರಮದಿಂದ ನಾನು ಶಾಲೆಗೆ ಬಂದು ಕಲಿಯುತ್ತಿದ್ದೆ. ಆದರೆ, ಇತ್ತೀಚೆಗಷ್ಟೇ ಅವರೂ ತೀರಿಕೊಂಡರು. ನಾನು ಅನಾಥೆಯಾದೆ. ಯಾರೋ ನನ್ನನ್ನು ಅನಾಥಾಶ್ರಮಕ್ಕೆ ಸೇರಿಸಿದ್ದಾರೆ".



"ನನಗೆ ಬಂದಂತಹ ಪರಿಸ್ಥಿತಿ ಬೇರೆಯವರಿಗೆ ಬರಬಾರದು. ನನ್ನ ತಂದೆ-ತಾಯಿ ಕ್ಯಾನ್ಸರ್ ರೋಗದಿಂದ ನರಳಿ... ನರಳಿ... ಸತ್ತದ್ದು ನನ್ನ ಕಣ್ಣಿಗೆ ಕಟ್ಟಿದಂತಿದೆ. ಹಾಗಾಗಿ ಕ್ಯಾನ್ಸ್‌ಗೆ ಔಷಧ ಕಂಡುಹಿಡಿಯಬೇಕೆಂದುಕೊಂಡಿದ್ದೇನೆ' ಎಂದಳು. ಇದನ್ನು ಕೇಳಿದ ಎಲ್ಲರ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಯಲಾರಂಭಿಸಿತು.

ನಾಳೆ ಹುಣಸೂರಲ್ಲಿ ತಿರಂಗ ಯಾತ್ರೆ



ಸೋಮವಾರ ನಡೆಯುವ ತಿರಂಗ ಯಾತ್ರೆಯ ಪೋಸ್ಟರ್ ಬಿಡುಗಡೆ.

ಹುಣಸೂರು, ಮೇ24– ಅಪರೇಷನ್ ಸಿಂಧೂರ ಹೆಸರಿನಲ್ಲಿ ದೇಶದ ಭದ್ರತೆ ಮತ್ತು ಸಾರ್ವಭೌಮತ್ವವನ್ನು ಎತ್ತಿ ಹಿಡಿದ ವೀರ ಯೋಧರಿಗೆ ಅಭಿನಂದನೆ ಸಲ್ಲಿಸುವ ಸಲುವಾಗಿ ಮೇ 26ರಂದು ಹುಣಸೂರಲ್ಲಿ ತಿರಂಗಯಾತ್ರೆಯನ್ನು ಹಮ್ಮಿಕೊಳ್ಳಲಾಗಿದ್ದು, ತಾಲೂಕಿನ ಎಲ್ಲಾ ಹಿಂದೂಪರ ಸಂಘಟನೆಗಳು, ಪ್ರತಿಯೊಂದು ಸಂಘ ಸಂಸ್ಥೆಗಳು, ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ನಗರ ಸಭೆ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿರಂಗ ಯಾತ್ರೆಯ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು, ಪಾಕಿಸ್ತಾನದ ಉಗ್ರಗಾಮಿಗಳನ್ನು ಸದೆ ಬಡಿದ ನಮ್ಮ ದೇಶದ ವೀರ ಯೋಧರನ್ನು ಗೌರವಿಸುವ ಉದ್ದೇಶದಿಂದ ಸೋಮವಾರ (ಮೇ.26)ಬೆಳಗ್ಗೆ 10.30ಕ್ಕೆ ಸಂವಿಧಾನ ವೃತ್ತದಿಂದ ತಿರಂಗ ಯಾತ್ರೆ ಆರಂಭವಾಗಿ ಕಲ್ಪತರು ಸರ್ಕಲ್, ಬಜಾರ್ ರಸ್ತೆ, ಜೆ.ಎಲ್.ಬಿ. ರಸ್ತೆ, ಕೋಟೆ ಸರ್ಕಲ್ ಮುಖಾಂತರ ನಗರಸಭೆ ಮೈದಾನದಲ್ಲಿ ಅಂತ್ಯಗೊಳ್ಳಲಿದೆ ಎಂದರು.

ತಿರಂಗ ಯಾತ್ರೆಯ ಉದ್ಘಾಟನೆಯನ್ನು ತಾಲೂಕಿನ ವಿವಿಧ ಮಠದ ಸ್ವಾಮೀಜಿಗಳು, ಧರ್ಮ ಗುರುಗಳು, ಸಂತರುಗಳ ಸಮ್ಮುಖದಲ್ಲಿ, ಶಾಸಕ ಜಿ.ಡಿ.ಹರೀಶ್ ಗೌಡ ಹಾಗೂ ಕೊಡಗು ಮತ್ತು ಮೈಸೂರು ಸಂಸದ ಯಧುವೀರ್ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ, ನೆರವೇರಿಸಲಿದ್ದಾರೆ. ತಾಲೂಕಿನ ಕೃಷಿ ಪತ್ತಿನ ಸಹಕಾರ ಸಂಘಗಳು, ಸಮಾಜಗಳ ಸಂಘಗಳು, ರೈತ ಬಾಂಧವರು, ಹಾಗೂ ನಾಗರಿಕರು ಭಾಗವಹಿಸಿ ತಿರಂಗ ಯಾತ್ರೆಯನ್ನು ಯಶಸ್ವಿಗೊಳಿಸಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ನಾರಾಯಣ್, ಕಾಂತರಾಜು, ದೇವರಾಜು, ಸತೀಶ್ ಕುಮಾರ್, ಪೆರುಮಾಳ್, ಬಿಳಿಕೆರೆ ಪ್ರಸನ್ನ ಉಪಸ್ಥಿತರಿದ್ದರು.

ನಂ.ಗೂಡು ಪಟ್ಟಣದ ಒಳ ಚರಂಡಿ ಸಮಸ್ಯೆ ಪರಿಹಾರಕ್ಕೆ ಕ್ರಮ

ಒಳ ಚರಂಡಿ ನೀರು ಸಂಸ್ಕರಣ ಘಟಕಕ್ಕೆ ಶಾಸಕ ದರ್ಶನ್ ಭೇಟಿ, ಪರಿಶೀಲನೆ

ನಂಜನಗೂಡು, ಮೇ 24– ನಂಜನಗೂಡು ಪಟ್ಟಣದ ಪ್ರಮುಖ ಸಮಸ್ಯೆಯಾದ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಿ ಸಾರ್ವಜನಿಕರಿಗೆ ಸೇವೆ ಒದಗಿಸಲು ಕ್ರಮವಹಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕಿನ ಮಹದೇವ ನಗರದ ಬಳಿ ಇರುವ ಒಳಚರಂಡಿ ನೀರು ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಗುರುವಾರ ವಿಧಾನಸಭೆಯಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿಯ ಸಭೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯ ಜೊತೆಗೆ ಕ್ಷೇತ್ರದಲ್ಲಿ ಒಳಚರಂಡಿ ವ್ಯವಸ್ಥೆಯ ಸಮಸ್ಯೆಯ ಬಗ್ಗೆ ಚರ್ಚೆ ನಡೆಸಿದ್ದು, ಈ ವೇಳೆ ನಂಜನಗೂಡು ಪಟ್ಟಣದ ಒಳಚರಂಡಿಯ ಕಾಮಗಾರಿ ಮುಗಿದು ನಗರಸಭೆಗೆ ಹಸ್ತಾಂತರಿಸಲಾಗಿದೆ ಎಂದು ಒಳಚರಂಡಿ ಮಂಡಳಿಯ ಅಧಿಕಾರಿಗಳು ತಿಳಿಸಿದರು.

ನಾನು ನಂಜನಗೂಡು ಕ್ಷೇತ್ರದಲ್ಲಿ 2006 ರಿಂದ ಒಳಚರಂಡಿ ಕಾಮಗಾರಿ ಕುಂಟುತ್ತಾ ಸಾಗಿದೆ, ಅಲ್ಲದೆ ತ್ಯಾಜ್ಯ ನೀರು ಸಂಸ್ಕರಣ ಘಟಕದಿಂದ ನೀರನ್ನು ಹೊರಹಾಕದ



ಒಳಚರಂಡಿ ನೀರು ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಶಾಸಕ ದರ್ಶನ್ ಧ್ರುವನಾರಾಯಣ್.

ಕಾರಣ ಪೈಪ್‌ಗಳ ಮೂಲಕ ವಾಪಸ್ ಆಗುತ್ತಿದೆ, ಅಲ್ಲದೆ ನಗರಸಭೆಗೆ ಒಳಚರಂಡಿ ವ್ಯವಸ್ಥೆ ಹಸ್ತಾಂತರವಾಗಿಲ್ಲ ಎಂದು ಮನವರಿಕೆ ಮಾಡಿಕೊಟ್ಟೆ, ಆದ್ದರಿಂದ ಕರ್ನಾಟಕ ಒಳಚರಂಡಿ ಮಂಡಳಿ ಕಾರ್ಯದರ್ಶಿಗಳು ಮುಖ್ಯ ಇಂಜಿನಿಯರ್ ಚಂದ್ರಪ್ಪ ಅವರನ್ನು ವೀಕ್ಷಣೆಗಾಗಿ ಕಳುಹಿಸುವ ಭರವಸೆ ನೀಡಿದ್ದರು.

ಅದರಂತೆ ಇಂದು ಒಳಚರಂಡಿ ಮಂಡಳಿ ಮುಖ್ಯ ಇಂಜಿನಿಯರ್ ಚಂದ್ರಪ್ಪ ರವರು ತಾಲೂಕಿನ ಮಹದೇವ ನಗರದ ಬಳಿ ಇರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ವೀಕ್ಷಣೆ ನಡೆಸಿ ಸಮಸ್ಯೆಗಳನ್ನು ಆಲಿಸಿದ್ದಾರೆ. ಯುಜಿಡಿ ಪೈಪ್ ಮೂಲಕ ನೀರು ವಾಪಸ್ ಆಗುತ್ತಿದ್ದು, ಅದನ್ನು ನಿವಾರಿಸಿ ಸಾರ್ವಜನಿಕರಿಗೆ ಒಳಚರಂಡಿ ಸೇವೆ ಒದಗಿಸಲು, ನಗರದ ಆರು ಜೋನ್‌ಗಳಲ್ಲಿ ನಗರಸಭಾ ಅಭಿಯಂತರರು ಮತ್ತು ಒಳಚರಂಡಿ ಮಂಡಳಿಯ ಅಭಿಯಂತರರು ಜಂಟಿ ಕಾರ್ಯಚರಣೆ ನಡೆಸಿ ಪರೀಕ್ಷೆ ನಡೆಸುವಂತೆ ಸೂಚಿಸಲಾಗಿದೆ, ಎರಡು ಇಲಾಖೆಯ ಅಧಿಕಾರಿಗಳು ಪ್ರತಿ ಸೋಮವಾರ ನಗರದ ಎಲ್ಲಾ ಜೋನ್‌ಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಪರೀಕ್ಷೆ ನಡೆಸಿ ಸಮಸ್ಯೆಯನ್ನು ಬಗೆಹರಿಸಿ ಸಾರ್ವಜನಿಕರಿಗೆ ಒಳಚರಂಡಿಯ ಸೇವೆ ಲಭ್ಯವಾಗುವಂತೆ ಕ್ರಮವಹಿಸಲಿದ್ದಾರೆ ಎಂದರು.

ಇನ್ನು ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಸಂಗ್ರಹವಾಗುವ ಸಂಸ್ಕರಣೆಗೊಂಡ ನೀರನ್ನು ಕೃಷಿಗೆ ಬಳಕೆ ಮಾಡಿಕೊಳ್ಳಲು ಯೋಜನೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಳೆದ ಬಾರಿ ಇಲ್ಲಿ ಸಂಸ್ಕರಣೆಗೊಂಡ ನೀರನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು ಕೃಷಿಗೆ ಬಳಕೆ ಮಾಡಲು ಯೋಗ್ಯವಾಗಿದೆ ಎಂದು ವರದಿ ಕೂಡ ಬಂದಿದೆ. ಆದ್ದರಿಂದ ಸಂಸ್ಕರಣ ಘಟಕದಿಂದ ಇಳಿಜಾರು ಇರುವ ಜಮೀನುಗಳಿಗೆ ನೀರನ್ನು ಪೈಪ್‌ಗಳ ಮೂಲಕ ಜಮೀನುಗಳಿಗೆ ಹರಿಯುವಂತೆ ಮಾಡಿ ನೀರನ್ನು ಕೃಷಿಗೆ ಬಳಕೆ ಮಾಡಿಕೊಳ್ಳಲು ಯೋಜನೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ, ಕಳೆದ 20 ವರ್ಷಗಳಿಂದಲೂ ತೀವ್ರ ಸಮಸ್ಯೆಯಾಗಿರುವ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಿ ಶೀಘ್ರದಲ್ಲೇ ಸಾರ್ವಜನಿಕರಿಗೆ ಸೇವೆದಗಿಸಲು ಕ್ರಮವಹಿಸಲಾಗುವುದು ಎಂದರು.

ನಗರ ಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ ನಗರಸಭೆಯ ಪ್ರತಿ ವಾರ್ಡ್‌ಗಳಿಗೆ ತೆರಳಿ ಅಧಿಕಾರಿಗಳು ಮತ್ತು ನಗರಸಭೆಯ ಸದಸ್ಯರ ಸಮ್ಮುಖದಲ್ಲಿ ಜೊತೆಗೂಡಿ ಒಳಚರಂಡಿ ಸಮಸ್ಯೆಗಳನ್ನು ಪರಿಹರಿಸಿ ಸಾರ್ವಜನಿಕರಿಗೆ ಸೇವೆ ಲಭ್ಯವಾಗುವಂತೆ ಮಾಡುವಂತೆ ಮಾಡಿ ನಂತರ ನಗರಸಭೆಗೆ ಹಸ್ತಾಂತರ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಸದಸ್ಯರಾದ ಪ್ರದೀಪ್, ಖಾಲಿದ್ ಅಹಮದ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ನಗರಸಭಾ ಆಯುಕ್ತ ವಿಜಯ್, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಬನ್ನೂರಿನಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟನೆ

ತಿ.ನರಸೀಪುರ, ಮೇ 24– ತಾಲೂಕಿನ ಬನ್ನೂರು ಪುರಸಭೆ ವ್ಯಾಪ್ತಿಯ 21ನೇ ವಾರ್ಡಿನಲ್ಲಿ ನಿರ್ಮಾಣವಾಗಿರುವ ಇಂದಿರಾ ಕ್ಯಾಂಟೀನ್ ಅನ್ನು ಪುರಸಭೆ ಅಧ್ಯಕ್ಷ ಕೃಷ್ಣೇಗೌಡ ಉದ್ಘಾಟಿಸಿದರು.

ಬನ್ನೂರಿನ ಎಂ.ಎಂ.ರಸ್ತೆಯಲ್ಲಿರುವ ಎಪಿಎಂಸಿ ಉಪ ಮಾರುಕಟ್ಟೆ ಆವರಣದಲ್ಲಿ ನಿರ್ಮಿಸಲಾಗಿರುವ ಇಂದಿರಾ ಕ್ಯಾಂಟೀನ್ ಉದ್ಘಾಟನೆ ಸಂಬಂಧ ನಡೆದ ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರು ಹಾಗೂ ಮುಖ್ಯಾಧಿಕಾರಿಗಳ ಸಮಕ್ಷಮದಲ್ಲಿ ಅಧ್ಯಕ್ಷರು ಕ್ಯಾಂಟೀನ್ ಉದ್ಘಾಟಿಸಿದರು.

ಮೈಸೂರು ಜಿಲ್ಲೆಯ 9 ನಗರ ಸ್ಥಳೀಯ ಸಂಸ್ಥೆ, ಪುರಸಭೆ ಹಾಗೂ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ 2ನೇ ಹಂತದಡಿ ನಿರ್ಮಿಸಲಾಗಿರುವ ಇಂದಿರಾ ಕ್ಯಾಂಟೀನ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಹಿನಕಲ್‌ನಲ್ಲಿ ಉದ್ಘಾಟನೆ ಮಾಡುತ್ತಿದ್ದಂತೆ, ಎಪಿಎಂಸಿ ಆವರಣದಲ್ಲಿ ಉದ್ಘಾಟನೆಯ ನೇರ ಪ್ರಸಾರ ವೀಕ್ಷಣೆ ಮಾಡಿ 21ನೇ ವಾರ್ಡಿನಲ್ಲಿ ನಿರ್ಮಿಸಲಾಗಿರುವ ಕ್ಯಾಂಟೀನ್ ಅನ್ನು ಪುರಸಭೆ ಅಧ್ಯಕ್ಷರು, ಸದಸ್ಯರೊಡಗೂಡಿ ಲೋಕಾರ್ಪಣೆಗೊಳಿಸಿದರು. ಈ ವೇಳೆ ಮಾತನಾಡಿದ ಪುರಸಭೆ ಅಧ್ಯಕ್ಷ ಕೃಷ್ಣೇಗೌಡ ರಾಜ್ಯ ಸರ್ಕಾರದ ಮಹತ್ವದ ಯೋಜನೆ ಇಂದಿರಾ ಕ್ಯಾಂಟೀನ್ ನಮ್ಮ ಪುರಸಭೆ ವ್ಯಾಪ್ತಿಯಲ್ಲಿ ಪೂರ್ಣಗೊಂಡು ಉದ್ಘಾಟನೆಯಾಗಿದೆ, ಕ್ಯಾಂಟೀನ್ ನಿಂದ ಪೌರ ಕಾರ್ಮಿಕರು, ಕೂಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು ಸೇರಿದಂತೆ ಎಲ್ಲ ವರ್ಗದ ಜನರಿಗೆ ಅನುಕೂಲವಾಗಲಿದೆ. ಯೋಜನೆ ಯಶಸ್ವಿಯಾಗಲು ನಮ್ಮ ಸಂಪೂರ್ಣ ಸಹಕಾರವಿದೆ. ಪುರಸಭೆ ವತಿಯಿಂದ ಇಂದಿರಾ ಕ್ಯಾಂಟೀನ್ ನಿರ್ಮಿಸಲು ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆ.



ಇಂದಿರಾ ಕ್ಯಾಂಟೀನ್ ಅನ್ನು ಪುರಸಭೆ ಅಧ್ಯಕ್ಷ ಕೃಷ್ಣೇಗೌಡ ಉದ್ಘಾಟಿಸಿದರು.

> **ಇಂದಿರಾ ಕ್ಯಾಂಟೀನ್‌ನಲ್ಲಿ ಬಡವರು, ಶ್ರಮಿಕರು ಹೀಗೆ ಎಲ್ಲರಿಗೂ ಕಡಿಮೆ ದರದಲ್ಲಿ ಉಪಹಾರ, ಊಟ ದೊರೆಯಲಿದೆ. ಯಾರೂ ಸಹ ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿದೆ, ಯೋಜನೆಯ ಸದುಪಯೋಗಕ್ಕೆ ಸಾರ್ವಜನಿಕರು ಮುಂದಾಗಬೇಕು, ಆಹಾರ ಪೂರೈಕೆ, ಗುಣಮಟ್ಟ, ಸ್ವಚ್ಛತೆ ಸೇರಿದಂತೆ ಯಾವುದೇ ಲೋಪದೋಷ ಕಂಡು ಬಂದರೆ ನಮ್ಮ ಗಮನಕ್ಕೆ ತಂದಲ್ಲಿ ಅದನ್ನು ಸರಿಪಡಿಸಿಕೊಳ್ಳಲು ಸಹಕಾರಿಯಾಗುತ್ತದೆ.**
>
> **–ಹೇಮಂತ್ ರಾಜು,**
> **ಮುಖ್ಯಾಧಿಕಾರಿ, ಬನ್ನೂರು ಪುರಸಭೆ**

ಪುರಸಭೆ ಸದಸ್ಯರಾದ ಸದಸ್ಯರುಗಳಾದ ಶಿವಣ್ಣ, ಮಹೇಶ್, ಲೋಕಾಂಬಿಕಾ, ಶೋಭಾ ಸತೀಶ್, ದಿವ್ಯಾ ಚಂದ್ರು, ಸೌಮ್ಯ ರಾಣಿ, ಹರೀಫ್, ಇರ್ಷಾದ್, ಅನಂತ ಮೂರ್ತಿ, ಚೆಲುವರಾಜು, ವಿಜಯ್, ನಂಜುಂಡಸ್ವಾಮಿ, ನಾಮ ನಿರ್ದೇಶನ ಸದಸ್ಯ ಮಹೇಶ್, ಶಿವು, ನಾಗರಾಜಚಾರ್ಯ, ಅರ್ಷದ್ ಆಲಿ, ಇಂಜಿನಿಯರ್ ಪುಟ್ಟಸ್ವಾಮಿ, ಪುಷ್ಪ, ವಿನುತಾ, ಪ್ರೇಮಾ, ನಸೀಮ್, ಸೌಮ್ಯಪ್ರಭ, ಆಕಾಶ್, ಲತಾ, ಕಾಂತರಾಜು, ಬಸವರಾಜು, ಹರೀಶ್, ಗುರು ಸೇರಿದಂತೆ ಪೌರ ಕಾರ್ಮಿಕರು ಹಾಜರಿದ್ದರು.

ಸರಗೂರಲ್ಲೂ ಇಂದಿರಾ ಕ್ಯಾಂಟಿನ್ ಉದ್ಘಾಟನೆ

ಸರಗೂರು: ಪಟ್ಟಣದ ಮಹಾವೀರ ಸರ್ಕಲ್ ಬಳಿಯಿರುವ ಪ್ರವಾಸಿ ಮಂದಿರದ ಆವರಣದಲ್ಲಿ ನಿರ್ಮಿಸಿರುವ ಇಂದಿರಾ ಕ್ಯಾಂಟಿನ್‌ನನ್ನು ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು ಕಡಿಮೆ ದರದಲ್ಲಿ ಊಟ ತಿಂಡಿ ತಿನಿಸುಗಳು ಸಾರ್ವಜನಿಕರಿಗೆ ಸಿಗಬೇಕು. ಯಾರೂ ಹಸಿವಿನಿಂದ ಬಳಲಬಾರದು ಎಂಬ ದೃಷ್ಟಿಯಿಂದ ಸರ್ಕಾರ ಪ್ರತಿಯೊಂದು ತಾಲೂಕು ಕೇಂದ್ರಗಳಲ್ಲೂ ಇಂದಿರಾ ಕ್ಯಾಂಟಿನ್ ಆರಂಭಿಸಿದ್ದು ಜನ ಮೆಚ್ಚುಗೆಗೆ ಪಾತ್ರವಾಗಿದೆ. ಸರ್ವ ಸದಸ್ಯರು ಹಾಗೂ ಮುಖ್ಯಾಧಿಕಾರಿಗಳು, ಆಡಳಿತ ವರ್ಗ ಹೆಚ್ಚಿನ ಶ್ರಮ ವಹಿಸಿದ್ದರಿಂದ ಇಂದು ಇಂದಿರಾ ಕ್ಯಾಂಟಿನ್ ಉದ್ಘಾಟನೆಯಾಗಿದೆ ಎಂದು ತಿಳಿಸಿದರು.

ಪಟ್ಟಣ ಪಂಚಾಯಿತಿ ಸದಸ್ಯ ಶ್ರೀನಿವಾಸ್ ಮಾತನಾಡಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಎಸ್.ಕೆ.ಸಂತೋಷ್ ಕುಮಾರ್, ಮಾತನಾಡಿ ಸರ್ಕಾರದ ಆದೇಶದಂತೆ ಇಂದು ಇಂದಿರಾ ಕ್ಯಾಂಟೀನ್ ಉದ್ಘಾಟನೆಯಾಗಿದ್ದು, ಮುಖ್ಯವಾಗಿ ತಾಲೂಕಿನ ಶಾಸಕರು ಉದ್ಘಾಟಿಸಬೇಕಿತ್ತು. ಮೈಸೂರಿನಲ್ಲಿ 9 ಕಡೆ ಇಂದಿರಾ ಕ್ಯಾಂಟೀನ್ ಉದ್ಘಾಟನೆಯಲ್ಲಿ ಬಾಗವಹಿಸುವ ಉದ್ದೇಶದಿಂದ ಅವರ ಅನುಪಸ್ಥಿತಿಯಲ್ಲಿ ಉದ್ಘಾಟಿಸಲಾಗಿದೆ, ಮೊದಲ ದಿನ ಬಿಸಿಬೇಳೆ ಬಾತ್ ಹಾಗೂ ಕೇಸರಿ ಬಾತ್ ಉಚಿತವಾಗಿ ನೀಡಲಾಗಿದೆ, ಸೋಮವಾರದಿಂದ ಎಂದಿನಂತೆ ಬೆಳಗ್ಗೆ 5.30 ರಿಂದ 10.30 ವರೆಗೂ 5 ರೂ ದರದಲ್ಲಿ ಉಪಹಾರ ಮಧ್ಯಾಹ್ನ 12.30 ರಿಂದ 2.30 ಗಂಟೆ ಹಾಗೂ ಸಂಜೆ 6.30 ರಿಂದ 8.30 ಗಂಟೆಯವರೆಗೆ 10 ರೂ ದರದಲ್ಲಿ ಊಟ ಸಿಗಲಿದೆ, ಇದರಿಂದ ಬಡವರಿಗೆ ಅನುಕೂಲವಾಗಲಿದೆ ಎಂದರು.



ಇಂದಿರ ಕ್ಯಾಂಟಿನ್ ಉದ್ಘಾಟಿಸಿದ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್

ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಶ್ರೀನಿವಾಸ್, ವಿನಾಯಕ ಪ್ರಸಾದ್, ನೂರಾಳಸ್ವಾಮಿ, ಸಣ್ಣತಾಯಮ್ಮ, ಚಲುವಕೃಷ್ಣ, ಮುಖಂಡರಾದ ರಮೇಶ್, ರಾಮು, ಸ್ವಾಮಿ, ಅಧಿಕಾರಿಗಳಾದ ಪಳನಿ ಸ್ವಾಮಿ, ಶಿವಪ್ರಸಾದ್, ಅರುಣಾ ಆರಾಧ್ಯ, ಅರ್ಚನಾ, ಅನಿತಾ ಕುಮಾರಿ, ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮರು ಮೌಲ್ಯಮಾಪನದಲ್ಲಿ 622 ಅಂಕ ಪಡೆದ ನಿವೃತ್ತ ಯೋಧನ ಪುತ್ರ



622 ಅಂಕ ಪಡೆದ ಜೀವನ್ ಗೌಡ ಅವರನ್ನು ಅಭಿನಂದಿಸಿದ ಸಂದರ್ಭ.

ಹೆಚ್.ಡಿ.ಕೋಟೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ ನಿವೃತ್ತ ಯೋಧ ಬಿ. ಲಿಂಗೇಶ್ ಗೌಡ ಅವರ ಪುತ್ರ, ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಜೀವನ್ ಎಲ್. ಗೌಡ 622 ಅಂಕಗಳನ್ನು ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಹೆಚ್.ಡಿ.ಕೋಟೆ ಪಟ್ಟಣದಲ್ಲಿರುವ ಸರ್ಕಾರಿ ಆದರ್ಶ ವಿದ್ಯಾನಿಲಯದ ಶಾಲೆಯ ವಿದ್ಯಾರ್ಥಿನಿ ನಮನ 2024 –25 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 618 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದರು, ನಂತರ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಜೀವನ್.ಎಲ್.ಗೌಡ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 614 ಅಂಕಗಳನ್ನ ಪಡೆದು ಕೊಂಡಿದ್ದು ನಂತರ ಸಮಾಜ ವಿಜ್ಞಾನ ವಿಷಯದಲ್ಲಿ ಮರುಮೌಲ್ಯಮಾಪನದಿಂದ 8 ಅಂಕಗಳು ಹೆಚ್ಚು ಪಡೆದು 622 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ನಾಲ್ಕನೇ ಸ್ಥಾನ ಹಾಗೂ ತಾಲೂಕಿಗೆ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಅನಂತರಾಜು ಅವರು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮುಖ್ಯಶಿಕ್ಷಕಿ ನಂದಿನಿ, ಶಿಕ್ಷಣ ಸಂಯೋಜಕ ಕೃಷ್ಣಮೂರ್ತಿ, ಮುಖ್ಯ ಶಿಕ್ಷಕ ಎ.ಸಿ.ಬೈರಪ್ಪ, ದೈಹಿಕ ಶಿಕ್ಷಣ ನಿರ್ದೇಶಕ ಬಿ.ಕಲ್ಲೇಶ್ ಗೌಡ, ಶಿಕ್ಷಕರುಗಳಾದ ಸ್ವಾಮಿ ನಾಯಕ, ಪ್ರತಿಮ, ಹರೀಶ್, ರಮೇಶ, ದೇವರಾಜ, ಕೈಸರ್ ಪಾಷ, ಶೈಲಾ ಹಾಜರಿದ್ದರು.

ವ್ಯಕ್ತಿ ನಾಪತ್ತೆ



ನಂಜನಗೂಡು: ಹುಣಸನಾಳು ಗ್ರಾಮದ ನಿಂಗಶೆಟ್ಟಿ(55) ಮೇ 15 ರಂದು ಮನೆಯಿಂದ ಹೊರ ಹೋದವರು ವಾಪಸ್ ಮನೆಗೆ ಬಾರದೆ ಕಾಣೆಯಾಗಿದ್ದಾರೆ. ನಿಂಗಶೆಟ್ಟಿ ಅವರ ಬಗ್ಗೆ ಸುಳಿವು ಸಿಕ್ಕಿದವರು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ (08221–226259) ಮಾಹಿತಿ ನೀಡುವಂತೆ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸುನಿಲ್ ಕುಮಾರ್ ಮನವಿ ಮಾಡಿದ್ದಾರೆ.

ಹುಣಸೂರು ನಗರಸಭಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿಗೆ ಸನ್ಮಾನ

ಹುಣಸೂರು, ಮೇ 24– ಹುಣಸೂರು ನಗರಸಭಾ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಗಣೇಶ್ ಕುಮಾರಸ್ವಾಮಿ ಅವರನ್ನು ಶನಿವಾರ ಹುಣಸೂರು ಪ್ರಗತಿಪರ ಸಂಘಟನೆಗಳ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ ಹುಣಸೂರು ತಾಲೂಕು ಸಾಮಾಜಿಕ ನ್ಯಾಯದ ಹರಿಕಾರರಾದ ಡಿ. ದೇವರಾಜ ಅರಸು ಅವರ ತವರೂರಾಗಿದ್ದು, ಈ ನೆಲದಲ್ಲಿ ಗಣೇಶ್ ಕುಮಾರಸ್ವಾಮಿಯವರು ಹುಣಸೂರು ನಗರಸಭಾ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಸಾಮಾಜಿಕ ನ್ಯಾಯದ ಪರಿಕಲ್ಪನೆಯಾಗಿದೆ. ಇವರನ್ನು ಆಯ್ಕೆ ಮಾಡಲು ಶ್ರಮಿಸಿದ ತಾಲೂಕಿನ ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ನಗರಸಭಾ ಎಲ್ಲಾ ಸದಸ್ಯರುಗಳಿಗೆ ಜನತೆಯ ಪರವಾಗಿ ಅಭಿನಂದಿಸುತ್ತೇವೆ ಎಂದರು.

ಗಣೇಶ್ ಕುಮಾರಸ್ವಾಮಿ ಅವರು ಪಟ್ಟಣದಲ್ಲಿ ವಾಸವಾಗಿರುವ ನಿವೇಶನ ರಹಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡಬೇಕು. ಮತ್ತು ನಗರದ ತಹಸೀಲ್ದಾರ್ ಕಚೇರಿಯ ಪಕ್ಕದಲ್ಲಿರುವ ಸ್ಮಶಾನಕ್ಕೆ ಸರಿಯಾದ ಮೂಲ ಸೌಲಭ್ಯಗಳನ್ನು, ಕಲ್ಪಿಸಬೇಕು ಎಂದರು.



ನಗರಸಭಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ಅವರನ್ನು ಹುಣಸೂರು ಪ್ರಗತಿಪರ ಸಂಘಟನೆಗಳ ವತಿಯಿಂದ ಸನ್ಮಾನಿಸಲಾಯಿತು.

ರಾಜ್ಯ ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ ಹುಣಸೂರು ನಗರವನ್ನು ಹಸಿರೀಕರಣ ಮಾಡಲು ಪ್ರತಿಯೊಬ್ಬರು ಮನೆಯ ಮುಂದೆ ಸಸಿಗಳನ್ನು ನೆಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು ಮತ್ತು ನಗರದ ರಸ್ತೆ ಬದಿಗಳಲ್ಲಿ ನಗರಸಭೆ ವತಿಯಿಂದ ಸಸಿಗಳನ್ನು ನೆಟ್ಟು ನಗರವನ್ನು ಹಸಿರೀಕರಣ ಮಾಡಬೇಕು. ಲಕ್ಷ್ಮಣತೀರ್ಥ ನದಿ ಶುದ್ಧೀಕರಣ ಆಗಬೇಕು. ನಗರದಲ್ಲಿರುವ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಬೇಕು ಎಂದರು. ದಲಿತ ಮುಖಂಡರಾದ ಬಸವಲಿಂಗಯ್ಯ, ಪ್ರಗತಿಪರ ಚಿಂತಕರಾದ ಶ್ರೀ ನವೀನ್ ರೈ ಮಾತನಾಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಗಣೇಶ್ ಕುಮಾರಸ್ವಾಮಿ ತಾಲೂಕಿನ ಪ್ರಗತಿಪರ ಸಂಘಟನೆಯ ಎಲ್ಲಾ ಮುಖಂಡರು ನನ್ನ ಮೇಲೆ ವಿಶ್ವಾಸ, ಪ್ರೀತಿಯಿಟ್ಟು ನನ್ನ ಮನೆಗೆ ಬಂದು ಪ್ರೀತಿಯಿಂದ ನನ್ನನ್ನು ಸನ್ಮಾನ ಮಾಡಿರುವುದು ನನ್ನ ಜವಾಬ್ದಾರಿ ಹೆಚ್ಚಿಸಿದೆ. ನಾನು ನೋವು ಮತ್ತು ಸಮಸ್ಯೆಯಲ್ಲಿರುವ ಬಡ ಕುಟುಂಬಗಳ ಹತ್ತಿರ ಹೋಗಿ ಅವರಿಗೆ ನೆರವಾಗಬೇಕೆನ್ನುವ ಹಂಬಲವಿದೆ ನನ್ನ ಅವಧಿಯಲ್ಲಿ ಮಲ್ಲಾಡಿಯವರು ಹೇಳಿದ ಹಾಗೆ ಕೆಲವು ಸಮಸ್ಯೆಗಳನ್ನು ಕೈಗೆತ್ತಿಕೊಂಡು ಬಗೆಹರಿಸಲು ಪ್ರಾಮಾಣಿಕವಾದ ಪ್ರಯತ್ನ ಮಾಡಲು ನಿಮ್ಮೆಲ್ಲರ ಸಹಕಾರ ನನಗೆ ಬೇಕು ಎಂದರು.

ದಸಂಸದ ದೇವೇಂದ್ರ ಕುಳುವಾಡಿ, ಬಲ್ಲೇನಹಳ್ಳಿ ಕೆಂಪರಾಜು, ಕಿರಿಜಾಜಿ ಗಜೇಂದ್ರ, ಚಿಲ್ಕುಂದ ವೇಣು, ಅಬ್ದುಲ್ ಮಾಲಿಕ್ ಪಾಷ, ಕೊಳಗಟ್ಟ ಕೃಷ್ಣ, ಆದಿ ಜಾಂಬವ ಸಂಘದ ಆಂಜನೇಯ, ನಯನ ಕ್ಷತ್ರೀಯ ಸಮಾಜದ ಮುಖಂಡ ದೇವರಾಜು, ಭೋವಿ ಸಮಾಜದ ಗಣೇಶ್ ವಿನೋಬಾ ಕಾಲೋನಿ, ವಕೀಲರಾದ ಅಶೋಕ್ ಕಟ್ಟೆಮಳಲವಾಡಿ, ನೆಲ್ಲೂರು ಪಾಲ ಡಾ.ಮಹದೇವ್, ಅಲೆಮಾರಿ ಸಂಘದ ಶೇಖರ ಅಂಬೇಡ್ಕರ್ ನಗರ, ಬೀದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ನಾಗಣ್ಣ ದೇವಾಡಿಗ, ಸೋಮನಹಳ್ಳಿ ಕೆಂಪರಾಜು ಮುಂತಾದವರು ಈ ಸನ್ಮಾನ ಕಾರ್ಯಕ್ರಮದಲ್ಲಿ ಹಾಜರಿದ್ದು ಅಭಿನಂದಿಸಿದರು.

ಬಸವ ಚಿತ್ತಾರ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ

ನಂಜನಗೂಡು: ಚಿತ್ರಕಲಾ ಸ್ಪರ್ಧೆಗಳು ವಿದ್ಯಾರ್ಥಿಗಳ ಪ್ರತಿಭೆ ಪ್ರದರ್ಶಿಸಲು ಉತ್ತಮ ಸದಾವಕಾಶ, ವಿದ್ಯಾರ್ಥಿಗಳು ಈ ಕಾರ್ಯಕ್ರಮವನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶನ ಮಾಡಬೇಕು ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಹೇಳಿದರು.

ನಗರದ ನೀಲಕಂಠೇಶ್ವರ ಶಾಲೆಯಲ್ಲಿ ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವೇಶ್ವರ ರವರ ಜಯಂತಿಯ ಅಂಗವಾಗಿ ಕಾಂಗ್ರೆಸ್ ನಂಜನಗೂಡು ಬ್ರಿಗೇಡ್ ವತಿಯಿಂದ ಏರ್ಪಡಿಸಲಾಗಿದ್ದ 'ಬಸವ ಚಿತ್ತಾರ' ಚಿತ್ರಕಲಾ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು.



ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ವಿಶ್ವಗುರು ಬಸವಣ್ಣನವರ ಜಯಂತಿಯ ಅಂಗವಾಗಿ ಕಾಂಗ್ರೆಸ್ ನಂಜನಗೂಡು ಬ್ರಿಗೇಡ್ ವತಿಯಿಂದ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗುವ ಕಾರ್ಯಕ್ರಮವನ್ನು ರೂಪಿಸಿರುವುದು ಉತ್ತಮ ಬೆಳವಣಿಗೆಯಾಗಿದೆ, ಈ ಕಾರ್ಯಕ್ರಮದ ಮೂಲಕ ಬಸವಣ್ಣನವರ ಆಶಯದಂತೆ ವಿದ್ಯಾರ್ಥಿಗಳಲ್ಲಿ ಸ್ನೇಹ ಭಾವನೆ ಮೂಡಿ, ಎಲ್ಲರೂ ಒಂದೇ ಎಂಬ ಸಮಾನತೆ ಭಾವನೆ ಬೆಳೆಯಲು ಸಹಕಾರಿಯಾಗಿದೆ, ಜೊತೆಗೆ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಬೆಳೆಯಲಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಮಾತನಾಡಿ ವಿದ್ಯಾರ್ಥಿಗಳು ಪಠ್ಯ ವಿಷಯದ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೂ ಆದ್ಯತೆ ನೀಡಬೇಕು, ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ನಿಮ್ಮ ಪ್ರತಿಭೆಯನ್ನು ಪ್ರದರ್ಶನ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ರೋಟರಿ ಶಾಲೆಯ ಮಹತಿ, ನೀಲಕಂಠೇಶ್ವರ ಶಾಲೆಯ ಸಾರಾ ಸದಾಫ್, ಯುನಿಟಿ ಶಾಲೆಯ ಚೇತನ್, ಸಿಟಿಜನ್ ಶಾಲೆಯ ವಿದ್ಯಾರ್ಥಿನಿ ಮಿನ್ಹಾ ಮೆಹರನ್, ಸೈಯದಾ ಜೋಹಿಯ, ಶ್ರೇಯ ರವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ವೀರಶೈವ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ, ಅಖಿಲ ಭಾರತ ವೀರಶೈವ ಮಹಾಸಭಾ ನಗರಾಧ್ಯಕ್ಷ ಎನ್. ಮಹೇಶ್, ನಗರಸಭಾ ಸದಸ್ಯರಾದ ಮಹದೇವ ಪ್ರಸಾದ್, ಇತರರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರತಿಭಾವಂತ ಮಕ್ಕಳ ವೇದಿಕೆ

ತಿ.ನರಸೀಪುರ ಮೇ 24–ಶಾರದಾ ನೃತ್ಯ ಶಾಲೆ ತಿ.ನರಸೀಪುರದಲ್ಲಿ ಹಲವಾರು ವರ್ಷಗಳಿಂದಲೂ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಪ್ರತಿಭಾವಂತ ಮಕ್ಕಳ ಪ್ರತಿಭೆಯ ಅನಾವರಣಕ್ಕೆ ಸಾಕ್ಷಿಯಾಗಿದೆ. ಚಿಕ್ಕವಯಸ್ಸಿನಿಂದಲೇ ಮಕ್ಕಳು ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಸೇವಾ ಮನೋಭಾವನೆಯಂಥ ಮಹ ತ್ಕಾರ್ಯ ಸಾಧನೆಗೆ ಬುನಾದಿ ಎಂದು ಡಾ.ರೇವಣ್ಣ ತಿಳಿಸಿದರು

ಪಟ್ಟಣದ ಗುರು ಭವನದಲ್ಲಿ ನಡೆದ ಶ್ರೀ ಶಾರದಾ ನೃತ್ಯ ಶಾಲೆ ವತಿಯಿಂದ ಆಯೋಜಿಸಲಾಗಿದ್ದ 10ನೇ ವರ್ಷದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು ಮಕ್ಕಳು ಪೋಷಕರ ಸಹಕಾರ ಸಿಕ್ಕಿದರೆ ಎಂತಹ ಸಾಧನೆ ಮಾಡಲೂ ಸಿದ್ಧರಿರುತ್ತಾರೆ ಅದಕ್ಕೆ ಈ ಸಮಾರೋಪ ಕಾರ್ಯಕ್ರಮದಲ್ಲಿ ವಿವಿಧ ವೇಷ ಭೂಷಣಗಳನ್ನು ಧರಿಸಿ ಪ್ರತಿಭಾ ಅನಾವರಣಕ್ಕೆ ಕಾತರತೆಯಿಂದ ಕಾಯುತ್ತಿರುವುದೇ ಸಾಕ್ಷಿ ಎಂದರು.

ಶಾರದಾ ಅಕಾಡೆಮಿಯವರ ಬೇಸಿಗೆ ಶಿಬಿರದ



ಪಟ್ಟಣದ ಗುರು ಭವನದಲ್ಲಿ ನಡೆದ ಶ್ರೀ ಶಾರದಾ ನೃತ್ಯ ಶಾಲೆ ವತಿಯಿಂದ ಆಯೋಜನೆಗೊಂಡಿದ್ದ 10ನೇ ವರ್ಷದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳ ಸನ್ಮಾನಿಸಿದರು

ಈ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿರುವ ಪೋಷಕರ ಸಂಖ್ಯೆಯನ್ನು ಗಮನಿಸಿದರೆ ಇದೊಂದು ಸಾಂಸ್ಕೃತಿಕ ಸ್ಪರ್ಧಾ ಜಗತ್ತೆಂಬುದು ಸಾಬೀತಾಗುತ್ತಿದೆ ಕೇವಲ ಓದು–ಬರಹದಿಂದ ರೂಪಿತಗೊಳ್ಳುವ ಬದುಕು ನಮ್ಮನ್ನು ಸಂಪಾದನೆಗೆ ದೂಡಿದರೆ ಬಹುರೂಪಿ ಚಟುವಟಿಕೆಗಳು ವ್ಯಕ್ತಿಯ ಶ್ರೇಷ್ಠ ವ್ಯಕ್ತಿತ್ವ ರೂಪಿಸಿಕೊಳ್ಳಲು ಅಡಿಪಾಯ ಎಂದರು

ಇದೇ ಸಂದರ್ಭದಲ್ಲಿ ಕುರುಬೂರು ಖೋ ಖೋ ತಂಡದ ಆಟಗಾರ್ತಿಯರು ಹಾಗೂ ರಂಗೋಲಿ ಸ್ಪರ್ಧೆಯ ವಿಜೇತರುಗಳನ್ನು ಸನ್ಮಾನಿಸಲಾಯಿತು.

ದಿವ್ಯ ಸಾನಿಧ್ಯವನ್ನು ವಾಟಾಳ್ ಮಠದ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿ, ವಹಿಸಿದ್ದರು, ಬಿ ರಾಚಯ್ಯ ಉಪಸ್ಥಿತಿಯಲ್ಲಿ, ವಿಶ್ವ ಖೋ ಖೋ ಚಾಂಪಿಯನ್ ಚೈತ್ರ, ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಎಂ.ಸಿದ್ದಲಿಂಗಸ್ವಾಮಿ, ಪೂಜಿತ್ ಮೆಡಿಕಲ್ ಮಾಲೀಕ ಕುಮಾರ್, ರಂಗೂ ನಾಯಕ, ಬೃಂದಾ ಆಸ್ಪತ್ರೆ ಮಾಲೀಕ ಗುರು, ಮಲ್ಲಿಕಾರ್ಜುನ, ತೋಟದಪ್ಪ ಬಸವರಾಜು, ಅನಾಥ ಶವ ಮುಕ್ತಿಧಾತ ಡಾ. ಮಾದೇಶ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಸೇವಾಶ್ರಯ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಆರ್. ಮಣಿಕಂಠರಾಜ್ ಗೌಡ, ಶನೇಶ್ವರ ದೇವ ಸ್ಥಾನದ ಗುಡ್ಡಪ್ಪ ಬಸವರಾಜು, ಡಾ.ಪ್ರದೀಪ, ಡಾ. ಪ್ರಜ್ವಲ್, ಡಾ. ಭರತ್, ಅಕ್ಕಿನಾಗಪ್ಪ, ಪುಷ್ಪ, ಡಾನ್ಸ್ ಮಾಸ್ಟರ್ ಬಸವರಾಜು, ಕೀರ್ತನ, ಶ್ರುತಿ, ಡಾನ್ಸ್ ಮಾಸ್ಟರ್ ನಹಾನ್ ಹಾಜರಿದ್ದರು

ಮರು ಮೌಲ್ಯಮಾಪನದಲ್ಲಿ ಹೆಚ್ಚುವರಿ ಅಂಕ ಪಡೆದ ವಿದ್ಯಾರ್ಥಿ ನಿಶ್ಚಯ್

ತಿ.ನರಸೀಪುರ ಮೇ 24– ತಾಲೂಕಿನ ಸೋಸಲೆಯ ಆದರ್ಶ ವಿದ್ಯಾಲಯದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಎಸ್.ನಿಶ್ಚಯ್ ಮರು ಮೌಲ್ಯ ಮಾಪನದಲ್ಲಿ 604 ಅಂಕ ಗಳಿಸಿದ್ದಾರೆ.

ಮೊದಲು ಬಂದಿದ್ದ ಫಲಿತಾಂಶದಲ್ಲಿ 599 ಅಂಕ ಗಳಿಸಿದ್ದು, ನಂತರ ಮರು ಮೌಲ್ಯ ಮಾಪನದಲ್ಲಿ 5 ಅಂಕಗಳನ್ನು ಹೆಚ್ಚುವರಿಯಾಗಿ ಬಂದಿದೆ. ಈತ ಟಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಸಿದ್ದನಹುಂಡಿಯ ನಿವಾಸಿ, ಸಾವಯವ ಕೃಷಿಕ, ದೇಸಿ ಬೀಜ ಸಂರಕ್ಷಕ ಎಸ್.ಆರ್.ಶ್ರೀನಿವಾಸಮೂರ್ತಿ ಹಾಗೂ ವಿ.ಗೀತಾ ದಂಪತಿ ಪುತ್ರ

ಮೈಸೂರು ಮಿತ್ರ

ಐಪಿಎಲ್ ಹಂಗಾಮಾ

ಪಂಜಾಬ್ ಕಿಂಗ್ಸ್ ವಿರುದ್ಧ ಗೆದ್ದು ಅಭಿಯಾನ ಮುಗಿಸಿದ ಡೆಲ್ಲಿ



ಜೈಪುರ, ಮೇ 24(ಎಂಕೆ)– ಸಂಘಟಿತ ಪ್ರದರ್ಶನ ನೀಡಿದ ಡೆಲ್ಲಿ ಕ್ಯಾಪಿಟಲ್ಸ್, ಲೀಗ್ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 6 ವಿಕೆಟ್‌ಗಳ ಜಯ ದಾಖಲಿಸುವ ಮೂಲಕ ಟೂರ್ನಿಗೆ ಗೆಲುವಿನ ವಿದಾಯ ಹೇಳಿದೆ.

ಇಲ್ಲಿನ ಸವಾಯ್ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್, ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 206 ರನ್ ಗಳಿಸಿತು. 34 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸ್ ಸಹಿತ 53 ರನ್ ಗಳಿಸಿದ ನಾಯಕ ಶ್ರೇಯಸ್ ಅಯ್ಯರ್ ಅರ್ಧ ಶತಕ ದಾಖಲಿಸಿದರೆ, ಮಾರ್ಕಸ್ ಸ್ಟೊಯಿನಿಸ್ ಕೇವಲ 16 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್ ಸಹಿತ 44 ರನ್ ಬಾರಿಸಿದರು.

ಪ್ರಭಸಿಮ್ರನ್ ಸಿಂಗ್ 28 ರನ್, ಜೋಶ್ ಇಂಗ್ಲಿಸ್ 32 ರನ್‌ಗಳಿಸಿ ತಂಡ ಮೊತ್ತ ಇನ್ನೂರರ ಗಡಿದಾಟಲು ನೆರವಾದರು. ಡೆಲ್ಲಿ ಪರ ಮುಸ್ತಫಿಜುರ್ ರೆಹಮಾನ್ 3 ವಿಕೆಟ್ ಪಡೆದರೆ, ವಿಪ್ರಜ್ ನಿಗಮ್, ಕುಲದೀಪ್ ಯಾದವ್ ತಲಾ 2 ವಿಕೆಟ್ ಪಡೆದರು.

207 ರನ್‌ಗಳ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 4 ವಿಕೆಟ್‌ಗಳನ್ನು ಕಳೆದುಕೊಂಡು ಇನ್ನೂ ಮೂರು ಎಸೆತ ಬಾಕಿ ಇರುವಂತೆಯೇ ಗುರಿ ತಲುಪಿತು. ಕೇವಲ 25 ಎಸೆತಗಳನ್ನು ಎದುರಿಸಿದ ಸಮೀರ್ ರಿಜ್ವಿ, 3 ಬೌಂಡರಿ, 5 ಭರ್ಜರಿ ಸಿಕ್ಸರ್ ಸಹಿತ ಅಜೇಯ 58 ರನ್ ಬಾರಿಸುವ ಮೂಲಕ ತಮ್ಮ ತಂಡದ ಗೆಲುವಿಗೆ ಕೊಡುಗೆ ನೀಡಿದರು.

ಉತ್ತಮ ಆರಂಭ ನೀಡಿದ ಕೆ.ಎಲ್. ರಾಹುಲ್(35 ರನ್), ನಾಯಕ ಫಾಫ್ ಡು ಪ್ಲೆಸಿಸ್(23 ರನ್) 55 ರನ್ ಜೊತೆಯಾಟವಾಡಿದರು. ನಂತರ ಬಂದ ಕರುಣ್ ನಾಯರ್, 27 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸ್ ಸಹಿತ 44 ರನ್ ಬಾರಿಸಿದರೆ, ಸೆಡಿಕುಲ್ಲಾ ಅಟಲ್ 22 ರನ್ ಗಳಿಸಿದರು. ಅಂತಿಮವಾಗಿ 19.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 208 ರನ್ ಗಳಿಸುವ ಮೂಲಕ 6 ವಿಕೆಟ್‌ಗಳ ಗೆಲುವಿನೊಂದಿಗೆ ಡೆಲ್ಲಿ ಕ್ಯಾಪಿಟಲ್ಸ್, ಪ್ರಸಕ್ತ ವರ್ಷದ ಐಪಿಎಲ್ ಪಂದ್ಯಾವಳಿಗೆ ವಿದಾಯ ಹೇಳಿತು. ಬಿರುಸಿನ ಬ್ಯಾಟಿಂಗ್ ಪ್ರದರ್ಶನ ನೀಡಿದ ಸಮೀರ್ ರಿಜ್ವಿ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	13	9	4	0	18
ಪಂಜಾಬ್	13	8	4	1	17
ಬೆಂಗಳೂರು	13	8	4	1	17
ಮುಂಬೈ	13	8	5	0	16
ಡೆಲ್ಲಿ	14	7	6	1	15
ಲಕ್ನೋ	13	6	7	0	12
ಕೊಲ್ಕತ್ತಾ	13	5	6	2	12
ಹೈದರಾಬಾದ್	13	5	7	1	11
ರಾಜಸ್ಥಾನ್	14	4	10	0	8
ಚೆನ್ನೈ	13	3	10	0	6

ಇಂದಿನ ಪಂದ್ಯಗಳು

ಗುಜರಾತ್ ಟೈಟಾನ್
V/S
ಚೆನ್ನೈ ಸೂಪರ್ ಕಿಂಗ್ಸ್
ಸಮಯ: ಮಧ್ಯಾಹ್ನ 3.30
ಸ್ಥಳ : ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್

ಸನ್‌ರೈಸರ್ಸ್ ಹೈದರಾಬಾದ್
V/S
ಕೊಲ್ಕತ್ತಾ ನೈಟ್ ರೈಡರ್ಸ್
ಸಮಯ: ಸಂಜೆ 7.30
ಸ್ಥಳ : ಅರುಣ್ ಜೆಟ್ಲಿ ಕ್ರೀಡಾಂಗಣ, ದೆಹಲಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡ್ಕನ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಿರಿಕ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ಸೈನೈಡ್ (ಕ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಮೈಸೂರಲ್ಲಿ ಬ್ಯಾಂಕುಗಳ ತಾತ್ಕಾಲಿಕ, ಗುತ್ತಿಗೆ ನೌಕರರ ಸಮಾವೇಶ

ಮೈಸೂರು, ಮೇ24(ಜಿಎ)– ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟ, ಕೆನರಾ ಬ್ಯಾಂಕ್ ಸಬ್ ಸ್ಟಾಫ್ ಯೂನಿಯನ್, ಎಸ್‌ಬಿಐ ಎಂಪ್ಲಾಯೀಸ್ ಯೂನಿಯನ್, ಎಸ್‌ಬಿಐ ಟೆಂಪರರಿ ಸಬ್ ಸ್ಟಾಫ್ ಯೂನಿಯನ್ ವತಿಯಿಂದ ಮೈಸೂರು ಸಿಟಿ ಕೊಅಪ್ ಹೌಸಿಂಗ್ ಸೊಸೈಟಿ ಸಮುದಾಯ ಭವನದಲ್ಲಿ ಮೇ.25ರಂದು 10.30ಕ್ಕೆ ಬ್ಯಾಂಕ್‌ಗಳ ತಾತ್ಕಾಲಿಕ ಮತ್ತು ಗುತ್ತಿಗೆ ನೌಕರರ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟದ ಅಧ್ಯಕ್ಷ ಎಂ.ರಾಮರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಂಕ್‌ಗಳಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ನೌಕರರಿಗೆ ಸರಿಯಾದ ವೇತನ, ಬೋನಸ್ ನೀಡುತ್ತಿಲ್ಲ. ನೌಕರರಿಂದ ಹೆಚ್ಚಿನ ಅವಧಿ ದುಡಿಸಿಕೊಳ್ಳುತ್ತಾರೆ. ರಾಷ್ಟ್ರೀಯ ಹಬ್ಬಗಳು, ಬ್ಯಾಂಕ್ ರಜೆ, ಮತದಾನ ಮಾಡುವ ದಿನಗಳು ಮತ್ತು ಹೆರಿಗೆ ರಜೆಯ ವೇತನವನ್ನು ಎಲ್ಲಾ ಬ್ಯಾಂಕುಗಳಲ್ಲಿ ನೀಡುತ್ತಿಲ್ಲ ಎಂದು ಆರೋಪಿಸಿದರು.

ಸಮಾವೇಶದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್, ಕೆನರಾ ಬ್ಯಾಂಕ್, ಎಸ್‌ಬಿಐ ಸೇರಿದಂತೆ ಎಲ್ಲಾ ಬ್ಯಾಂಕುಗಳಲ್ಲಿ ದುಡಿಯುತ್ತಿರುವ ಎಲ್ಲಾ ತಾತ್ಕಾಲಿಕ ಸಿಬ್ಬಂದಿಗಳು, ಗುತ್ತಿಗೆ ಹಾಗೂ ದಿನಗೂಲಿ ನೌಕರರನ್ನು ತಕ್ಷಣ ಖಾಯಂ ಮಾಡಬೇಕು. ಖಾಯಂ ಸಿಬ್ಬಂದಿಗಳಿಗೆ ನೀಡಲಾಗುವ ವೇತನ ಶ್ರೇಣಿ, ಬ್ಯಾಂಕುಗಳಿಗೆ ನೀಡುವ ವಾರದ ರಾಷ್ಟ್ರೀಯ, ಪಿಎಲ್, ಕ್ಯಾಷುವಲ್, ಹೆರಿಗೆ ರಜೆ ವೇತನ, ಬೋನಸ್ಸು, ಪಿಎಫ್, ನಿವೃತ್ತಿ ವೇತನ ಗ್ರಾಚ್ಯುಯಿಟಿ ಸೇರಿದಂತೆ ಎಲ್ಲಾ ಸವಲತ್ತುಗಳನ್ನು ಬಾಕಿ ಸಹಿತ ನೀಡಬೇಕು. ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದು ಮಾಡಬೇಕು. ಯೂನಿಯನ್‌ಗಳ ಮೇಲೆ ಬ್ಯಾಂಕ್ ಅಧಿಕಾರಿಗಳು ಹಾಕಿರುವ ಪ್ರಕರಣಗಳನ್ನು ಹಿಂತೆಗೆದುಕೊಳ್ಳಬೇಕು ಇತ್ಯಾದಿ ಬೇಡಿಕೆಗಳನ್ನು ಮಂಡಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್‌ಬಿಐ ಎಂಪ್ಲಾಯೀಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ, ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಅಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ಯೋಗನರಸಿಂಹ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಡಾ.ಅಂಬೇಡ್ಕರ್ ಜನ್ಮದಿನ ಆಚರಣೆ



ಮೈಸೂರು, ಮೇ24(ಜಿಎ)–ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘ, ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘ, ಪರಿಶಿಷ್ಟ ಜಾತಿ ನಾಗರೀಕ ಕ್ಷೇಮಾಭಿವೃದ್ಧಿ ಸಂಘ, ಬುದ್ಧ ಬಳಗ, ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ, ಪರಿಶಿಷ್ಟ ಜನಾಂಗದ(ಬಲಗೈ) ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕುವೆಂಪುನಗರ ಬಡಾವಣೆಯಲ್ಲಿರುವ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಮೇ.26ರಂದು ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮದಿನವನ್ನು ಆಚರಿಸಲಾಗುವುದು ಎಂದು ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಾ.ಹಿರಿಯಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.30ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕ ಎ.ಆರ್.ಕೃಷ್ಣಮೂರ್ತಿ, ವಿಧಾನ ಪರಿಷತ್ತಿನ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರ ಶೇಖರ್ ಪಾಲ್ಗೊಳ್ಳಲಿದ್ದಾರೆ. ಶಾಸಕ ಜಿ.ಟಿ.ದೇವೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಮಾರಂಭದಲ್ಲಿ ಗೌತಮ ಸಹಕಾರಿ ಆಸ್ಪತ್ರೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಸ್. ರಂಗನಾಥಯ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿವೃತ್ತ ನಿರ್ದೇಶಕರಾದ ಡಾ.ಬಿ.ಎಸ್. ಪುಷ್ಪಲತಾ ಕೆ.ಅಪ್ಪಾಜಿ ಅವರನ್ನು ಸನ್ಮಾನಿಸಲಾಗುವುದು. ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ ಶೇ.96 ಅಂಕಗಳನ್ನು ಪಡೆದ ಚಾಮರಾಜನಗರ ಜಿಲ್ಲೆ ಸೋಮವಾರ ಪೇಟೆಯ ಅಪೇಕ್ಷಾ ಹಾಗೂ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಶೇ.98 ಅಂಕಗಳನ್ನು ಪಡೆದ ಮೈಸೂರಿನ ರಾಮಕೃಷ್ಣನಗರ ಬಡಾವಣೆಯ ಪ್ರಜ್ಞಾ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಬುದ್ಧ ಬಳಗದ ಅಧ್ಯಕ್ಷ ಡಾ.ಮಲ್ಲಿಕಾರ್ಜುನ್, ಡಾ.ಬಿ.ಆರ್. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ಆರ್.ಸಿ.ಸಿದ್ದರಾಜು, ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಕೆ.ಅಪ್ಪಾಜಿ, ಕಾರ್ಯದರ್ಶಿ ಎಸ್.ಚೌಡಯ್ಯ, ಸಂಘಟನಾ ಕಾರ್ಯದರ್ಶಿ ಪುರುಷೋತ್ತಮ್, ಖಜಾಂಚಿ ಶಿವಮಲ್ಲು, ಸಹ ಕಾರ್ಯದರ್ಶಿ ಜೆ.ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 24– ಮೈಸೂರಿನ ಶ್ರೀ ಮದ್ದಾನೇಶ್ವರ ವಿದ್ಯಾರ್ಥಿ ನಿಲಯದಲ್ಲಿ 2025–26ನೇ ಸಾಲಿನ ಪಿಯುಸಿ, ಡಿಪ್ಲೊಮಾ, ಟಿಸಿಹೆಚ್, ಬಿ.ಎಡ್., ಪದವಿ, ಸ್ನಾತಕೋತ್ತರ, ಪ್ಯಾರಾ ಮೆಡಿಕಲ್, ಬಿಇ, ಎಂಸಿಎ ಮತ್ತು ನರ್ಸಿಂಗ್ ತರಗತಿಗಳಲ್ಲಿ ಓದುತ್ತಿರುವ ವೀರಶೈವ ವಿದ್ಯಾರ್ಥಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ತಿಂಡಿ, ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಪ್ರವೇಶ ಅರ್ಜಿಗಳನ್ನು ನಿಲಯ ಪಾಲಕರು, ಶ್ರೀ ಮದ್ದಾನೇಶ್ವರ ವಿದ್ಯಾರ್ಥಿ ನಿಲಯ, ಬಿಲ್ವ ಭವನ, ಹರಿಶ್ಚಂದ್ರ ರಸ್ತೆ ಫೋರ್ಟ್ ಮೊಹಲ್ಲಾ ಇಲ್ಲಿ ಕಚೇರಿ ವೇಳೆ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ಮೊ. 9480734131, 8884565185 ಸಂಪರ್ಕಿಸಬಹುದು.

ರಸ್ತೆಯಲ್ಲಿನ ಭಾರೀ ಗುಂಡಿಗಳ ನಡುವೆ ವಾಹನ ಸವಾರರು ಹೈರಾಣು

- ಮೈಸೂರಿನ ಬೋಗಾದಿ–ಚದುರಂಗ ರಸ್ತೆಗಳ ಸಂದಿಸುವ ಸಿಗ್ನಲ್ ಬಳಿ ದುಸ್ಥಿತಿ
- ಮಣ್ಣಾದರೂ ಹಾಕಿ ಗುಂಡಿ ಮುಚ್ಚುವ ಕನಿಷ್ಠ ಕ್ರಮಕ್ಕೂ ಮುಂದಾಗದ ಪಾಲಿಕೆ



ಮೈಸೂರಿನ ಬೋಗಾದಿ ರಸ್ತೆಯಲ್ಲಿ ಸ್ಪೀಚ್ ಅಂಡ್ ಹೀಯರಿಂಗ್ ಸಿಗ್ನಲ್ ಸಮೀಪ ಉಂಟಾಗಿರುವ ಭಾರೀ ಗುಂಡಿಗಳ ನಡುವೆ ಪ್ರಯಾಸದಿಂದ ಸಾರಿಗೆ ಬಸ್‌ಗಳು ಹಾಗೂ ವಾಹನ ಸವಾರರು ಸಂಚರಿಸುತ್ತಿರುವುದು.



ಗುಂಡಿಗಳ ನಡುವೆ ಸರ್ಕಸ್ ಮಾಡಿ ಹಾದು ಹೋಗುತ್ತಿರುವ ದ್ವಿಚಕ್ರ ವಾಹನ ಸವಾರರು

ಮೈಸೂರು, ಮೇ 24(ಪಿಎಂ)– ನಾಲ್ಕೈದು ಭಾರೀ ಗುಂಡಿಗಳು ವಾಹನ ಸವಾರರು ಸರಾಗವಾಗಿ ಸಾಗಲಾಗದಂತೆ ಸಾವಲೊಡ್ಡುತ್ತಿವೆ. ಒಂದು ಗುಂಡಿಯಂತೂ ಎಲ್ಲದಕ್ಕಿಂತಲೂ ಭಾರೀ ಪ್ರಮಾಣದಲ್ಲೇ ಇಲ್ಲಿ ನಿರ್ಮಾಣವಾಗಿದ್ದು, ಮಳೆ ಬಂದಾಗ ಇದರಲ್ಲಿ ನೀರು ಆವರಿಸಿ, ಅದು ಗೋಚರಿಸದ ಪರಿಣಾಮ ಸವಾರರು ಸಂಕಷ್ಟ ಎದುರಿಸುತ್ತಿದ್ದಾರೆ. ಇಲ್ಲಿ ಫುಟ್‌ಪಾತ್ ವ್ಯವಸ್ಥೆ ಸಹ ಇಲ್ಲವಾಗಿದ್ದು, ರಸ್ತೆಬದಿಯ ಪಾದಚಾರಿ ಮಾರ್ಗದಲ್ಲಿ ಗಿಡಗಂಟಿ ಬೆಳೆದು ನಿಂತಿವೆ.

ಮೈಸೂರು ನಗರದ ಪ್ರಮುಖ ವೃತ್ತದ ಸಮೀಪ ಇಂತಹ ದುಸ್ಥಿತಿ ಉಂಟಾಗಿದ್ದರೂ ಮೈಸೂರು ಮಹಾನಗರ ಪಾಲಿಕೆ ಕಣ್ಮುಚ್ಚಿ ಕುಳಿತಿದೆ. ಹೌದು, ಬೋಗಾದಿ ರಸ್ತೆಯಲ್ಲಿ ದಿ.ಶಂಕರ್‌ನಾಗ್ ವೃತ್ತದ (ಸ್ಪೀಚ್ ಅಂಡ್ ಹೀಯರಿಂಗ್ ಸಿಗ್ನಲ್) ಸಮೀಪದಲ್ಲಿ ನಾಲ್ಕೈದು ಗುಂಡಿಗಳು ನಿರ್ಮಾಣಗೊಂಡು ತಿಂಗಳುಗಳೇ ಕಳೆಯುತ್ತಿದ್ದರೂ ಅವುಗಳಿಗೆ ಒಂದಿಷ್ಟು ಮಣ್ಣಾದರೂ ಹಾಕಿ ಮುಚ್ಚುವ ಕನಿಷ್ಠ ಕ್ರಮಕ್ಕೂ ಪಾಲಿಕೆ ಮುಂದಾಗಿಲ್ಲ.

ಪಾದಚಾರಿ ಮಾರ್ಗವೂ ಗುಂಡಿಮಯ; ಮಳೆ ಇಲ್ಲವಾದರೂ ಈ ಗುಂಡಿಗಳು ಜಲಮಯ!

ಸದರಿ ಸಿಗ್ನಲ್ ಬಳಿಯ ಬೋಗಾದಿ ರಸ್ತೆಯಲ್ಲಿ ಫುಟ್‌ಪಾತ್ ಇಲ್ಲದ ಕಾರಣ ರಸ್ತೆಬದಿಯಲ್ಲೂ (ಪಾದಚಾರಿ ಮಾರ್ಗ) ಗುಂಡಿಗಳು ನಿರ್ಮಾಣಗೊಂಡಿವೆ. ನಗರದಲ್ಲಿ ಮಳೆ ಬಂದು ದಿನಗಳೇ ಕಳೆದರೂ ಇಲ್ಲಿರುವ ಗುಂಡಿಗಳಲ್ಲಿ ಮಳೆ ನೀರು ಹಾಗೆ ನಿಲ್ಲುವ ಸ್ಥಿತಿ ಇದೆ. ಕೆಸರಿನ ನಡುವೆ ಪಾದಚಾರಿಗಳು ಸಂಚರಿಸಲು ಕಿರಿಕಿರಿ ಅನುಭವಿಸಬೇಕಾಗಿದೆ. ಇನ್ನು ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್‌ಐಇ) ಕಾಂಪೌಂಡ್‌ಗೆ ಹೊಂದಿಕೊಂಡಂತೆ ಈ ರಸ್ತೆಬದಿಯಲ್ಲಿ ಮಳೆ ನೀರು ಚರಂಡಿ ಇದ್ದರೂ ಪ್ರಯೋಜನಕ್ಕೆ ಬಾರದಾಗಿದೆ. ಏಕೆಂದರೆ ಇಲ್ಲಿನ ಮಳೆ ನೀರು ಚರಂಡಿಯಲ್ಲಿ ಗಿಡಗಂಟಿ ಬೆಳೆದು ನಿಂತಿದ್ದು, ಜೊತೆಗೆ ಪ್ಲಾಸ್ಟಿಕ್ ಸೇರಿದಂತೆ ಇನ್ನಿತರ ತ್ಯಾಜ್ಯಗಳು ಬಿದ್ದಿವೆ. ಇನ್ನು ಕೆಲ ಭಾಗದ ಮಳೆ ನೀರು ಚರಂಡಿಯು ಮಣ್ಣಿನಿಂದ ಮುಚ್ಚಿ ಹೋಗಿರುವುದು ಮಾತ್ರವಲ್ಲದೆ, ಆ ಮಣ್ಣಿನ ಮೇಲೆ ಗಿಡಗಂಟಿಗಳು ಬೆಳೆದುಕೊಂಡಿವೆ. ಹೀಗಾಗಿ ಮಳೆಯಾದ ಸಂದರ್ಭದಲ್ಲಿ ರಸ್ತೆ ಮತ್ತು ರಸ್ತೆಬದಿ ಜಲಾವೃತವಾಗುವ ಮೂಲಕ ನಾಗರಿಕರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ.

ಬೋಗಾದಿ ಕಡೆಯಿಂದ ಮೈಸೂರು ನಗರದತ್ತ ಬರುವಾಗ ಸ್ಪೀಚ್ ಅಂಡ್ ಹೀಯರಿಂಗ್ ಸರ್ಕಲ್ ತಲುಪಲು ಸುಮಾರು 200 ಮೀಟರ್ ದೂರದಿಂದಲೇ ಹಳ್ಳಗಳ ದರ್ಶನ ಶುರುವಾಗುತ್ತದೆ. ವೇಗವಾಗಿ ಬರುವ ವಾಹನ ಸವಾರರಿಗೆ ಇದ್ದಕ್ಕಿದ್ದಂತೆ ಎದುರಾಗುವ ಈ ಗುಂಡಿಗಳನ್ನು ತಪ್ಪಿಸಿ ವಾಹನ ಚಾಲನೆ ಮಾಡುವುದು ಸವಾಲೇ ಸರಿ. ಒಂದು ವೇಳೆ ವಾಹನದ ವೇಗ ನಿಯಂತ್ರಿಸದಿದ್ದರೆ ವಾಹನದ ಚಕ್ರಗಳು ಹಳ್ಳಕ್ಕೆ ರಭಸದಲ್ಲಿ ಇಳಿಯಲಿದ್ದು, ಇಂತಹ ಸನ್ನಿವೇಶದಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಅನಾಹುತ ತಪ್ಪಿದ್ದಲ್ಲ. ವೇಗವಾಗಿ ಬಂದು ಹಳ್ಳ ಕಂಡು ವಾಹನವನ್ನು ಅಕ್ಕಪಕ್ಕಕ್ಕೆ ತಿರುಗಿಸಿದರೆ ಹಿಂಬದಿಯಲ್ಲಿ ಬರುವ ವಾಹನಗಳು ಗುದ್ದುವ ಸಾಧ್ಯತೆಯೂ ಹೆಚ್ಚಾಗಿದೆ.

ಈ ಎಲ್ಲಾ ಗುಂಡಿಗಳಿಗಿಂತಲೂ ಅತ್ಯಂತ ಅಪಾಯಕಾರಿ ಹಳ್ಳ ಒಂದು ಈ ಸಿಗ್ನಲ್ ಸಮೀಪದಲ್ಲಿರುವ ಪ್ರಯಾಣಿಕರ ಬಸ್ ತಂಗುದಾಣದ ಸನಿಹದಲ್ಲಿದೆ. ಇದು ರಸ್ತೆ ತುದಿ ಒಳಗೊಂಡಂತೆ ಸುಮಾರು ಮಧ್ಯಭಾಗದವರೆಗೂ ಇದ್ದು, ಈ ಭಾರೀ ಗುಂಡಿ ವಾಹನ ಸವಾರರಿಗೆ ಮಾತ್ರವಲ್ಲ, ಪಾದಚಾರಿಗಳಿಗೂ ಸವಾಲಾಗಿದೆ. ಈ ಗುಂಡಿಗಳನ್ನು ತಪ್ಪಿಸಿ ಮುಂದೆ ಸಾಗುವಲ್ಲಿ ದ್ವಿಚಕ್ರ ವಾಹನ ಸವಾರರಂತೂ ಮೈಯಲ್ಲಾ ಕಣ್ಣಾಗಿರಬೇಕು. ಇಲ್ಲವಾದರೆ ಜೀವಕ್ಕೆ ಸಂಚಕಾರ ಉಂಟಾಗಲಿದೆ.

ವಾಹನ ದಟ್ಟಣೆ: ಬೋಗಾದಿ ರಸ್ತೆ ಹಾಗೂ ಚದುರಂಗ ರಸ್ತೆ (ಜೆಸಿ ಕಾಲೇಜು ರಸ್ತೆ) ಸಂದಿಸುವ ಈ ಸಿಗ್ನಲ್‌ನಲ್ಲಿ ದಿನವಿಡೀ ಭಾರೀ ವಾಹನ ದಟ್ಟಣೆ ಇದ್ದೇ ಇರುತ್ತದೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗೆ ಮಕ್ಕಳನ್ನು ಕರೆದೊಯ್ಯುವ ಪೋಷಕರು ಹಾಗೂ ಈ ಸಂಸ್ಥೆಯ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪ್ರಾದೇಶಿಕ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ, ಜೆಸಿ ಕಾಲೇಜು ಸೇರಿದಂತೆ ಇನ್ನಿತರ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಪ್ರತಿದಿನ ಇಲ್ಲಿ ಹೆಚ್ಚಾಗಿ ಸಂಚರಿಸುತ್ತಾರೆ. ಇನ್ನು ಬೋಗಾದಿ ಗ್ರಾಮ, ಬೋಗಾದಿ 2ನೇ ಹಂತ ಸೇರಿದಂತೆ ವಿವಿಧೆಡೆಯಿಂದಲೂ ನಗರಕ್ಕೆ ಈ ಸಿಗ್ನಲ್ ಮೂಲಕ ಸಾಗುವವರ ಸಂಖ್ಯೆ ಸಹ ದಿನನಿತ್ಯವೂ ಕಡಿಮೆಯೇನಿಲ್ಲ.

ಭಾರತೀಯ ಅಂಚೆ ಇಲಾಖೆ ಹೊರ ತಂದಿರುವ ಮೈಸೂರಿನ ದೊಡ್ಡ ಗಡಿಯಾರದ ಶಾಶ್ವತ ಚಿತ್ರಾತ್ಮಕ ಮುದ್ರೆ ಬಿಡುಗಡೆ



ಮೈಸೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರಿನ ದೊಡ್ಡ ಗಡಿಯಾರದ ಶಾಶ್ವತ ಚಿತ್ರಾತ್ಮಕ ಮುದ್ರೆ ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್ ಇದನ್ನು ಅನಾವರಣಗೊಳಿಸಿದರು.

ಮೈಸೂರು, ಮೇ24(ಜಿಎ)–ಭಾರತೀಯ ಅಂಚೆ ಇಲಾಖೆ ಹೊರತಂದಿರುವ ಮೈಸೂರಿನ ದೊಡ್ಡ ಗಡಿಯಾರ (ಸಿಲ್ವರ್ ಜ್ಯುಬಿಲಿ ಕ್ಲಾಕ್ ಟವರ್)ದ ಶಾಶ್ವತ ಚಿತ್ರಾತ್ಮಕ ಮುದ್ರೆ (Permanent Pictorial cancellation)ಯನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್ ಇದನ್ನು ಅನಾವರಣಗೊಳಿಸಿದರು.

ನಂತರ ಮಾತನಾಡಿದ ಅವರು, ಶಾಶ್ವತ ಚಿತ್ರಾತ್ಮಕ ಮುದ್ರೆಗಳು ಪ್ರವಾಸಿಗರನ್ನು ಆಕರ್ಷಿಸುವ ಜೊತೆಗೆ ಆ ಸ್ಥಳದ ಪ್ರಾಮುಖ್ಯತೆಯನ್ನು ಜಗತ್ತಿಗೆ ಪ್ರಚಾರಪಡಿಸುತ್ತವೆ. ಮೈಸೂರು ದೇಶದ ಪ್ರಮುಖ ಪ್ರವಾಸಿ ತಾಣವಾಗಿದ್ದು, ಈ ಶಾಶ್ವತ ಚಿತ್ರಾತ್ಮಕ ಮುದ್ರೆಯು ವಿಶ್ವದ ಪ್ರವಾಸಿಗರಿಗೆ ದೊಡ್ಡ ಗಡಿಯಾರದ ಮಹತ್ವವನ್ನು ತಿಳಿಸುತ್ತದೆ ಎಂದರು.

ಮೈಸೂರು ಅಂಚೆ ವಿಭಾಗದ ಉಪ ಅಧೀಕ್ಷಕ ವಿ. ಎಲ್. ನವೀನ್ ಮಾತನಾಡಿ, ದೊಡ್ಡ ಗಡಿಯಾರ ಮೈಸೂರಿನ ಪ್ರಮುಖ ಆಕರ್ಷಣೆಗಳಲ್ಲೊಂದಾಗಿದ್ದು, ನಗರದ ಹೆಗ್ಗುರುತಾಗಿದೆ. ಇನ್ನೆರಡು ವರ್ಷಗಳಲ್ಲಿ ದೊಡ್ಡ ಗಡಿಯಾರ ನಿರ್ಮಾಣವಾಗಿ 100 ವರ್ಷಗಳಾಗಲಿದ್ದು ಅಂಚೆ ಇಲಾಖೆ ವಿಶೇಷ ಲಕೋಟೆ ಅಥವಾ ಚಿತ್ರಿತ ಅಂಚೆ ಕಾರ್ಡ್ ಅನ್ನು ಹೊರತರುವ ಆಶಯವನ್ನು ಹೊಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಪ್ರಧಾನ ಅಂಚೆ ಕಚೇರಿಯ ಹಿರಿಯ ಅಂಚೆ ಪಾಲಕ ಸೋಮಯ್ಯ, ಲಕ್ಷ್ಮೀಪುರಂ ಅಂಚೆ ಕಚೇರಿಯ ಪ್ರಭಾರ ಅಂಚೆ ಪಾಲಕ ಬಿ.ಮಹದೇವಸ್ವಾಮಿ, ಮಾರುಕಟ್ಟೆ ವ್ಯವಸ್ಥಾಪಕ ಡಾ.ಅಮ್ಮಸಂದ್ರ ಸುರೇಶ್, ನಿವೇದಿತಾ, ರೇಣುಕಾ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ

ಮೈಸೂರು, ಮೇ 24– ಮೈಸೂರಿನ ಶಿವಶಕ್ತಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಟ್ರಸ್ಟ್ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಈ ಸಂಬಂಧ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8105079095 ಸಂಪರ್ಕಿಸಬಹುದು.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು